
# ದೆಹಲಿ ಕರ್ನಾಟಕ ಸಂಘದ ಅಭಿಮತ

ಜುಲೈ 2013
ಬೆಲೆ ರೂ. 1



**ಇಳಿದು ಬರಬೇಡ ತಾಯೇ ನೀ ಹೀಗೆ..
ಹರನ ಜಡೆಯಿಂದ...**

# ಕುಣಿಗಲ್ ನಾಗಭೂಷಣ್ ಯುಗ ಅಂತ್ಯ

ಕನ್ನಡ ಚಿತ್ರರಂಗ ಕಂಡ ಅಪರೂಪದ ಸಂಭಾಷಣಾಕಾರ ಕುಣಿಗಲ್ ನಾಗಭೂಷಣ್ ಇವತ್ತು ನಮ್ಮೊಂದಿಗಿಲ್ಲ ಅನ್ನುವ ವಿಷಾದದ ನಡುವೆಯೇ ಈ ಮೇರುಪ್ರತಿಭೆಯ ಬಗ್ಗೆ ಒಂದಿಷ್ಟು ತಿಳಿದುಕೊಳ್ಳೋಣ ಬನ್ನಿ. 1942ರ ಡಿಸೆಂಬರ್ 6ರಂದು ಕುಣಿಗಲ್ಲಿನ ಶ್ರೀಕಂಠಯ್ಯ ಹಾಗೂ ಪುಟ್ಟಮ್ಮ ದಂಪತಿಗಳ ಮಗನಾಗಿ ಹುಟ್ಟಿದ ಇವರಿಗೆ ಬಾಲ್ಯದಿಂದಲೂ ಭಾವಗೀತೆ, ಜನಪದ ಗೀತೆ, ಸಿನಿಮಾ ಗೀತೆಗಳನ್ನು ಹಾಡುವ ಖಯಾಲಿ ಇತ್ತು. ರಾಮಮಂದಿರದಲ್ಲಿ ದೇವರ ನಾಮ ಹಾಡುವುದೆಂದರೆ ಇವರಿಗಿಷ್ಟ. ಇವರ ಹಾಡುಗಳನ್ನು ಕೇಳುವ ಮಿತ್ರ ಬಳಗವೂ ಇತ್ತು. ಅದಕ್ಕಾಗಿಯೇ ಕುಣಿಗಲ್ಲಿನ ಗೋವಿಂದ ಶೆಟ್ಟರು ಅನ್ನುವ ವ್ಯಕ್ತಿ ಇವರಿಗೆ ಹಣ ಕೊಟ್ಟು ಹೊಸಹೊಸದಾಗಿ ಬಿಡುಗಡೆಯಾದ ಕನ್ನಡ ಸಿನಿಮಾಗಳನ್ನು ನೋಡಿಕೊಂಡು ಬರುವಂತೆಯೂ, ಆ ಸಿನೆಮಾಗಳ ಹಾಡುಗಳನ್ನು ತಮ್ಮ ಮುಂದೆ ಹಾಡುವಂತೆಯೂ ಪ್ರೇರೇಪಿಸುತ್ತಿದ್ದರಂತೆ.

ಹೀಗೆ ಶುರುವಾದ ಇವರ ಸಿನಿಮಾ ಹುಚ್ಚಿಗೆ ಬೇರೆ ತೆರನಾದ ದಿಕ್ಕು ಒದಗಿ ಬಂದದ್ದು 'ವಿಜಯನಗರದ ವೀರಪುತ್ರ' ಚಿತ್ರ ಬಿಡುಗಡೆಯಾದ ಸಂದರ್ಭದಲ್ಲಿ. ಆ ಚಿತ್ರ ಕುಣಿಗಲ್ಲಿನ ಚಿತ್ರಮಂದಿರವೊಂದರಲ್ಲಿ ಬಿಡುಗಡೆಯಾದಾಗ ಮೊದಲ ದಿನದ ಮೊದಲ ಪ್ರದರ್ಶನದ ಮೊದಲ ಟಿಕೇಟು ಕೊಂಡುಕೊಂಡದ್ದು ನಾಗಭೂಷಣ್‌ರವರೇ. ಅದನ್ನು ಗಮನಿಸಿದ ಆರ್. ನಾಗೇಂದ್ರರಾಯರು 'ಮೊದಲ ಟಿಕೇಟು ನೀನೆ ತಗೊಂಡಿದೀಯ, ನೋಡೋಣ ಸಿನಿಮಾ ಏನಾಗುತ್ತೋ!' ಅಂತ ಗಾಬರಿಪಡಿಸಿದಾಗ ತಕ್ಷಣ ಟಿಕೇಟಿನ ಹಿಂದೆ ಅವರ ಆಟೋಗ್ರಾಫ್ ಹಾಕಿಸಿಕೊಂಡರಂತೆ. ಮುಂದೆ ಆ ಸಿನಿಮಾ ಭರ್ಜರಿ ನೂರು ದಿನದ ಪ್ರದರ್ಶನ ಕಂಡಾಗ ಅದೇ ನಾಗೇಂದ್ರ ರಾಯರನ್ನು ಭೇಟಿ ಮಾಡಿ ಜೋಪಾನವಾಗಿಟ್ಟುಕೊಂಡಿದ್ದ ಟಿಕೇಟನ್ನೂ, ಅದರ ಹಿಂದೆ ಇದ್ದ ಆಟೋಗ್ರಾಫನ್ನೂ ತೋರಿಸಿದರಂತೆ. ಅಲ್ಲಿಂದ ಶುರುವಾದ ಅವರ ಒಡನಾಟ ಚಿತ್ರರಂಗ ಸೇರಬೇಕೆಂಬ ಕನಸಿಗೆ ಗರಿ ಮೂಡಿಸಿತು.

ಮುಂದೆ, ಬೆಂಗಳೂರಿನ ಎಸ್. ಜೆ. ಪಾಲಿಟೆಕ್ನಿನಲ್ಲಿ ಸಿನಿಮಾಟೋಗ್ರಫಿ ಡಿಪ್ಲೋಮಾ ಕೋರ್ಸಿಗೆ ಸೇರಿಕೊಂಡಾಗ ಸಿನಿಮಾ ವಾತಾವರಣಕ್ಕೆ ಸಮೀಪವಾದರು. ನಟ ಶ್ರೀನಾಥ್, ಬೆಂಗಳೂರು ನಾಗೇಶ್, ಗೋವಿಂದ ನೆಹಲಾನಿಯರು ಇವರ ಕ್ಲಾಸ್ ಮೇಟುಗಳಾಗಿದ್ದರು. ಅಲ್ಲಿಯೂ ಹಾಡಿ, ಸಂಸ್ಥೆಯಿಂದ ಸ್ಕಾಲರ್ಷಿಪ್ ಪಡೆದು ಫೀಸು ಕಟ್ಟುತ್ತಿದ್ದದ್ದು ಇವರಿಗಿದ್ದ ಹಾಡುಗಾರಿಕೆಗೆ ಸಂದ ಗೌರವ.

ಕೋರ್ಸು ಮುಗಿಯಿತು. ಮುಂದೇನು ಮಾಡಬೇಕೆಂದು ತೋಚದಿದ್ದಾಗ ಮದ್ರಾಸಿನಿಂದ ಗೆಳೆಯ ಬೆಂಗಳೂರು ನಾಗೇಶ್ ಬರೆದ ಕಾಗದ ಬಂತು. ಛಾಯಾಗ್ರಾಹಕನಾಗುವ ಅವಕಾಶವಿರುವುದಾಗಿಯೂ, ಐದು ಸಾವಿರ ಸಂಭಾವನೆ ಸಿಕ್ಕುವುದಾಗಿಯೂ, ತಕ್ಷಣ ಮದ್ರಾಸಿಗೆ ಬರಬೇಕಾಗಿಯೂ ಅದರಲ್ಲಿ ಬರೆದಿತ್ತು. ಪರಿಣಾಮವಾಗಿ 1961ರ ಮೇ 21ರ ಬೆಳಗ್ಗೆ ನಾಗಭೂಷಣ್ ಮದ್ರಾಸು ತಲುಪಿದರು. ಅಲ್ಲಿ ಯಾವ ಅವಕಾಶವಾಗಲೀ, ಐದು ಸಾವಿರ ಸಂಭಾವನೆಯಾಗಲೀ ಇರಲಿಲ್ಲ. ಬದಲಿಗೆ ನಾಗಭೂಷಣ್‌ರನ್ನು ಮದ್ರಾಸಿಗೆ ಕಳಿಸಿಕೊಡಲು ಶ್ರೀಕಂಠಯ್ಯನವರು ನಿರಾಕರಿಸದಿರಲಿ ಅಂತ ಬೆಂಗಳೂರು ನಾಗೇಶ್ ಹೂಡಿದ ತಂತ್ರವಷ್ಟೇ ಆಗಿತ್ತದು.

ಬಂದದ್ದಾಯಿತು. ಹೊಟ್ಟೆಪಾಡಿಗೆ ಏನಾದರೂ ಮಾಡಲೇಬೇಕಾದ ಪ್ರಸಂಗ ಎದುರಾಗಿ ತಮ್ಮ ಹಳೆಯ ಆಸಕ್ತಿಯಾಗಿದ್ದ ಹಾಡುಗಾರಿಕೆಗೆ ಜೀವ ಬರಬಹುದೆಂಬ ಆಶೆ ಹೊತ್ತು ಅನೇಕ ಸಂಗೀತ ನಿರ್ದೇಶಕರ ಮನೆಗಳಿಗೆ ಹೋಗಿ ಹಾಡಲು ಅವಕಾಶ ಕೇಳಲಾರಂಭಿಸಿದರು. ಜಿ. ಕೆ. ವೆಂಕಟೇಶ್, ವಿಜಯ್ ಭಾಸ್ಕರ್ ಮುಂತಾದ ಸಂಗೀತ ನಿರ್ದೇಶಕರಡಿ ಟ್ರ್ಯಾಕ್ ಸಿಂಗರಾಗಿ ಕೆಲಸ ಮಾಡುವ ಸುಯೋಗ ಒದಗಿ ಬಂತು. ಅದೇ ಸಂದರ್ಭದಲ್ಲಿ ರಾಜಾಶಂಕರ್ ಅನ್ನುವ ನಟ ಪರಿಚಯವಾಗಿ ವಾದಿರಾಜರ ಬಳಿ ಕರೆದುಕೊಂಡು ಹೋದರು. ಆ ಮೂಲಕ 'ನಾಂದಿ' ಚಿತ್ರಕ್ಕೆ ಸಹಾಯಕ ನಿರ್ದೇಶಕನಾಗುವ ಅವಕಾಶ ಸಿಕ್ಕಿ ಆಯ ತಪ್ಪಿದ ಬದುಕಿಗೊಂದು ದಿಕ್ಕು ದೊರಕಿತಂತಾಯಿತು. ಮುಖ್ಯವಾಗಿ ಡಾ. ರಾಜಕುಮಾರ್‌ರವರ ಸಖ್ಯ ಲಭಿಸಿದ್ದು ಕುಣಿಗಲ್ ನಾಗಭೂಷಣ್ ಅನ್ನುವ ಹೆಸರು ಕನ್ನಡ ಚಿತ್ರರಂಗದಲ್ಲಿ ಮುಂದೊಂದು ದಿನ ಅನರ್ಘ್ಯರತ್ನದಂತೆ ಹೊಳೆಯಲು ನಾಂದಿಯಾಯಿತೆಂದರೆ ತಪ್ಪಾಗಲಾರದೇನೋ. ಮುಂದೆ, ಅಣ್ಣಾವ್ರು ನಟಿಸಿದ ಸಿಪಾಯಿ ರಾಮು, ಬಾಳ ಬಂಧನ, ಚಕ್ರತೀರ್ಥ, ಕುಲಗೌರವ, ಮೂರೂವರೆ ವಜ್ರ, ನಂದಗೋಕುಲ, ಸ್ವಯಂವರ, ಶ್ರೀನಿವಾಸ ಕಲ್ಯಾಣ, ದಾರಿ ತಪ್ಪಿದ ಮಗ ಸೇರಿದಂತೆ ಸುಮಾರು ನಲವತ್ತೈದು ಚಿತ್ರಗಳಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡುವ ಅವಕಾಶ ಸಿಕ್ಕತು.

ಹೀಗೆ ಪಳಗಿದ ನಾಗಭೂಷಣ್ ರೊಳಗೆ ಸ್ವತಂತ್ರ ನಿರ್ದೇಶಕನಾಗುವ ಕನಸು ಚಿಗಿತದ್ದರಲ್ಲಿ ಅಚ್ಚರಿ ಪಡಬೇಕಿಲ್ಲ. ಆ ದೆಸೆಯಲ್ಲಿ ಉದಯ್ ಕುಮಾರ್ , ರಾಜೇಶ್ ಪ್ರಮುಖ ತಾರಾಗಣದಲ್ಲಿದ್ದ 'ಆಶೀರ್ವಾದ' ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದರು. ಚಿತ್ರ ಬಾಕ್ಸಾಫೀಸಿನಲ್ಲಿ ಸೋತಿತು. ಆದರೂ ಛಲ ಬಿಡದೆ ಎರಡನೇ ಚಿತ್ರಕ್ಕೆ ಕೈ ಹಾಕಿ 'ಬಾಳು ಜೇನು' ಅಂತ ಹೆಸರಿಟ್ಟರು. ಈ ಚಿತ್ರದ ವಿಶೇಷವೆಂದರೆ ಸೂಪರ್ ಸ್ಟಾರ್ ರಜನಿಕಾಂತ್ ಮೊಟ್ಟಮೊದಲಬಾರಿಗೆ ಬಣ್ಣ ಹಚ್ಚಿ 1116 ರೂಪಾಯಿಗಳ ಸಂಭಾವನೆ ಪಡೆದದ್ದು. ರಜನಿ ಮಾಡಿದ್ದ ಪಾತ್ರವನ್ನು ಅಂಬರೀಶ್ ಮಾಡಬೇಕಾದ ಸ್ಥಿತಿ ಇತ್ತಾದರೂ ರಜನಿಯವರ ಸ್ಟೈಲ್ ಗೆ ಮಾರುಹೋಗಿದ್ದ ನಾಗಭೂಷಣ್ ಆ ಚಿತ್ರದ ನಿರ್ಮಾಪಕ ಬಾಲನ್ ಮುಂದೆ ರಜನಿಯವರನ್ನು ನಿಲ್ಲಿಸಿ ಒಂದು ಡೈಲಾಗ್ ಕೊಟ್ಟು ಸ್ಟೈಲಿಶ್ ಆಗಿ ಅಭಿನಯಿಸುವಂತೆ ಹುರಿದುಂಬಿಸಿ ಪಾತ್ರ ಕೊಡಿಸಿದ್ದು ಈಗ ಇತಿಹಾಸ. ಈ ಚಿತ್ರವೂ ಗೆಲ್ಲಲಿಲ್ಲ.



ನಿರ್ದೇಶಕರಾಗಿ ಅಷ್ಟೇನೂ ಫಲ ಸಿಕ್ಕದೆ ಕಂಗಾಲಾಗಿದ್ದ ಕುಣಿಗಲ್ ನಾಗಭೂಷಣ್‌ರಿಗೆ ಮರು ಜೀವ ಕೊಟ್ಟದ್ದು ಸಂಭಾಷಣಾಕಾರನಾಗುವ ಯೋಗ. ವೈ. ಆರ್. ಸ್ವಾಮಿ ನಿರ್ದೇಶನದ 'ಮಮತೆ' ಸಂಭಾಶಣಾಕಾರನಾಗಿ ಪ್ರಥಮ ಚಿತ್ರ. ಚಿತ್ರ ನೂರು ದಿನ ಓಡಿತಾದರೂ ನಾಗಭೂಷಣ್ ಸತತ ಐದು ವರ್ಷಗಳ ಕಾಲ ಕೆಲಸವಿಲ್ಲದೇ ಮನೆಯಲ್ಲಿ ಕೂರಬೇಕಾಗಿ ಬಂದದ್ದು ವಿಪರ್ಯಾಸ. ಆರ್ಥಿಕ ಮುಗ್ಗಟ್ಟಿನಿಂದಾಗಿ ಕುಟುಂಬ ನಿರ್ವಹಣೆ ಕಷ್ಟವಾಗಿ 1979ರಲ್ಲಿ ಮದ್ರಾಸು ಬಿಟ್ಟು ಬೆಂಗಳೂರಿಗೆ ಶಿಫ್ಟ್ ಆಗಬೇಕಾಯಿತು.

ಸಂಭಾಷಣಾಕಾರನಾಗಿ ತಮ್ಮ ಎರಡನೇ ಇನ್ನಿಂಗ್ಸ್ ಆರಂಭವಾದದ್ದು ವಿಷ್ಣುವರ್ಧನ್ ಅಭಿನಯದ 'ಸಿಂಹಜೋಡಿ' ಚಿತ್ರದ ಮೂಲಕ. ಚಿತ್ರ ಭರ್ಜರಿಯಾಗಿ ಓಡಿತು. ನಾಗಭೂಷಣ್ ಸಂಭಾಷಣಾಕಾರನಾಗಿ ಬ್ಯುಸಿಯಾದರು. ವಿಷ್ಣು ನಟಿಸಿದ ಸಾಹಸ ಸಿಂಹ, ಸಿಂಹಗರ್ಜನೆ, ಹೃದಯಗೀತೆ, ಚಿನ್ನದಂತ ಮಗ, ನಾಗಕಾಳಭೈರವ, ರುದ್ರನಾಗ, ಊರಿಗೆ ಉಪಕಾರಿ, ಮಹಾಪ್ರಚಂಡರು ಒಳಗೊಂಡಂತೆ ಸರಿಸುಮಾರು ನಲವತ್ತಕ್ಕೂ ಹೆಚ್ಚು ಚಿತ್ರಗಳಿಗೆ ಡೈಲಾಗ್ಸ್ ಬರೆದರು.

ಶಂಕರ್ ನಾಗ್‌ರವರ ಸಾಂಗ್ಲಿಯಾನ, ಸಿ. ಬಿ. ಐ. ಶಂಕರ್, ಅಂಬರೀಶ್ ಅಭಿನಯದ ಸೋಲಿಲ್ಲದ ಸರದಾರ, ಹಸಿದ ಹೆಬ್ಬುಲಿ, ನ್ಯಾಯಕ್ಕಾಗಿ ನಾನು ಥರದ ಆಕ್ಷನ್ ಚಿತ್ರಗಳಿಂದ ಹಿಡಿದು ಜಗ್ಗೇಶ್ ನಟಿಸಿರುವ ಭಂಡ ನನ್ನ ಗಂಡ, ಸೂಪರ್ ನನ್ಮಗ, ಬಲ್ ನನ್ಮಗ, ಬೇಡ ಕೃಷ್ಣ ರಂಗಿನಾಟದಂಥ ಕಾಮಿಡಿ ಚಿತ್ರಗಳವರೆಗೆ ವಿಭಿನ್ನತೆ ಮೆರೆದ ಇವರೊಳಗಿನ ಸಂಭಾಷಣಾಕಾರ ನಿಜಕ್ಕೂ ಬೆರಗು ಮೂಡಿಸುತ್ತಾನೆ. ಇಬ್ಬರ ಹೆಂಡಿರ ಮುದ್ದಿನ ಪೊಲೀಸ್, ಪೊಲೀಸನ ಹೆಂಡತಿ, ಕೊಲ್ಲೂರ ಕಾಳ, ಕಿತ್ತೂರಿನ ಹುಲಿ ಚಿತ್ರಗಳಿಗೆ ಇವರು ಬರೆದ ಮಾತುಗಳಿಂದ ಶಶಿಕುಮಾರ್ ಇಮೇಜೇ ಬದಲಾದದ್ದು ಗಮನಿಸಬೇಕಾದ ಅಂಶ. ಈ ನಿಟ್ಟಿನಲ್ಲಿ ಟೈಗರ್, ಮುತ್ತಿನಂಥ ಮನುಷ್ಯ, ಅಗ್ನಿಪರೀಕ್ಷೆ, ಟೈಗರ್ ಗಂಗು, ಕಲಿಯುಗ ಭೀಮ ಚಿತ್ರಗಳ ಮೂಲಕ ಪ್ರಭಾಕರ್ ಇಮೇಜಿಗೆ ಒಗ್ಗುವಂಥ ಡೈಲಾಗ್ಸ್ ಬರೆದು ಜನಮೆಚ್ಚಿಗೆ ಪಡೆದದ್ದೂ ವಿಶೇಷ.

ಹೀಗೆ, ಸರಿ ಸುಮಾರು ಇನ್ನೂರೈವತ್ತಕ್ಕೂ ಹೆಚ್ಚು ಚಿತ್ರಗಳಿಗೆ ಸಂಭಾಷಣೆ ಬರೆದಿರುವ ಕುಣಿಗಲ್ ನಾಗಭೂಷಣ್ ರಿಗೆ 'ಗೌರಿ ಗಣೇಶ(1991–92)' ಹಾಗೂ 'ಯಾರಿಗೂ ಹೇಳ್ಬೇಡಿ(1994–95) ಚಿತ್ರಗಳಿಗೆ ಕರ್ನಾಟಕ ಸರ್ಕಾರ 'ಅತ್ಯುತ್ತಮ ಸಂಭಾಷಣಾಕಾರ' ರಾಜ್ಯಪ್ರಶಸ್ತಿ ನೀಡಿ ಗೌರವಿಸಿದೆ. ಇವರ–ಅನಂತ್ ನಾಗ್ ಕಾಂಬಿನೇಶನ್ನಿನಲ್ಲಿ ಬಂಡ ಗಣೇಶ ಸೀರೀಸ್ ಸಿನಿಮಾಗಳು ಜನಮಾನಸದಲ್ಲಿ ಹಾಸು ಹೊಕ್ಕಾಗಿರುವುದು ವಿಶಿಷ್ಟ ಸಂಗತಿ. ತಾವು ಕೆಲಸ ಮಾಡಿದ ಚಿತ್ರಗಳಲ್ಲಿ ಸಣ್ಣ ಪುಟ್ಟ ಪಾತ್ರಗಳನ್ನೂ ಮಾಡುವ ಮೂಲಕ ಪ್ರಸಿದ್ಧ ನಟರ ಪಟ್ಟಿಯಲ್ಲೂ ಇವರು ಸೇರಲ್ಪಡುತ್ತಾರೆ.

ಕಳೆದ ನಾಲ್ಕು ದಶಕಗಳಿಂದ ಕನ್ನಡ ಚಿತ್ರರಂಗಕ್ಕೆ ತಮ್ಮದೇ ಆದ ಕೊಡುಗೆ ನೀಡುತ್ತಾ ಬಂದ ಬಹುಮುಖ ಪ್ರತಿಭೆಯಾದ ಕುಣಿಗಲ್ ನಾಗಭೂಷಣ್ ಇದೀಗ ನಾಡಿನ ಜನತೆಯನ್ನು ಅಗಲಿದ್ದರೂ ಅವರ ಅದ್ಭುತ ಕೃತಿಗಳು ಸದಾ ಜೀವಂತ. ಹೊಸ ತಲೆಮಾರಿನ ಸಿನಿಬರಹಗಾರರಿಗೆ ಸ್ಫೂರ್ತಿಯ ಸೆಲೆಯಾಗಿರುವ ಇವರಿಗೊಂದು ಸಲಾಂ.

❍ **ಹೃದಯಶಿವ**

ಕೃಪೆ: ಗೌರಿ ಲಂಕೇಶ್ ಪತ್ರಿಕೆ

**ಜೂನ್ 22ರಂದು ನಿಧನರಾದ ಬಹುಮುಖ ಪ್ರತಿಭೆಯ ಕಲಾವಿದ ಕುಣಿಗಲ್ ನಾಗಭೂಷಣ್ ಅವರ ಆತ್ಮಕ್ಕೆ ಶಾಂತಿ ದೊರೆಯಲೆಂದು ದೆಹಲಿ ಕರ್ನಾಟಕ ಸಂಘದ ಪರವಾಗಿ ಕೋರುತ್ತೇವೆ.**

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 23 ಸಂಚಿಕೆ 10
ಜುಲೈ 2013, ಬೆಲೆ ರೂ. 1

# ಮನದ ಮಾತು

ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಈ ಸಲದ ನಮ್ಮ ವಾರ್ಷಿಕ ಪ್ರವಾಸ ಬದರಿ, ಕೇದಾರ ಕ್ಷೇತ್ರಗಳಿಗೆ ಹೋಗುವುದೆಂದು ಯೋಜಿಸಲಾಗಿತ್ತು. ಜೂನ್ ಮೊದಲ ವಾರದಲ್ಲಿ ದೆಹಲಿಯಿಂದ ಹೊರಡುವುದೂ ನಿಶ್ಚಿತವಾಗಿತ್ತು. ಕೇದಾರ ಕ್ಷೇತ್ರಕ್ಕೆ ಕೊಂಡೊಯ್ಯುವ ಹೆಲಿಕಾಪ್ಟರ್‌ನ ಟಿಕೆಟ್‌ಗಾಗಿ ನಡೆಸಿದ ನಮ್ಮ ಪ್ರಯತ್ನ ಸ್ಥಳಾವಕಾಶದ ಕೊರತೆಯಿಂದಾಗಿ ಫಲಿಸಲಿಲ್ಲ. ಕಡೇ ಗಳಿಗೆಯವರೆಗಿನ ನಮ್ಮ ಪ್ರಯತ್ನ ವಿಫಲವಾಗಿ ಅನಿವಾರ್ಯವಾಗಿ ಪ್ರವಾಸ ಮುಂದೂಡಲ್ಪಟ್ಟಿತು. ಬಹುಶ: ಹೆಲಿಕಾಪ್ಟರ್‌ನಲ್ಲಿ ಸ್ಥಳಾವಕಾಶ ಸಿಕ್ಕಿದ್ದರೆ ನಾವೆಲ್ಲರೂ ಕೇದಾರ, ಬದರಿ ಯಾತ್ರೆ ಮಾಡಿಯೇ ಬಿಡುತ್ತಿದ್ದೆವು. ಆದರೂ ನಮ್ಮ ಪ್ರಯತ್ನ ಮುಂದುವರಿದಿತ್ತು – ಆಗಸ್ಟ್, ಸೆಪ್ಟಂಬರ್ ತಿಂಗಳ ಯಾತ್ರೆಯ ಮುಂಗಡ ಟಿಕೆಟ್‌ಗಾಗಿ. ಅಷ್ಟರಲ್ಲಿ ಅಪ್ಪಳಿಸಿತ್ತು – ಉತ್ತರಾಖಂಡ್ ಪ್ರಾಂತ್ಯಕ್ಕೆ ಅಪ್ಪಳಿಸಿದ ಸಿಡಿಲು, ಗುಡುಗು ಹಾಗೂ ಕಂಡರಿಯದ ಜಲ ಪ್ರಳಯದ ಸುದ್ದಿಗಳು. ಹಿಮಾಲಯ ಕೆರಳಿತ್ತು. ಗಾಂಧಿ ಸರೋವರ ರೌದ್ರಾವತಾರ ತಾಳಿತ್ತು. ನದಿಗಳು ರಕ್ಕಸರಂತೆ ನುಗ್ಗಿ ಮುನ್ನುಗ್ಗಿ ಮಾನವರನ್ನು, ಮಾನವ ನಿರ್ಮಿತ ಮನೆ ಮಠಗಳನ್ನು ನೆಲಸಮ ಮಾಡಿದವು. ಗಂಗಾಮಾತೆ ಮುನಿದು, ರೌದ್ರ ಕಾಳಿ ಸ್ವರೂಪಳಂತೆ ಎಲ್ಲರನ್ನೂ ತನ್ನ ಗರ್ಭಸಾಗರದೊಳಕ್ಕೆ ಸೆಳೆದುಕೊಂಡಳು. ಗತಪ್ರಾಣರಾದ ಸಾವಿರಾರು ಜನ, ಗತಿ ಕಾಣದೆ ಆಗಸದತ್ತ ನೋಡುತ್ತ ಕಂಗಾಲಾದ ಬದುಕಿದ್ದ ಕೆಲವರು, ಜತೆಯಲ್ಲಿದ್ದವರನ್ನು ಕಳೆದುಕೊಂಡು ಅನಾಥ ಭಾವದಿಂದ ಬಳಲುತ್ತಿದ್ದ ಹಲವರು, ಕೊಚ್ಚಿಹೋದ ರಸ್ತೆಗಳು, ಸೇತುವೆಗಳು – ಹೀಗೆ ಒಂದಾದ ಮೇಲೊಂದರಂತೆ ದೃಶ್ಯಗಳು ನಮ್ಮ ಟಿವಿ ಪರದೆಯ ಮೇಲೆ ಮೂಡತೊಡಗಿದವು. ಈಗ ಉಳಿದವರನ್ನು ಹೇಗೋ ಸಂರಕ್ಷಿಸುವ ಕಾರ್ಯ ಮುಗಿದ ಮೇಲೆ ಹೀಗಾಗಲು ಕಾರಣಗಳೇನು ಎಂಬ ಪರಾಮರ್ಶೆ ಪ್ರಾರಂಭವಾಗಿದೆ. ಪರಿಸರವಾದಿಗಳ ಪ್ರಕಾರ ಪ್ರವಾಸೋದ್ಯಮದ ಹೆಸರಿನಲ್ಲಿ ಮನುಷ್ಯ ಮಿತಿ ಮೀರಿ ಸೃಷ್ಟಿಸಿದ್ದ ಆಧುನಿಕ ಸೌಲಭ್ಯಗಳು ಈ ದುರಂತದ ಗರ್ಭದಲ್ಲಿ ಅಡಗಿರುವ ಕಾರಣ. ಇದು ವಾಸ್ತವ ಸಂಗತಿ. ಸೌಮ್ಯವಾಗಿ ಹರಿಯುತ್ತಿದ್ದ ನದೀ ದಡಗಳನ್ನೇ ಕಬಳಿಸಿ ಹೋಟೆಲ್‌ಗಳನ್ನು ನಿರ್ಮಿಸಿದ್ದು ನಿಜಕ್ಕೂ ಅಪರಾಧ. ಇಂಥ 'ಅಪರಾಧ'ಗಳಿಗೆ ಇಂಬುಕೊಟ್ಟ ಭ್ರಷ್ಟ ಸರ್ಕಾರದ್ದು ಘೋರ ಅಪರಾಧ. ಅಲ್ಲದೆ ಹಿಮಾಲಯದ ಭೂಮಿಯ ಗುಣ ಹೇಗೆಂದರೆ–ಅದು ನೂರಾರು ಜನರ ಭಾರವನ್ನು ತಡೆದುಕೊಳ್ಳಬಲ್ಲದು; ಲಕ್ಷಾಂತರ ಭಕ್ತರ ಸಮೂಹಗಳನ್ನಲ್ಲ. "ಹೀಗಾಗಿ ಹಿಮಾಲಯ ಕೋಪಿಸಿಕೊಂಡಿತು. ಸ್ವತ: ಕೇದಾರೇಶ್ವರನಿಗೆ ಬಹುಶ: ಏಕಾಂತ ಬೇಕಿತ್ತೇನೋ! ತನ್ನ ಹಣೆಗಣ್ಣನ್ನು ತೆರೆದು ಸರ್ವನಾಶ ಮಾಡಿದ!" – ಇದು ಕೆಲವರ ವಾದ. ಏನೇ ಇರಲಿ, ಸಾವಿರಾರು ವರ್ಷಗಳಿಂದ ಇದ್ದ ಕೇದಾರ ಕ್ಷೇತ್ರ ಈ ದುರಂತವನ್ನು ಕಾಣಲು ಬಹುಶ: ಇದೂ ಒಂದು ಕಾರಣವಿರಬಹುದು. ಹಿಂದೆ ಈ ಕ್ಷೇತ್ರಕ್ಕೆ ಹೋಗುತ್ತಿದ್ದವರು ಕೆಲವೇ ಮಂದಿ. ಅದೂ ಕಾಡಿನ ದಾರಿಯಲ್ಲಿ, ಬೆಟ್ಟ ಕಣಿವೆಗಳ ಕಿರು ಮಾರ್ಗದಲ್ಲಿ. ಯಾತ್ರೆಗೆ ತಗಲುತ್ತಿದ್ದ ಅವಧಿ ಬಹುಶ: ದಿನಗಟ್ಟಲೆ ಅಥವಾ ತಿಂಗಳುಗಟ್ಟಲೆ. ಆದರೆ ಇಂದು ಸಾವಿರಾರು ವಾಹನಗಳು ಸಾಗುವಂತಹ ಭರ್ಜರಿ ರಸ್ತೆಗಳು, ವಾಯು ಮಾರ್ಗದಲ್ಲಿ ಸಾಗುವ ವಿಮಾನಗಳು, ಹೆಲಿಕಾಪ್ಟರ್‌ಗಳು, ಉಳಿದುಕೊಳ್ಳಲು ಐಷಾರಾಮಿ ಹೋಟೆಲ್‌ಗಳು– ನಿಜ ಹೇಳಬೇಕೆಂದರೆ ಇಂದು ಭಕ್ತಿಪೂರ್ಣ ಯಾತ್ರೆಯ ಪಾವಿತ್ರ್ಯತೆ ಉಳಿದಿಲ್ಲ. ಈ ಎಲ್ಲ ಅತಿರೇಕಗಳಿಗೆ ಈ ಮಹಾ ಪ್ರಳಯ ಅಲ್ಪ ವಿರಾಮ ನೀಡಿದೆ. ಮನುಷ್ಯ ಇನ್ನಾದರೂ ಎಚ್ಚೆತ್ತುಕೊಳ್ಳಲಿ ಎಂದು. ಬಹುಶ: ಉತ್ತರಾಖಂಡ ಹಾಗೂ ಕೇಂದ್ರ ಸರ್ಕಾರಗಳು ಈ ನಿಟ್ಟಿನಲ್ಲಿ ವೈಜ್ಞಾನಿಕವಾಗಿ ಚಿಂತಿಸಿ ಕೇದಾರನಾಥನನ್ನು ಸಂರಕ್ಷಿಸಲಿ ಎಂಬುದು ನಮ್ಮ ಆಶಯ.

ಈ ಪ್ರವಾಹದ ಅಬ್ಬರದಲ್ಲಿ ಸಿಲುಕಿದ್ದ ಬದುಕುಳಿದವರನ್ನು ಸುರಕ್ಷಿತ ಸ್ಥಳಕ್ಕೆ ತರುವ ಮಹತ್ಕಾರ್ಯದಲ್ಲಿ ನಮ್ಮ ಸೈನ್ಯ ಸಲ್ಲಿಸಿದ ಸೇವೆ ಅಪೂರ್ವ, ಅಭಿನಂದನಾರ್ಹ. ಈ ಪ್ರಕ್ರಿಯೆಯಲ್ಲಿ ತಮ್ಮವರು ದುರಂತಕ್ಕೀಡಾಗಿ ಸಾವನ್ನಪ್ಪಿದರೂ ಸೈನ್ಯದ ಮನಸ್ಥೈರ್ಯ ಕುಗ್ಗಲಿಲ್ಲ. ಬದರಿ ಕೇದಾರಗಳಲ್ಲಿ ಕಂಗಾಲಾಗಿ ಹಸಿವು ನೀರಡಿಕೆಗಳಿಂದ ಬಳಲುತ್ತಿದ್ದ ಕನ್ನಡಿಗರನ್ನು ಸುರಕ್ಷಿತವಾಗಿ ಊರು ತಲುಪಿಸಿದ ಕರ್ನಾಟಕ ಸರ್ಕಾರದ ಸಾಧನೆ ನಿಜಕ್ಕೂ ಶ್ಲಾಘನೀಯ. ನಮ್ಮ ಸಚಿವ ಶ್ರೀ ಸಂತೋಷ್ ಲಾಡ್ ಅವರು ಸ್ವತ: ಬದರಿ ತಲುಪಿ, ಅಲ್ಲಿಯೇ ಇದ್ದು ಕಟ್ಟ ಕಡೆಯ ಕನ್ನಡಿಗರನ್ನು ಸುರಕ್ಷಿತ ತಾಣಕ್ಕೆ ರವಾನೆ ಮಾಡಿದ ನಂತರವಷ್ಟೇ ತಾವು ಮರಳಿದರು. ಅವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಅಲ್ಲದೇ ನಮ್ಮ ಹೆಮ್ಮೆಯ ಕನ್ನಡ ಟಿವಿ ವಾಹಿನಿಗಳು ಪ್ರವಾಹದ ನಡುವೆಯೇ ಮುನ್ನುಗ್ಗಿ ಅಲ್ಲಿನ ಅಧ್ವಾನಗಳನ್ನು, ಆತಂಕಗಳನ್ನು, ನೋವುಗಳನ್ನು ನಮ್ಮ ಮನದಂಗಳಕ್ಕೆ ತಲುಪಿಸಿದವು. ನಮ್ಮ ಹೆಮ್ಮೆಯ ದೆಹಲಿ ಮಾಧ್ಯಮ ಮಿತ್ರರ ಅಪೂರ್ವ ಅನುಭವಗಳನ್ನು ಸಚಿತ್ರವಾಗಿ ಅಭಿಮತದ ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ. ತಮ್ಮೆಲ್ಲ ಕಾರ್ಯ ಒತ್ತಡಗಳ ನಡುವೆ ವಿಶೇಷವಾಗಿ ಅಭಿಮತದ ಓದುಗರಿಗೆ ಮೈನವಿರೇಳಿಸುವ ತಮ್ಮ ರೋಚಕ ಅನುಭವವನ್ನು ನಿವೇದಿಸಿದ್ದಕ್ಕಾಗಿ ಉತ್ಸಾಹೀ ತರುಣರಾದ ಟಿವಿ 9 ವರದಿಗಾರ ಶ್ರೀ ಚಂದ್ರಮೋಹನ್ ಹಾಗೂ ಪಬ್ಲಿಕ್ ಟಿವಿಯ ವರದಿಗಾರ ಶ್ರೀ ಅರುಣ್ ಬಡಿಗೇರ್ ಅವರಿಗೆ ನಾವು ಆಭಾರಿಯಾಗಿದ್ದೇವೆ.

ಈ ಸಂಚಿಕೆ ತಮ್ಮ ಕೈ ಸೇರಿದ ಒಂದೆರಡು ದಿನಗಳಲ್ಲಿ (ಜುಲೈ 14) ದೆಹಲಿ ಕರ್ನಾಟಕ ಸಂಘದ ಚುನಾವಣೆ ನಡೆಯಲಿದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸೂಕ್ತ ಹಾಗೂ ಅರ್ಹರನ್ನು ಆಯ್ಕೆ ಮಾಡುವ ಹಕ್ಕು ತಮಗಿದೆ. ಕರ್ನಾಟಕ ಸಂಘದ ಶ್ರೇಯೋಭಿವೃದ್ಧಿಯನ್ನು ಗಮನದಲ್ಲಿರಿಸಿ ಸಮರ್ಥರನ್ನು ಆಯ್ಕೆ ಮಾಡುವ ವಿವೇಕವನ್ನು ದೆಹಲಿ ಕನ್ನಡಿಗರು ಇದುವರೆಗೂ ಪ್ರಶಂಸನೀಯವಾಗಿ ಪ್ರದರ್ಶಿಸಿದ್ದಾರೆ; ಮುಂದೆಯೂ ಪ್ರದರ್ಶಿಸಲಿದ್ದಾರೆ ಎಂಬ ದೃಢ ನಂಬಿಕೆ ನಮ್ಮದು.

ಈ ಎರಡು ವರ್ಷಗಳಲ್ಲಿ ಅಭಿಮತವನ್ನು ಸುಂದರವಾಗಿ, ಅಚ್ಚುಕಟ್ಟಾಗಿ ಹೊರ ತರಲು ಸಹಕರಿಸಿದ ಸಂಪಾದಕ ಮಂಡಳಿ, ಜಾಹೀರಾತು ನೀಡಿ ಪ್ರೋತ್ಸಾಹಿಸಿದ ಜಾಹೀರಾತುದಾರರಿಗೆ, ಹಾಗೂ ಕಾರ್ಯಕಾರಿ ಸಮಿತಿಗೆ ಹೃದಯಪೂರ್ವಕ ಕೃತಜ್ಞತೆಗಳು. ಸಂಘದ ಆಗುಹೋಗುಗಳ ಚುಕ್ಕಾಣಿ ಹಿಡಿಯಲಿರುವ ಮುಂಬರುವ ನೂತನ ತಂಡಕ್ಕೆ ಮುಂಗಡ ಶುಭಾಶಯಗಳು.

❑ ಉಷಾ ಭರತಾದ್ರಿ

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡಿ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

**DELHI KARNATAKA SANGHA**
Rao Tularam Marg, Sector-12,
R K Puram, New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

ಅಂತರಾಳದಿಂದ...

# ಸಂಘದ ಮುಂದಿನ ದಾರಿ

ಅಭಿಮತದ ಈ ಸಂಚಿಕೆ ತಮ್ಮೆಲ್ಲರನ್ನು ತಲುಪುವ ಹೊತ್ತಿಗೆ ತಾವೆಲ್ಲ ದೆಹಲಿ ಕರ್ನಾಟಕ ಸಂಘದ ಚುನಾವಣೆಯ ಹೊಸ್ತಿಲಲ್ಲಿರಬಹುದು. ಬಹುಶ: ಚುನಾವಣೆ ಮುಗಿದು ಹೊಸ ಕಾರ್ಯಕಾರಿ ಸಮಿತಿ ತನ್ನ ಮುಂದಿನ ಎರಡು ವರ್ಷಗಳ ದಾರಿಯನ್ನು ಕಂಡುಕೊಳ್ಳುವುದರಲ್ಲಿ ನಿರತವಾಗಿರಬಹುದು. ನನ್ನ ಮಟ್ಟಿಗೆ ಇದು ಈ ಕಾರ್ಯಕಾರಿ ಸಮಿತಿಯ ಕಾಲಾವಧಿಯ ಕೊನೆಯ ಕಂತಿನ 'ಅಂತರಾಳ'. ಒಂದು ಬಗೆಯಲ್ಲಿ ಇದು ಅವಲೋಕನ. ನಾವು ಕಳೆದ ಎರಡು ವರ್ಷಗಳಲ್ಲಿ ನಡೆದು ಬಂದ ದಾರಿಯ ಅವಲೋಕನವೆಂದರೆ ತಪ್ಪಾಗಲಾರದು.

ಈ ಎರಡು ವರ್ಷಗಳಲ್ಲಿ ನಮ್ಮ ಈ ಕಾರ್ಯಕಾರಿ ಸಮಿತಿಯ ಅವಧಿಯಲ್ಲಿ ಏನೆಲ್ಲ ಆಯಿತು ಎಂಬುದರ ಬಗ್ಗೆ ತಾವೆಲ್ಲ ತಮ್ಮದೇ ಆದ ಅಭಿಪ್ರಾಯವನ್ನು ಹೊಂದಿರಬಹುದು. ಈ ಅಭಿಪ್ರಾಯಗಳನ್ನು ನಾನು ಅತ್ಯಂತ ವಿನಮ್ರತೆಯಿಂದ ಗೌರವಿಸುತ್ತೇನೆ. ಒಂದು ವಿಚಾರವಂತೂ ಸ್ಪಷ್ಟ. ನಾನು ಅಧ್ಯಕ್ಷನಾಗಿ ಜವಾಬ್ದಾರಿ ವಹಿಸಿಕೊಂಡ ಸಂದರ್ಭ ಹಲವು ಬಗೆಗಳಲ್ಲಿ ವಿಶಿಷ್ಟವಾಗಿತ್ತು. ಸಂಘದ ಕಾರ್ಯಚಟುವಟಿಕೆಗಳಿಗೆ ಒಂದು ನಿರ್ದಿಷ್ಟವಾದ ದಿಶೆಯನ್ನು ನೀಡಬೇಕಾದ ಅಗತ್ಯವಿತ್ತು. ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು ತಮ್ಮ ಸ್ವಾಯತ್ತತೆಯನ್ನು ಮತ್ತು ಅಭಿಪ್ರಾಯಗಳನ್ನು ಯಾವ ಬಗೆಯ ಒತ್ತಡವಿಲ್ಲದೆ ಪ್ರಕಟಿಸಬೇಕಾದ ಅಗತ್ಯತೆ ಹಾಗೂ ಸಂದರ್ಭವನ್ನು ನಾನು ಸೃಷ್ಟಿಸಬೇಕಾಗಿತ್ತು. ದೆಹಲಿ ಕರ್ನಾಟಕ ಸಂಘದ ಎಲ್ಲ ಕಾರ್ಯಚಟುವಟಿಕೆಗಳಲ್ಲಿ ಹೊಸ ಬಗೆಯ ವಿಚಾರಗಳು, ಮುಕ್ತವಾದ ಚರ್ಚೆ (ಎಲ್ಲಕ್ಕಿಂತ ಮಿಗಿಲಾಗಿ) ಹಾಗೂ ಇಡೀ ಕರ್ನಾಟಕವನ್ನು ಸಂಘ ಪ್ರತಿನಿಧಿಸಬೇಕಾದ ಅಗತ್ಯತೆಯನ್ನು ನಾನು ಹಾಗೂ ನಮ್ಮ ಕಾರ್ಯಕಾರಿ ಸಮಿತಿ ಕಂಡುಕೊಳ್ಳಬೇಕಾಗಿತ್ತು. ಇದು ಈ ಎರಡು ವರ್ಷಗಳಲ್ಲಿ ಸಾಧ್ಯವಾದದ್ದು ನನಗೆ ತುಂಬಾ ಸಂತಸವನ್ನುಂಟು ಮಾಡಿದೆ.

ಸಂಘದ ಎಲ್ಲ ಆಗುಹೋಗುಗಳನ್ನು ನಿಯಂತ್ರಿಸುವ ಹಾಗೂ ನಿರ್ಧರಿಸುವ ಜವಾಬ್ದಾರಿ ಕಾರ್ಯಕಾರಿ ಸಮಿತಿಯ ಮೇಲಿದೆ. ಈ ಕಾರ್ಯಕಾರಿ ಸಮಿತಿ ಮುಕ್ತವಾಗಿ ಎರಡು ವರ್ಷಗಳ ಕಾಲ ಕೆಲಸ ಮಾಡಲು ಸಾಧ್ಯವಾದದ್ದು ನಮ್ಮ ಬಹು ದೊಡ್ಡ ಸಾಧನೆಯೆಂಬುದು ನನ್ನ ವೈಯಕ್ತಿಕ ಹೆಗ್ಗಳಿಕೆ. ಸಂಘದ ಹಾಗೂ ಕಾರ್ಯಕಾರಿ ಸಮಿತಿಯ ಅಧ್ಯಕ್ಷನಾಗಿ ಎಲ್ಲ ನಿರ್ಧಾರಗಳನ್ನು ಎಚ್ಚರಿಕೆಯಿಂದ ಗಮನಿಸಿ, ಒಮ್ಮತದ ಮೂಲಕ ತೆಗೆದುಕೊಳ್ಳಲು ಪ್ರಯತ್ನಿಸಿದ್ದೇನೆ. ಮುಕ್ತವಾದ ಚರ್ಚೆಗೆ ಎಲ್ಲ ಕಾರ್ಯಕಾರಿ ಸಮಿತಿಯ ಸಭೆಗಳಲ್ಲಿ ಅನುವು ಮಾಡಿಕೊಟ್ಟಿದ್ದೇನೆ. ಭಿನ್ನಾಭಿಪ್ರಾಯಗಳು, ಮತಭೇದಗಳು ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಅಂಗ. ಹೀಗಾಗಿ ಕಾರ್ಯಕಾರಿ ಸಮಿತಿಯ ನಿರ್ಧಾರಗಳಲ್ಲಿ ಸದಾ ಒಮ್ಮತ ಮೂಡಿ ಬಂದಿದೆಯೆಂದು ನಾನು ಹೇಳುವುದಿಲ್ಲ. ಭಿನ್ನಾಭಿಪ್ರಾಯಗಳು, ಜಗಳಗಳು, ಒದರಾಟಗಳು... ಎಲ್ಲವೂ ನಮ್ಮ ಸಭೆಗಳಲ್ಲಿ ನಡೆದಿವೆ. ಇದಕ್ಕೆ ಕಾರಣ ನಮ್ಮ ಎಲ್ಲ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಅವರದ್ದೇ ಆದ ಖಚಿತವಾದ ಅಭಿಪ್ರಾಯಗಳು ಇದ್ದಾಗ ಈ ಬಗೆಯ ಸಮಸ್ಯೆಗಳು ಉದ್ಭವವಾಗುತ್ತವೆ. ಹಾಗೆ ಆಗುವುದು ಸಹಜ ಕೂಡಾ. ಇದರಿಂದ ಸಂಘಕ್ಕೆ ಒಳಿತಾಗುತ್ತದೆಯೇ ಹೊರತು ಯಾವ ನಷ್ಟವೂ ಇಲ್ಲ.

ಈ ಕಳೆದ ಎರಡು ವರ್ಷಗಳಲ್ಲಿ ಸಂಘದಲ್ಲಿ ನಾವು ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ತಮ್ಮ ಮುಂದಿಡುವ ಅಗತ್ಯವಿಲ್ಲ. ಅದರ ಅರಿವು ತಮಗಿದೆ. ಸಂಘದ ಕಾರ್ಯಚಟುವಟಿಕೆಗಳ ವರದಿ ಈಗಾಗಲೇ ತಮ್ಮ ಕೈಯಲ್ಲಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ – ನಮ್ಮ ದೆಹಲಿಯ ಕಲಾವಿದರು, ಕರ್ನಾಟಕದಿಂದ ಬಂದ ಹಲವು ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ತಂಡಗಳು ನಮಗೆಲ್ಲ ಕನ್ನಡದ ಬದುಕಿನ ಹಲವು ಸಂತಸದ ಕ್ಷಣಗಳನ್ನು ನೀಡಿವೆ. ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರು ಇದಕ್ಕಾಗಿ ಅಹರ್ನಿಶಿ ದುಡಿದಿದ್ದಾರೆ. ಇದು ಯಾರೊಬ್ಬರ ವೈಯಕ್ತಿಕ ಪ್ರತಿಷ್ಠೆಯ ಕೆಲಸವಲ್ಲ. ಎಲ್ಲವನ್ನೂ ನಾನೇ ಮಾಡಿದ್ದೇನೆ ಎಂದು ಸಾರಿಕೊಳ್ಳುವುದು ತೀರಾ ಬಾಲಿಶವಾಗಿ ಕಾಣಬಹುದು. ಸಂಘದ ಕಾರ್ಯಕಾರಿ ಸಮಿತಿಯವರಲ್ಲದೆ, ಸಂಘದ ನೂರಾರು ಸದಸ್ಯರು ಪ್ರೀತಿಯಿಂದ ಈ ಎಲ್ಲ ಕಾರ್ಯಕ್ರಮಗಳ ಸಫಲತೆಗಾಗಿ ದುಡಿದಿದ್ದಾರೆ. ಅವರೆಲ್ಲರನ್ನೂ ನಾನು ಪ್ರೀತಿಯಿಂದ ನೆನೆಯುತ್ತೇನೆ.

ಸಂಘದ ನಿಯಮಾವಳಿಗಳಲ್ಲಿ ನಾವೆಲ್ಲ ಸೇರಿ ತಂದ ಬದಲಾವಣೆ ನನ್ನ ದೃಷ್ಟಿಯಲ್ಲಿ ಅತ್ಯಂತ ಪ್ರಮುಖವಾದ ಸಾಧನೆ. ಈ ನಿಯಮಾವಳಿಗಳ ಬದಲಾವಣೆ ಮುಂಬರುವ ದಶಕಗಳಲ್ಲಿ ಸಂಘದ ಹಿತಾಸಕ್ತಿಯನ್ನು ಎಲ್ಲ ರೀತಿಯಲ್ಲೂ ಕಾದುಕೊಂಡು ಹೋಗುವುದೆಂಬ ಆಶಯ ನಮ್ಮೆಲ್ಲರದ್ದು. ನಿಯಮಾವಳಿಗಳು, ಸಂವಿಧಾನ–ಇವೆಲ್ಲ ಬರೀ ಒಣಶಬ್ದಗಳಲ್ಲ. ಇವುಗಳನ್ನು ಉಪಯೋಗಿಸಿಕೊಂಡು ಸಂಘದ ವಿಶಿಷ್ಟತೆ, ಸ್ವಾಯತ್ತತೆ ಹಾಗೂ ಸೃಜನಶೀಲತೆಯನ್ನು ಸದಾಕಾಲಕ್ಕೂ ಉಳಿಸಿಕೊಂಡು ಹೋಗುವ ಮುಂದಾಳತ್ವ ಸಂಘಕ್ಕೆ ಪ್ರಾಪ್ತವಾಗಲಿ ಎಂದು ನಾನು ಹಾರೈಸುತ್ತೇನೆ.

ಎಲ್ಲದಕ್ಕೂ ಮಿಗಿಲಾಗಿ, ಸಂಘವನ್ನು ತಮ್ಮ ವೈಯಕ್ತಿಕ ಪ್ರತಿಷ್ಠೆ ಹಾಗೂ ಒಣ ಆಡಂಬರಗಳನ್ನು ಬೆಳೆಸಿಕೊಳ್ಳುವುದಕ್ಕೆ ಯಾರಿಗೂ ಅನುವು ಮಾಡಿಕೊಡಬಾರದು. ಇದು ದೆಹಲಿ ಕರ್ನಾಟಕ ಸಂಘ. ಇಡೀ ಕರ್ನಾಟಕದ ವೈವಿಧ್ಯಮಯ ಸಾಂಸ್ಕೃತಿಕ ಆಯಾಮಗಳು ಸಂಘದ ಕಾರ್ಯಚಟುವಟಿಕೆಗಳಲ್ಲಿ, ಕಾರ್ಯಕ್ರಮಗಳಲ್ಲಿ ವ್ಯಕ್ತವಾಗುವಂತೆ ನಾವು ನೋಡಿಕೊಳ್ಳಬೇಕು. ಯಾವುದೇ ಬಗೆಯ ನಿರ್ಧಾರಿತ ಮತ್ತು ಸ್ವಹಿತದ ಗುರಿಗಳನ್ನು ಹಿಡಿದುಕೊಂಡು ಹೊರಟವರನ್ನು ಹದ್ದುಬಸ್ತಿನಲ್ಲಿ ಇಡಬೇಕಾದ ಅಗತ್ಯತೆ ಹಾಗೂ ವಿವೇಚನೆ ಎಲ್ಲ ಕಾಲಕ್ಕೂ ನಮಗೆ ಇರಬೇಕು.

ಸಂಘ ನಮ್ಮೆಲ್ಲರಿಗಿಂತಲೂ ದೊಡ್ಡದು. ಅದಕ್ಕೆ ಆರು ದಶಕಗಳಿಗೂ ಮೀರಿದ ಚರಿತ್ರೆಯಿದೆ. ಸಾವಿರಾರು ಕನ್ನಡಿಗರು ನಮ್ಮ ಸಂಘದ ಬುನಾದಿಯನ್ನು ಭದ್ರಗೊಳಿಸಲು ದುಡಿದಿದ್ದಾರೆ. ಈ ನಮ್ಮ ಸಂಘ ದೆಹಲಿಯ ಸಾಂಸ್ಕೃತಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

**❍ ಡಾ.ವೆಂಕಟಾಚಲ ಹೆಗಡೆ**

ನಾನು ಕರ್ನಾಟಕ ಸರ್ಕಾರದ ಸಚಿವ ಸಂಪುಟದಲ್ಲಿ ಸಹಕಾರ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ತಾವು ಅಭಿಮಾನ ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸಿ, ಬರೆದ ಪತ್ರವನ್ನು ಗಮನಿಸಿದ್ದೇನೆ. ಧನ್ಯವಾದಗಳು. ನಿಮ್ಮೆಲ್ಲರ ಸಲಹೆ, ಸಂಪೂರ್ಣ ಸಹಕಾರದಿಂದ ಉತ್ತಮ ಆಡಳಿತವನ್ನು ನೀಡಿ, ರಾಜ್ಯವನ್ನು ಪ್ರಗತಿ ಪಥದತ್ತ ಕೊಂಡೊಯ್ಯುವ ಭರವಸೆ ನನಗಿದೆ.

**❍ ಹೆಚ್.ಎಸ್.ಮಹದೇವ ಪ್ರಸಾದ್**
ಸಹಕಾರ ಸಚಿವರು ಹಾಗೂ
ಚಾಮರಾಜ ನಗರ ಜಿಲ್ಲಾ ಉಸ್ತುವಾರಿ ಸಚಿವರು

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ತಮ್ಮ ಸಲಹೆ ಸಹಕಾರಗಳೊಂದಿಗೆ ಈ ಎರಡು ವರ್ಷ ಕೆಲಸ ಮಾಡುವ ಭಾಗ್ಯ ನನ್ನದಾಗಿತ್ತು. ತಕ್ಕಮಟ್ಟಿಗೆ ತಾವು ಬಯಸಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದೇವೆ. ಇದರಲ್ಲಿ ಅತಿ ಮುಖ್ಯವಾಗಿ ದೆಹಲಿ ಸ್ಥಳೀಯ ಕಲಾವಿದರಿಗೆ ಹೆಚ್ಚು ಆದ್ಯತೆಯನ್ನು ಕೊಟ್ಟು ತರಬೇತಿಯನ್ನು ಸಹ ಕೊಡಿಸಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಈ ಎರಡು ವರ್ಷವೂ ಸಹ 150 ಸ್ಥಳೀಯ ಕಲಾವಿದರಿಗೆ ಅದ್ದೂರಿ ಕಾರ್ಯಕ್ರಮವನ್ನು ನೀಡಲು ಅವಕಾಶ ಕಲ್ಪಿಸಿಕೊಡಲಾಗಿದೆ. ಹಾಗೂ ಎರಡು ವರ್ಷವೂ ಸಹ ಯುವಕರನ್ನು ಪ್ರೋತ್ಸಾಹಿಸಲು ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಹಾಗೂ ವಾರ್ಷಿಕ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಕುವೆಂಪು, ಬೇಂದ್ರೆ, ಗೌರೀಶ್ ಕಾಯ್ಕಿಣಿ ಮುಂತಾದ ಸಾಹಿತಿಗಳ ಕುರಿತಾದ ಸಾಹಿತ್ಯ ಕಾರ್ಯಕ್ರಮಗಳು ಅದ್ಭುತವಾಗಿ ನಡೆದಿದೆ. ಗಣ್ಯ ಸಾಹಿತಿಗಳು, ಸಾಂಸ್ಕೃತಿಕ ಲೋಕದ ದಿಗ್ಗಜರು ನಮ್ಮ ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿ ನಮ್ಮ ಕಾರ್ಯಚಟುವಟಿಕೆಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅದರಲ್ಲಿ ಮುಖ್ಯವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಾದ ಶ್ರೀ ಬಸವರಾಜ್, ಐ.ಎ.ಎಸ್. ಕಾರ್ಯದರ್ಶಿ, ಶ್ರೀ ಮನುಬಳಿಗಾರ್ ಆಯುಕ್ತರು, ಶ್ರೀ ಸುಧಾಕರ ಶೆಟ್ಟಿ, ಡೆಪ್ಯುಟಿ ಸೆಕ್ರೆಟರಿ, ಶ್ರೀ ರಾಮಚಂದ್ರರಾವ್, ಅಧೀನ ಕಾರ್ಯದರ್ಶಿಗಳು, ಶ್ರೀ ರಾಮಕೃಷ್ಣ ಆಯುಕ್ತರು ಹಾಗೂ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಸಹನಿರ್ದೇಶಕರು, ಶ್ರೀ ಬಾವಿಕಟ್ಟೀ ಸಹನಿರ್ದೇಶಕರು ಈ ಎಲ್ಲಾ ಅಧಿಕಾರಿಗಳನ್ನು ಈ ಸಮಯದಲ್ಲಿ ನೆನೆಯಬೇಕಾಗುತ್ತದೆ. ಏಕೆಂದರೆ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರಿಗೆ ಸಂಘದ ಪದಾಧಿಕಾರಿಗಳು ಅನುದಾನಕ್ಕಾಗಿ ಮನವಿಮಾಡಿಕೊಂಡಾಗ ಸಂಘಕ್ಕೆ ರೂ ಒಂದು ಕೋಟಿ ಅನುದಾನಕ್ಕೆ ಕೂಡಲೇ ಮಂಜೂರಾತಿ ನೀಡಿದರು. ಆ ಹಣವನ್ನು ಬಿಡುಗಡೆ ಮಾಡುವಲ್ಲಿ ಈ ಎಲ್ಲಾ ಅಧಿಕಾರಿಗಳು ತಮ್ಮ ಸಂಘವೆಂದು ತಿಳಿದು ಸಹಕರಿಸಿದ್ದಾರೆ. ಈ ಅನುದಾನದಲ್ಲಿ ಈಗ ಕರ್ನಾಟಕದಿಂದ ಬರುವ 100ಕ್ಕೂ ಹೆಚ್ಚು ಮಂದಿ ಕಲಾವಿದರಿಗೆ ಉಳಿಯಲು ವಸತಿ ವ್ಯವಸ್ಥೆ ಮಾಡಲಾಗಿದೆ. ಹಾಗೂ ಈ ಎರಡು ವರ್ಷದ ಕಾರ್ಯಕ್ರಮಗಳ ಆಯೋಜನೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆನ್ನೆಲುಬಾಗಿ ನಿಂತು ಸಹಕರಿಸಿದೆ. ಇನ್ನು ಪ್ರತಿವರ್ಷ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಗಾಗಿ ಅನುದಾನ ಕೋರಿ ಅರ್ಜಿ ದಾಖಲಿಸಿದ್ದು, ಅನುದಾನ ನೀಡುವ ಭರವಸೆ ದೊರಕಿದೆ. ಈ ಎಲ್ಲಾ ಅಧಿಕಾರಿಗಳಿಗೆ ನಾನು ಚಿರಋಣಿ.

ಕಾರ್ಯಕಾರಿ ಸಮಿತಿಯ ಸಹಯೋಗದೊಂದಿಗೆ ಹಾಗೂ ತಾವು ನೀಡಿದ ಜವಾಬ್ದಾರಿಯನ್ನು ನಿಷ್ಠೆಯಿಂದ ಮಾಡಿದ್ದೇನೆ ಎಂಬ ನಂಬಿಕೆ ನನ್ನದು. ತಮ್ಮ ಸಹಾಯ, ಸಹಕಾರ, ಮಾರ್ಗದರ್ಶನಕ್ಕಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

❍ ಸಿ.ಎಂ.ನಾಗರಾಜ

**ದೆಹಲಿ ಕರ್ನಾಟಕ ಸಂಘದ ಸರ್ವಸದಸ್ಯರ ಮಹಾಸಭೆ**
**ಹಾಗೂ**
**ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳ ಚುನಾವಣೆ**
**ಜುಲೈ 14, 2013 ಭಾನುವಾರ ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ**
**ಸ್ಥಳ: ದೆಹಲಿ ಕನ್ನಡ ಶಾಲೆಯ ಆವರಣ**
**ನಂ.3 ಲೋಧಿ ಎಸ್ಟೇಟ್, ನವದೆಹಲಿ–110 003**
**ಸಮರ್ಥ ತಂಡವನ್ನು ಆರಿಸುವ ಹೊಣೆಗಾರಿಕೆ ತಮ್ಮದು**
**ಬನ್ನಿ ಮುಕ್ತ ಮನಸ್ಸಿನಿಂದ ಭಾಗವಹಿಸಿ**
**ತಮ್ಮ ಅತ್ಯಮೂಲ್ಯ ಮತ ಚಲಾಯಿಸಿ**

## ಅಭಿನಂದನೆ



ನೋಯಿಡಾದ ಪ್ರತಿಷ್ಠಿತ ಜೆ.ಎಸ್.ಎಸ್. ಪಬ್ಲಿಕ್ ಸ್ಕೂಲಿನ ಪ್ರಾಂಶುಪಾಲರಾಗಿ ಮೂರು ವರ್ಷಗಳ ಕಾಲ ಗಣನೀಯ ಸೇವೆ ಸಲ್ಲಿಸಿ ಪ್ರಶಂಸೆಗೆ ಪಾತ್ರರಾದ ಶ್ರೀ ಜಿ.ಬಿ ಹೆಗಡೆ ಅವರು ಇದೀಗ ಇನ್ನೂ ಹೆಚ್ಚಿನ ಹೊಣೆಯನ್ನು ಹೊತ್ತು ಧಾರವಾಡದ ಜೆ.ಎಸ್.ಎಸ್. ಪಬ್ಲಿಕ್ ಸ್ಕೂಲ್‌ಗೆ ತೆರಳಿದ್ದಾರೆ. ಜೆ.ಎಸ್.ಎಸ್. ಪಬ್ಲಿಕ್ ಸ್ಕೂಲ್ ಧಾರವಾಡದ ಕೆಲಗೇರಿ ಹತ್ತಿರ ನೂರಾ ಹದಿಮೂರು ಎಕರೆ ವಿಸ್ತೀರ್ಣದ ಜಾಗದಲ್ಲಿ ಪ್ರಾಥಮಿಕ– ಮಾಧ್ಯಮಿಕ ಶಾಲೆಯಿಂದ ಉಚ್ಚ ಶಿಕ್ಷಣವರೆಗಿನ ವಿದ್ಯಾ ಸಂಸ್ಥೆಯೊಂದಕ್ಕೆ ಭದ್ರ ಬುನಾದಿಯನ್ನು ಹಾಕಿದೆ.

ಲೋಧಿ ಎಸ್ಟೇಟ್‌ನ ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಶಾಲೆಯಲ್ಲಿ 1996 ರಿಂದ 2010 ರವರೆಗೆ ಸುದೀರ್ಘ ಹದಿನಾರು ವರುಷ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ ಶ್ರೀ ಜಿ.ಬಿ ಹೆಗಡೆ ಅವರು 2010ರಲ್ಲಿ ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆಯನ್ನು ಸೇರಿದ್ದರು. ತಮ್ಮ ದಕ್ಷ ಆಡಳಿತ ಹಾಗೂ ಅನನ್ಯವಾದ ಪರಿಶ್ರಮದಿಂದ ಮೂರು ವರ್ಷಗಳಲ್ಲಿ ಉತ್ತರ ಪ್ರದೇಶದ ವ್ಯಾಪ್ತಿಯಲ್ಲಿರುವ ಜೆ.ಎಸ್.ಎಸ್. ಪಬ್ಲಿಕ್ ಸ್ಕೂಲ್‌ನ ಕೀರ್ತಿಯನ್ನು ಹರಡಿದ ಶ್ರೇಯ ಜಿ.ಬಿ.ಹೆಗಡೆ ಅವರದು. ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಶಾಲೆಗೆ ಬರುವಂತೆ ಶ್ರಮವಹಿಸಿದರು. ಮಕ್ಕಳಲ್ಲಿ ಅಪಾರ ಪ್ರೀತಿಯುಳ್ಳ ಅವರು ಮಕ್ಕಳ ಅಚ್ಚುಮೆಚ್ಚಿನ ಗುರುಗಳು.

ಹೊಸ ಹೊಣೆಯನ್ನು ಹೊತ್ತು ವಿದ್ಯಾಕೇಂದ್ರವೆಂದೇ ಹೆಸರಾದ ಧಾರವಾಡದ ಮಡಿಲಿಗೆ ಮರಳಿದ ಜಿ.ಬಿ.ಹೆಗಡೆ ಅವರ ಕನಸುಗಳು ನನಸಾಗಲಿ. ಅವರು ಕೈಗೊಂಡ ಮಹತ್ತರ ಕಾರ್ಯ ಯಶಸ್ವಿಯಾಗಲಿ. ಜೆ.ಎಸ್.ಎಸ್. ಪಬ್ಲಿಕ್ ಸ್ಕೂಲ್‌ನ ಸಾವಿರಾರು ಮಕ್ಕಳ ಭವಿಷ್ಯ ಉಜ್ವಲಗೊಳ್ಳಲಿ ಎಂದು ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಹೃತ್ಪೂರ್ವಕ ಹಾರೈಕೆಗಳು.

# ಅನಾಹುತ ನಿಸರ್ಗ ಪ್ರೇರಿತ–ವಿನಾಶ ಮಾನವ ನಿರ್ಮಿತ

ನಿಸರ್ಗ ಮತ್ತು ಮನುಕುಲದ ನಡುವೆ ಒಂದು ಅವಿನಾಭಾವ ಸಂಬಂಧವಿದೆ. ಮನುಕುಲದ ಮುನ್ನಡೆಗೆ ಪೂರಕವಾದ ಪರಿಕರಗಳನ್ನು ಒದಗಿಸುವ ನೈಸರ್ಗಿಕ ಸಂಪನ್ಮೂಲಗಳು ಮಾನವನ ಅಭ್ಯುದಯಕ್ಕೆ, ಪ್ರಗತಿಗೆ, ಏಳಿಗೆಗೆ, ಮುನ್ನಡೆಗೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಲೇ ತನ್ನ ಒಡಲ ರಕ್ಷಣೆಗಾಗಿ ಕೆಲವು ಸ್ವಯಂ ರಕ್ಷಣೆಯ ವಿಧಾನಗಳನ್ನು ಅಳವಡಿಸಿಕೊಂಡಿರುತ್ತದೆ. ಅರಣ್ಯ, ಬೆಟ್ಟ ಗುಡ್ಡಗಳು, ನದಿಗಳು, ಪರ್ವತಗಳು, ಹಿಮಾಚ್ಛಾದಿತ ಪ್ರದೇಶಗಳು, ಹುಲ್ಲುಗಾವಲು, ಜಲಮೂಲಗಳು, ಖನಿಜಗಳು ಹೀಗೆ ನಿಸರ್ಗ ತನ್ನ ಒಡಲಲ್ಲಿ ಅನೇಕಾನೇಕ ಸಂಪನ್ಮೂಲಗಳನ್ನು ಅಡಗಿಸಿಕೊಂಡಿರುತ್ತದೆ. ಈ ಸಂಪನ್ಮೂಲಗಳಲ್ಲಿ ಕೆಲವನ್ನು ಮಾನವ ಸಮಾಜ ತನ್ನ ಒಳಿತಿಗಾಗಿ, ಉಳಿವಿಗಾಗಿ, ಅಸ್ತಿತ್ವಕ್ಕಾಗಿ ಬಳಸಿಕೊಳ್ಳಲು ನಿಸರ್ಗ ಅವಕಾಶ ಮಾಡಿಕೊಟ್ಟಿರುತ್ತದೆ. ಇನ್ನು ಕೆಲವನ್ನು ತನ್ನ ಒಡಲಲ್ಲೇ ಇರಿಸಿಕೊಳ್ಳಲು ಬಯಸಿರುತ್ತದೆ.

ಮಾನವ ಸಮಾಜ ಬಳಕೆ ಮಾಡುವ ನೈಸರ್ಗಿಕ ಸಂಪನ್ಮೂಲಗಳನ್ನು ಪುನಃ ಉತ್ಪಾದಿಸುವ ಅವಕಾಶವನ್ನೂ ನಿಸರ್ಗ ನೀಡಿರುತ್ತದೆ. ಆದರೆ ಈ ಒಂದು ಅವಕಾಶವನ್ನು ಸಮರ್ಥವಾಗಿ, ಪ್ರಾಮಾಣಿಕವಾಗಿ ಬಳಸಿಕೊಳ್ಳಲು ಮನುಕುಲ ಪ್ರಜ್ಞಾವಂತ ಮನೋಭಾವ ಮತ್ತು ಪ್ರಬುದ್ಧ ಧೋರಣೆ ಹೊಂದಿರಬೇಕಾಗುತ್ತದೆ. ಪರಿಸರ ರಕ್ಷಣೆಯ ಬಗ್ಗೆ ಅತಿಯಾದ ಕಾಳಜಿ ವಹಿಸುವ ಮನುಕುಲ ಈ ಪ್ರಜ್ಞಾವಂತಿಕೆಯನ್ನು ಕಳೆದುಕೊಂಡಿರುವುದೇ ನೈಸರ್ಗಿಕ ವಿಕೋಪಗಳಿಗೆ ಕಾರಣವಾಗಿರುವುದು ಸ್ಪಷ್ಟ. ಉತ್ತರಖಾಂಡದಲ್ಲಿ ಸಂಭವಿಸಿರುವ ಅನಾಹುತ ಮತ್ತು ವಿನಾಶಕಾರಿ ಬೆಳವಣಿಗೆಗಳು ಇದಕ್ಕೆ ಸ್ಪಷ್ಟ ನಿದರ್ಶನ.

ಹವಾಮಾನದ ವೈಜ್ಞಾನಿಕ ಪರಿಕಲ್ಪನೆಯಲ್ಲಿ ಯಾವುದೇ ಪ್ರದೇಶದಲ್ಲಿ ಒಂದು ದಿನ ಮಳೆಯ ಪ್ರಮಾಣ 150 ಮಿಲಿಮೀಟರ್ ಮೀರಿದರೆ ಅದನ್ನು ಅತಿವೃಷ್ಟಿ ಎನ್ನಲಾಗುತ್ತದೆ. ಆದರೆ ಕಳೆದ ಸೋಮವಾರ ಉತ್ತರಖಾಂಡದ ಕೇದಾರನಾಥ–ಬದರಿನಾಥ ಕ್ಷೇತ್ರಗಳಲ್ಲಿ 340 ಮಿಲಿಮೀಟರ್ ಮಳೆಯಾಗಿದೆ. ಈವರೆಗಿನ ಅನಾಹುತದಲ್ಲಿ ಮಡಿದವರ ಸಂಖ್ಯೆ 680ಕ್ಕೆ ಏರಿದೆ. ಇದು ದೊರೆತ ಶವಗಳ ಲೆಕ್ಕವಷ್ಟೆ ನದಿಯಲ್ಲಿ, ಪ್ರವಾಹದಲ್ಲಿ ಕೊಚ್ಚಿಹೋದ ಕೊಳೆತ ಶವಗಳ ಸಂಖ್ಯೆ ನಿಖರವಾಗಿ ತಿಳಿಯಲು ಸಾಧ್ಯವೇ ಇಲ್ಲ. ಚಾರಣಕ್ಕೆ ಹೊರಟಿದ್ದ ಕೆಲವರ ಅಭಿಪ್ರಾಯದಲ್ಲಿ ದಟ್ಟ ಅಡವಿಗಳಲ್ಲಿ ಸಾವಿರಾರು ಶವಗಳು ಕೊಳೆತು ನಾರುತ್ತಿವೆ. ಬದುಕುಳಿದವರನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಿರುವ ರಕ್ಷಣಾ ಸಿಬ್ಬಂದಿಗೆ ಅಗೋಚರ ಶವಗಳು ಕಣ್ಣಿಗೆ ಕಾಣದು. ಅಗತ್ಯವೂ ಇರುವುದಿಲ್ಲ. ಕಳೆದು ಹೋದವರು, ಕೊಳೆತು ಹೋದವರು ಅಗೋಚರವಾಗಿಯೇ ಮರೆಯಾಗುತ್ತಾರೆ. ಕೇದಾರ ನಾಥ ದೇವಾಲಯದ ಸುತ್ತಲಿನ ಪ್ರದೇಶದಲ್ಲಿ ಒಂದೇ ದಿನದಲ್ಲಿ 123 ಶವಗಳು ದೊರೆತಿವೆ. ಭೂಕುಸಿತದಿಂದ ಮಣ್ಣಲ್ಲಿ ಮಣ್ಣಾಗಿ ಹೋದ ಜೀವಗಳೆಷ್ಟೋ ಹೇಳಲಾಗದು.

ಈವರೆಗಿನ ರಕ್ಷಣಾ ಕಾರ್ಯದಲ್ಲಿ 73 ಸಾವಿರ ಯಾತ್ರಾರ್ಥಿಗಳನ್ನು ರಕ್ಷಿಸಲಾಗಿದೆ. ಇನ್ನೂ 40 ಸಾವಿರ ಜನರು ಸ್ಥಳಾಂತರಕ್ಕೆ ಕಾಯುತ್ತಿದ್ದಾರೆ. ಕೇದಾರನಾಥ ಕಾಲುದಾರಿಯಲ್ಲಿನ ಕಮರಿಗಳಲ್ಲಿ 2000 ಜನರು ಸಿಲುಕಿದ್ದು ಪರದಾಡುತ್ತಿದ್ದಾರೆ. ಭಾರತೀಯ ವಾಯುಪಡೆ, ಸೇನಾಪಡೆ ಮತ್ತು ನೌಕಾಪಡೆಯ 6200 ಯೋಧರು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದಾರೆ. 56 ಹೆಲಿಕಾಪ್ಟರ್‌ಗಳನ್ನು ನಿಯೋಜಿಸಲಾಗಿದ್ದು ದಿನಕ್ಕೆ 220 ಬಾರಿ ಪರಿಹಾರ ಶಿಬಿರಗಳಿಂದ ಸಂತ್ರಸ್ತರಿರುವ ಸಂಕಷ್ಟ ಸ್ಥಳಗಳಿಗೆ ಪಯಣಿಸುತ್ತಿವೆ. ಶನಿವಾರ ಮತ್ತು ಭಾನುವಾರದಂದು 500 ಬಾರಿ ಸಂಚರಿಸುತ್ತವೆ. ಮೈಸೂರಿನ ಸಿಎಫ್‌ಟಿಆರ್‌ಐನಿಂದ ಆಹಾರದ ಪೊಟ್ಟಣಗಳನ್ನು ಒದಗಿಸಲಾಗುತ್ತಿದೆ. ಸತ್ತವರ ಸಂಖ್ಯೆಯನ್ನು ನಿಖರವಾಗಿ ತಿಳಿಯಲು ತಜ್ಞರ ತಂಡವೊಂದನ್ನು ನೇಮಿಸಲಾಗಿದೆ. ಗೌರಿಕುಂಡ ಮತ್ತು ಕೇದಾರನಾಥದಲ್ಲಿ ಸಿಲುಕಿರುವ ಸಾವಿರಾರು ಯಾತ್ರಾರ್ಥಿಗಳ ಬಳಿಗೆ ರಕ್ಷಣಾ ಪಡೆಗಳು ತಲುಪಲು ಸಾಧ್ಯವಾಗಿಲ್ಲ. ಅನೇಕರು ಸುತ್ತಲಿನ ಭೈರವಚೆಟ್ಟಿ, ಗೌರಿಕುಂಡ ಅರಣ್ಯಗಳಲ್ಲಿ ಕಳೆದು ಹೋದ ಸಂಬಂಧಿಕರ ಹೆಣಗಳನ್ನು ಹುಡುಕುತ್ತಿದ್ದು, ಅನ್ನಾಹಾರಗಳಿಲ್ಲದೆ ಸಾವಿನ ನಿರೀಕ್ಷೆಯಲ್ಲಿದ್ದಾರೆ. ಕಾಲ್ನಡಿಗೆಯಲ್ಲಿ ಕೇದಾರನಾಥದಿಂದ ಬರುತ್ತಿರುವವರಿಗೆ ಮಂದಾಕಿನಿ–ಸೋನಾಗಂಗೆ ನಡುವೆ ಹಗ್ಗದ ಸೇತುವೆಗಳನ್ನು ನಿರ್ಮಿಸಲಾಗಿದ್ದು 2500 ಜನರನ್ನು ರಕ್ಷಿಸಲಾಗಿದೆ. ಒರಟು ಕಲ್ಲುಗಳಿರುವುದರಿಂದ ಹಗ್ಗಗಳು ಕಿತ್ತುಹೋಗುತ್ತಿದ್ದು ಬದಲಾಯಿಸುವುದು ಅನಿವಾರ್ಯವಾಗಿರುತ್ತದೆ. ಈ ಸಂಕಷ್ಟಗಳ ನಡುವೆಯೇ ಸೇನಾ ಸಿಬ್ಬಂದಿ ಹಗಲಿರುಳು ಶ್ರಮಿಸಿ ಯಾತ್ರಿಗಳ ರಕ್ಷಣೆಯಲ್ಲಿ ತೊಡಗಿದ್ದಾರೆ. ಇಷ್ಟೆಲ್ಲಾ ರಕ್ಷಣಾ ಕಾರ್ಯಗಳ ನಡುವೆಯೇ ಮತ್ತೊಮ್ಮೆ ಕುಂಭದ್ರೋಣ ಮಳೆ ಆರಂಭವಾಗಿದ್ದು ರಕ್ಷಣೆಗೆ ಇನ್ನೂ ಹದಿನೈದು ದಿನಗಳು ಬೇಕಾಗಿವೆ ಎಂದು ಹೇಳಲಾಗಿದೆ. ದೊರೆತ ಶವಗಳ ಸಂಖ್ಯೆ 550 ಆಗಿದ್ದರೂ ಐದು ಸಾವಿರಕ್ಕೂ ಹೆಚ್ಚು ಸಾವು ಸಂಭವಿಸಿರುವ ಸಾಧ್ಯತೆಗಳಿವೆ.

### ಕೆಲವು ವಿನಾಶಕಾರಿ ಹಸಿ ಸತ್ಯಗಳು

ಹಲವು ವರ್ಷಗಳ ಹಿಂದೆ ಸಿಎಜಿ ಸಲ್ಲಿಸಿದ್ದ ವರದಿಯ ಪ್ರಕಾರ ಇಲ್ಲಿನ ಅಲಕನಂದಾ ಮತ್ತು ಭಾಗೀರಥಿ ನದಿಗಳಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಜಲವಿದ್ಯುತ್ ಉತ್ಪಾದನಾ ಘಟಕಗಳು ಇಂತಹ ಭೀಕರ ಪ್ರವಾಹಕ್ಕೆ ಕಾರಣವಾಗುತ್ತವೆ ಎಂದು ಎಚ್ಚರಿಕೆ ನೀಡಿತ್ತು. ಯಮುನೋತ್ರಿ, ಗಂಗೋತ್ರಿ , ಮಂದಾಕಿನಿ ಇತರ ನದಿಗಳ ಎರಡೂ ಬದಿಗಳಲ್ಲಿ ನಿರ್ಮಿತವಾಗಿರುವ ಕಟ್ಟಡಗಳು, ರೆಸಾರ್ಟ್‌ಗಳು, ಹೋಟೆಲುಗಳು ಮತ್ತು ಅವೈಜ್ಞಾನಿಕ ಅಭಿವೃದ್ಧಿ ಕಾರ್ಯಗಳು ಹಿಮಾಲಯ ಪ್ರದೇಶವನ್ನು ಶಿಥಿಲಗೊಳಿಸಿರುವುದು ಸತ್ಯ. ಈ ಪರ್ವತ ಶ್ರೇಣಿಯಲ್ಲಿರುವ ದಟ್ಟ ಅರಣ್ಯಗಳನ್ನು ಅವ್ಯಾಹತವಾಗಿ ಕಡಿದುಹಾಕುತ್ತಿದ್ದು, ವಿದ್ಯುತ್ ಘಟಕಗಳಿಗಾಗಿ, ಪ್ರವಾಸೋದ್ಯಮದ ಹೆಸರಿನಲ್ಲಿ, ಅಭಿವೃದ್ಧಿಯ ಹೆಸರಿನಲ್ಲಿ ಬೋಳಿಸಲಾಗುತ್ತಿದೆ. ಇದರ ಪರಿಣಾಮ ಪ್ರವಾಹವನ್ನು ತಡೆಗಟ್ಟಲು ನಿಸರ್ಗ ಸೃಷ್ಟಿಸಿಕೊಂಡಿರುವ ರಕ್ಷಣಾ ನೆಲೆಗಳನ್ನು ಮನುಕುಲ ನಾಶಪಡಿಸಿದೆ. ಈ ಪ್ರದೇಶದಲ್ಲಿ ಒಟ್ಟು 70 ಜಲವಿದ್ಯುತ್ ಯೋಜನೆಗಳಿದ್ದು, ಭೂಕುಸಿತ ಸಂಭವಿಸಬಹುದಾದ ಇಳಿಜಾರು ಪ್ರದೇಶಗಳಲ್ಲೇ 37 ಘಟಕಗಳಿವೆ. ಯಾತ್ರಾರ್ಥಿಗಳ ಕಾಲುದಾರಿಯುದ್ದಕ್ಕೂ ಅಂಗಡಿ ಮುಗ್ಗಟ್ಟುಗಳನ್ನು ತೆರೆದಿರುವುದು ಭೂಮಿಯನ್ನು ಮತ್ತಷ್ಟು ಶಿಥಿಲಗೊಳಿಸಿದೆ.

ಜಲಪ್ರಳಯ ಮತ್ತು ಭೂಕುಸಿತದಿಂದ ತಮ್ಮ ದಾರಿ ಕಳೆದುಕೊಂಡ ಸಾವಿರಾರು ಯಾತ್ರಾರ್ಥಿಗಳು ಕಂಗಾಲಾಗಿದ್ದ ಸಂದರ್ಭದಲ್ಲಿ ಅಲ್ಲಿನ ಸ್ಥಳೀಯ ಗ್ರಾಮಸ್ಥರು ತಮ್ಮ ಮಾನವೀಯತೆಯನ್ನು ಮೆರೆದಿದ್ದಾರೆ. ಸಂತ್ರಸ್ತರು ಅನ್ನಾಹಾರಗಳಿಲ್ಲದೆ ಬಳಲುತ್ತಿದ್ದ ಸಂದರ್ಭದಲ್ಲಿ ಗ್ರಾಮಸ್ಥರು ತಮ್ಮ ಕೈಲಾದ ಸಹಾಯ ಮಾಡಿದ್ದಾರೆ. ಹೋಟೆಲ್ಗಳು, ವ್ಯಾಪಾರಿಗಳು ಅಗ್ಗದ ದರದಲ್ಲೇ ಆಹಾರ ಪದಾರ್ಥಗಳನ್ನು ಒದಗಿಸಿದ್ದಾರೆ. ಊಟ ತಿಂಡಿ ನೀಡಿದ್ದಾರೆ. ಹೃಷಿಕೇಶದಲ್ಲಿ ಕ್ವಾಲಿಸ್ ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದ ಕುಟುಂಬಕ್ಕೆ ಲಕ್ಷ್ಮಣ್ ಸಿಂಗ್ ಎಂಬ ಸ್ಥಳೀಯ ಚಾಲಕ ದೇವರ ರೂಪದಲ್ಲಿ ಬಂದು ಕಾಪಾಡಿದ್ದಾನೆ. ಬಂಡೆ ಕುಸಿದಿದ್ದ ರಸ್ತೆಯಲ್ಲಿ ಮೂರು ದಿನಗಳು ಉಳಿದು ನಂತರ ಅನ್ಯ ಮಾರ್ಗದಲ್ಲಿ ಕುಟುಂಬವನ್ನು ಕರೆತಂದ ಸಿಂಗ್ 70 ಕಿಮೀ ಸುತ್ತಿಕೊಂಡು ಬರುವ ಮೂಲಕ ಕುಟುಂಬದವರ ಪ್ರಾಣ ಉಳಿಸಿದ್ದಾನೆ. ಇದು ಮಾನವೀಯತೆಯ ಒಂದು ಮುಖ. ಮತ್ತೊಂದೆಡೆ ಪ್ರವಾಹದಲ್ಲಿ ಸಿಲುಕಿ ರಕ್ಷಣೆಗೆ ಮೊರೆ ಇಡುತ್ತಿದ್ದ ಮಹಿಳೆ ಮತ್ತು ಆಕೆಯ ಮಗಳ ಮೇಲೆ ಅತ್ಯಾಚಾರ ಎಸಗಿರುವ ದುಷ್ಕರ್ಮಿಗಳು ಇಬ್ಬರನ್ನೂ ಕೊಲೆ ಮಾಡುವ ಮೂಲಕ ಮಾನವ ಸಮಾಜದ ಕರಾಳ ಮುಖವನ್ನೂ ಪರಿಚಯಿಸಿದ್ದಾರೆ. ಇದೇ ಪ್ರದೇಶದಲ್ಲಿ ಬಿಹಾರದ ಮಹಿಳೆಯೊಬ್ಬರ ಮೇಲೂ ಅತ್ಯಾಚಾರ ಎಸಗಲಾಗಿದೆ. ಚೌವಾಸಿ ಗ್ರಾಮದಲ್ಲಿ ವ್ಯಾಪಾರಿಯೊಬ್ಬರಿಂದ 17 ಲಕ್ಷ ರೂಗಳನ್ನು ಲೂಟಿ ಮಾಡಲಾಗಿದೆ. ಕೆಲವು ಮೃತದೇಹಗಳ ಕೈ ಕತ್ತರಿಸಿ ಉಂಗುರಗಳನ್ನು ದೋಚಲಾಗಿದೆ. ನಿರಾಶ್ರಿತ ಪರಿಹಾರ ಶಿಬಿರವೊಂದರಲ್ಲಿ ಬಿಜೆಪಿ ಪರಿಹಾರ ಶಿಬಿರ ಎಂಬ ಫಲಕ ಎದ್ದುಕಾಣುತ್ತಿದೆ. ಇಲ್ಲಿಯೂ ರಾಜಕೀಯ ಲಾಭಕ್ಕಾಗಿ ಹಪಹಪಿ. ಕೇದಾರನಾಥಾ !

### ಮಾನವನ ವಿನಾಶಕಾರಿ ಧೋರಣೆ

ಮೇಲೆ ಹೇಳಿದಂತೆ ಉತ್ತರಾಖಾಂಡದ ಅರಣ್ಯ, ನದಿ ಮತ್ತು ಬೆಟ್ಟಗುಡ್ಡಗಳ, ಪರ್ವತಶ್ರೇಣಿಗಳ ಪ್ರದೇಶಗಳಲ್ಲಿ ಆಧುನಿಕ ಮಾನವನ ಸಾಹಸಗಳು ಇಲ್ಲಿನ ನೈಸರ್ಗಿಕ ಸಮತೋಲವನ್ನೇ ಕಂಗೆಡಿಸಿದ್ದು ನಿಸರ್ಗದ ಅಸ್ತಿತ್ವವನ್ನೇ ಪ್ರಶ್ನಿಸುವಂತಿದೆ. ಗುರುತಿಸಲ್ಪಟ್ಟಿರುವ ಸಂಭಾವ್ಯ ವಿಪತ್ತು ಪ್ರದೇಶಗಳಲ್ಲೇ ಅತ್ಯಧಿಕ ಜಲ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಿರುವುದು ಇಂದಿನ ವಿನಾಶಕಾರಿ ಬೆಳವಣಿಗೆಗೆ ಕಾರಣ ಎಂದು ಹೇಳಲಾಗುತ್ತಿದೆ. ಆದರೆ ಮೂರು ವರ್ಷಗಳ ಮುನ್ನವೇ ಮಹಾಲೇಖಾಪಾಲಕರು (ಸಿಎಜಿ) ತಮ್ಮ ವರದಿಯಲ್ಲಿ ಈ ಎಚ್ಚರಿಕೆಯನ್ನು ನೀಡಿದ್ದರು. ಇಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಜಲ ವಿದ್ಯುತ್ ಸ್ಥಾವರಗಳು ಎಂದಾದರೂ ಒಂದು ದಿನ ಅಪಾಯ ಒಡ್ಡುತ್ತವೆ ಎಂದು ಸಿಎಜಿ ತನ್ನ ವರದಿಯಲ್ಲಿ ತಿಳಿಸಿತ್ತು. ಆದರೆ ಪ್ರತಿವರ್ಷವೂ ಪರಿಸರ ದಿನವನ್ನು ವೃಕ್ಷಗಳನ್ನು ನೆಡುವ ಮೂಲಕ ಆಚರಿಸುವ ಆಳ್ವಿಕರಿಗೆ, ಆಡಳಿತಗಾರರಿಗೆ ಈ ವರದಿಯನ್ನು ಪರಿಶೀಲಿಸುವ ಪರಿಜ್ಞಾನವೂ ಇಲ್ಲದೆ ಹೋದುದು ಈ ದೇಶದ ದುರಂತ.

ಉತ್ತರಾಖಾಂಡದ ದುರಂತಕ್ಕೆ ಕುಂಭದ್ರೋಣ ಮಳೆ, ಜಲಪ್ರಳಯ, ಮೇಘಸ್ಫೋಟ ಮತ್ತು ಪ್ರವಾಹವೇ ಕಾರಣ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈ ಪ್ರಕೃತಿ ಪ್ರೇರಿತ ಅವಘಡಗಳಿಗೆ ಮಾನವ ಸಮಾಜ ತನ್ನದೇ ಆದ ಕಾಣಿಕೆ ನೀಡಿದೆ ಎನ್ನುವುದನ್ನೂ ಅಲ್ಲಗಳೆಯುವಂತಿಲ್ಲ. ಹಿಮಾಲಯದ ತಪ್ಪಲಿನಲ್ಲಿ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಅರಣ್ಯ ನಾಶ ಅವ್ಯಾಹತವಾಗಿ ಸಾಗಿದೆ. ಓರ್ಲೋನ್ ಪದರದ

...ಮುಂದಿನ ಪುಟಕ್ಕೆ

## ಓದುಗರ ಪತ್ರ ...

ನಾನು ಬೆಂಗಳೂರ ಬಳಿಯ ದೊಡ್ಡಬಳ್ಳಾಪುರದವನು. ಒಂದು ವಾರದ ಸಲುವಾಗಿ ರಾಣಿಖೇತ್‌ನಲ್ಲಿದ್ದೇನೆ. ನನ್ನ ಹಳೆಯ ಗೆಳೆಯ ಶ್ರೀ ರವಿಕುಮಾರ್‌ರ ಅತಿಥಿಯಾಗಿ. ಅವರು ಅಲ್ಲಿ ಎನ್.ಓ.ಎಲ್.ಎಸ್. ಎಂಬ ಅಮೇರಿಕ ಸಂಸ್ಥೆಯ ಭಾರತೀಯ ಏಕೈಕ ಘಟಕದ ನಿರ್ದೇಶಕರಾಗಿದ್ದಾರೆ.
ಅವರಲ್ಲಿ ನಿಮ್ಮ ಅಭಿಮತದ 2013ರ ಮೇ ಸಂಚಿಕೆ ದೊರೆಯಿತು. ನಿಮ್ಮ ಸಂಘ-ಸಂಚಿಕೆ-ಸಮ್ಮೇಳನಗಳ ಬಗ್ಗೆ ನಯ, ವಿನಯ ಭಯ ಭಕ್ತಿಗಳಿಂದ ದೂರದಿಂದಲೇ ಓದಿ ಪ್ರಶಂಸೆ ಮಾಡುತ್ತಲೇ ಹಲವು ದಶಕಗಳನ್ನು ವ್ಯರ್ಥವಾಗಿ ಕಳೆದೆ. ಇನ್ನು ಮುಂದಾದರೂ ನಿಮ್ಮ ಸಂಚಿಕೆಯ ಸವಿಯನ್ನು ಪ್ರತಿ ತಿಂಗಳೂ ಪಡೆಯಬೇಕೆಂಬ ಬಯಕೆಗೆ ಚಾಲನೆಕೊಡಬೇಕೆನಿಸಿದೆ. ದಯವಿಟ್ಟು ನಿಮ್ಮ ಸಂಘದ, ಅಭಿಮತದ ಚಂದಾ ವಿವರಗಳನ್ನು ಕಳುಹಿಸಿಕೊಡಿ. ಅರ್ಹತೆಯಿರುವುದಾದರೆ ನನ್ನನ್ನೂ ನಿಮ್ಮ ಕಕ್ಷೆಗೆ ಸೇರಿಸಿಕೊಳ್ಳಿ.

**❍ ದೇ.ನಾ.ಶ್ರೀ**
ಶ್ರೀನಗರ,ದೊಡ್ಡಬಳ್ಳಾಪುರ

ನಿಮ್ಮ ಸಂಪಾದಕತ್ವದಲ್ಲಿ ಹೊರ ಮೂಡುತ್ತಿರುವ ಅಭಿಮತ ಮಾಸಪತ್ರಿಕೆಯನ್ನು ದಯಮಾಡಿ ಕಳುಹಿಸಿ. ಆರಂಭದಲ್ಲಿ ಬರುತ್ತಿದ್ದು ತದನಂತರ ನಿಂತು ಹೋಗಿದೆ. ಅಭಿಮತ ಬರುವುದನ್ನು ಎದುರು ನೋಡುತ್ತಿದ್ದೇನೆ. ಇಂದು ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಇಂತಹ ಸಂವೇದನೆಯಲ್ಲಿಯೇ ಕನ್ನಡದ ಆಗುಹೋಗುಗಳೂ ನಿರಂತರವಾಗಿರಲಿ.

**❍ ಹುಲಿಮನೆ ನರಸಿಂಹಸ್ವಾಮಿ**
ಮಂಡ್ಯ

ದೆಹಲಿ ಕರ್ನಾಟಕ ಸಂಘದ ಅಭಿಮತದ ಜೂನ್ ಸಂಚಿಕೆಯ ಅಂತರಾಳದಿಂದ ಅಂಕಣದಲ್ಲಿ ಡಾ.ವೆಂಕಟಾಚಲ ಹೆಗಡೆಯವರ ಸರಳ ಮಾತುಗಳು ಎರಡೆರಡಾವರ್ತಿ ಓದಿಸಿಕೊಂಡವು. ಭಾಷಾವಂತರೆನ್ನುವ ಪದದ ವಿಶ್ವರೂಪವನ್ನು ಅವರು ಸಂಕ್ಷಿಪ್ತವಾಗಿ ಓದುಗನಿಗೆ ಅರ್ಥವಾಗುವ ಹಾಗೆ ವಿವರಿಸಿದ್ದಾರೆ. ನೂತನ ಸರಕಾರದ ಹಿರಿಯ ಮುತ್ಸದ್ಧಿ – ಜನಾದರಣೀಯ ಹಿಂದುಳಿದ ವರ್ಗದ ನಾಯಕ, ಸರಳ ವ್ಯಕ್ತಿಯ ಮುದ್ದು ಮುಖದ ಆಕರ್ಷಣೀಯ ಫೋಟೋ ಮುಖ ಪುಟದ ಕೇಂದ್ರ ಬಿಂದುವಾಗಿ ರಾರಾಜಿಸಿದರೆ – ಸಂಪುಟ ಸಚಿವರುಗಳ ಸಚಿತ್ರ ವಿವರಣೆಗಳಿಂದೊಡಗೂಡಿದ ಆಲ್ಬಮ್ ಎನ್ನವುದು ಹೆಗ್ಗಳಿಕೆಯೇ ಹೌದು.
ಡಾ.ಪುರುಷೋತ್ತಮ ಬಿಳಿಮಲೆಯವರ ಲೇಖನ ಮುಖ್ಯ ಮಂತ್ರಿಗಳ ಆಪ್ತಸಖನನ್ನು ಹತ್ತಿರದಿಂದ ಪರಿಚಯಗೊಳಿಸಿದಂತೆನಿಸಿತು. ಅಭಿನಂದನೆಗಳು.

**❍ ಕೀರಿಕ್ಕಾಡು ವನಮಾಲಾ ಕೇಶವ ಭಟ್ಟ**

# ಅಮರ ಸಂಸ್ಮೃತಿ

'ಮೋಹಕ ಕಂಠದ ಪಿ.ಬಿ. ಶ್ರೀನಿವಾಸ್ ಇನ್ನಿಲ್ಲ' ಅಭಿಮತ ಮೇ 2013ರ ಲೇಖನವನ್ನು ಓದಿದೆ. ನಾನು ಕೆಲವು ದಿನಗಳಿಂದ ಬೆಂಗಳೂರಿನಲ್ಲಿ ವಾಸವಾಗಿರುವುದರಿಂದ ದಿನಾಂಕ 7ನೇ ಮೇ 2013, ಮಂಗಳವಾರ 'ತ್ರಿಪುರವಾಸಿನಿ' ಅರಮನೆ ಮೈದಾನ ಬೆಂಗಳೂರಿನಲ್ಲಿ ದಿವಂಗತ ಶ್ರೀ ಪಿ.ಬಿ.ಶ್ರೀನಿವಾಸ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮ "ಅಮರ ಸಂಸ್ಮೃತಿ" ಕಾರ್ಯಕ್ರಮವನ್ನು ವೀಕ್ಷಿಸುವ ಸುಯೋಗ ನನ್ನ ಪಾಲಿನದಾಗಿತ್ತು. ಟಿ.ವಿ. ಚಾನಲ್ ಪಾರ್ಟನರ್ ಝೀ ಕನ್ನಡದಲ್ಲಿ ಸಹಾಯಕ ಉಪಾಧ್ಯಕ್ಷರಾಗಿರುವ ನಮ್ಮ ಅಳಿಯ ಶ್ರೀ ಲಕ್ಷ್ಮೀನಾರಾಯಣ ಹೆಗಡೆ ಅವರ ವ್ಯವಸ್ಥೆಯಿಂದಾಗಿ ಪಿ.ಬಿ.ಎಸ್. ಅವರ ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಪರಿವಾರದವರೊಂದಿಗೇ ಎದುರು ಸಾಲಿನಲ್ಲಿ ಕುಳಿತು ಕಾರ್ಯಕ್ರಮವನ್ನು ಕಣ್ಣಾರೆ ಕಂಡ ಸುಸಂದರ್ಭವನ್ನು ನಾನೆಂದೂ ಮರೆಯಲಾರೆ. ಶ್ರೀ ರವೀಂದ್ರ ದೇವಗಿರಿಕರ್ (ಪುಣೆ) ಅವರ "ಅಮೃತ ವರ್ಷಿಣಿ" ಸಂಸ್ಥೆಯ ಆಯೋಜನೆ, ಶ್ರೀ ಕೆ.ಎಸ್.ಎಲ್. ಸ್ವಾಮಿ (ಲಲಿತಾ, ರವೀ) ಯವರ ನಿರೂಪಣೆ, ವಾದ್ಯವೃಂದ, ವಿಶೇಷವಾಗಿ ವೀಣೆ, ಕೊಳಲುವಾದನಗಳು ಶ್ರೀ ಎಸ್.ಪಿ. ಬಾಲಸುಬ್ರಹ್ಮಣ್ಯಂ, ಯೇಸುದಾಸ್, ಎಲ್.ಆರ್. ಈಶ್ವರಿ, ಬಿ.ವಿ. ರಾಧಾ, ಮಂಜುಳಾ ಗುರುರಾಜ್, ಲಕ್ಷ್ಮೀ ಹೆಗಡೆ, ಮೋಹನರ ಸಂಗೀತಕ್ಕೆ ಮೇರು ಕಳೆ ಕೊಟ್ಟಿದ್ದವು.
ಪ್ರಾರಂಭದಲ್ಲಿ ದೀಪ ಬೆಳಗಿಸುವುದರಿಂದ ಕಾರ್ಯಕ್ರಮಕ್ಕೆ ಚಾಲನೆ ದೊರೆತಿತ್ತು. ಇದರಲ್ಲಿ ನಾಡಿನ ಗಣ್ಯರು ಹಾಗೂ ಸ್ಯಾಂಡಲ್‌ವುಡ್ ಕ್ಷೇತ್ರದ ಹಾಸ್ಯ ನಟ ಶ್ರೀ ವಾದಿರಾಜ ಮತ್ತು ಅಭಿನಯ ಶಾರದೆ-ಸರಸ್ವತಿಯರಾದ ನಟಿ ಜಯಂತಿ ಹಾಗೂ ಬಿ. ಸರೋಜಾದೇವಿಯವರು ದೀಪ ಬೆಳಗಿದರು. ದಿವಂಗತ ಪಿ.ಬಿ. ಎಸ್. ಅವರು ಇನ್ನೂ ಬದುಕಿರುತ್ತಾರೆ ಮತ್ತು ಅವರ ಸನ್ನಿಧಿಯಲ್ಲಿಯೇ ಈ ಕಾರ್ಯಕ್ರಮ 'ಸಹಸ್ರ ಚಂದ್ರದರ್ಶನ' ವನ್ನು ನೆರವೇರಿಸಬೇಕೆಂದು ಅವರ ಅಭಿಮಾನಿಗಳು ಯೋಚಿಸಿದ್ದರು. ಆದರೆ ವಿಧಿ ಅವರನ್ನು ಮೊದಲೇ ವಿಧಿವಶರನ್ನಾಗಿ ಮಾಡಿತು. ಡಾ. ಪಿ.ಬಿ.ಎಸ್.ರಿಗೆ ನಾಲ್ಕು ಜನ ಗಂಡು ಮಕ್ಕಳು, ನಾಲ್ಕೂ ಜನರು ಚಾರ್ಟರ್ಡ್ ಅಕೌಂಟೆಂಟ್ಸ್. ಅವರಲ್ಲಿ ಒಬ್ಬ ಮಗ ತಂದೆಯ ಮೇಲೆ ಕವನ ಬರೆದಿದ್ದನ್ನು "ಹಾಡೊಂದ-ಹಾಡುವೆನು ಕೇಳು ತಂದೆ. ನಮ್ಮನ್ನಗಲಿ ನೀ ಎಲ್ಲಿಗೆ ಹೋದೆ?" ಎಂದು ಹಾಡಿ ತೋರಿಸಿದಾಗ ಲಕ್ಷಗಟ್ಟಲೇ ಜನ ಸಮೂಹ ಎದ್ದು ನಿಂತು ಚಪ್ಪಾಳೆ ತಟ್ಟಿ ಸಂತೋಷ ವ್ಯಕ್ತಪಡಿಸಿದ್ದರಿಂದ ವೇದಿಕೆಯ ಮೇಲಿದ್ದ ಅವರ ಮಗ ಕಣ್ಣೀರು ಸುರಿಸಿ ಭಾವಪರವಶರಾದರು. ಶತಾಯುಷಿ ಶ್ರೀಯುತ ಜಿ. ವೆಂಕಟಸುಬ್ಬಯ್ಯನವರು ಈ ಕಾರ್ಯಕ್ರಮದ ವೈಭವವನ್ನು ನೋಡಿ, ಸನ್ಮಾನಿಸಿಕೊಂಡ ಅವರು ತಮಗೆ "ಇನ್ನೂ ಒಂದು ನೂರು ವರುಷ ಬಾಳಬೇಕೆಂಬ ಆಶೆಯಾಗಿದೆ" ಎಂದರು.
ಶೃಂಗೇರಿ ಶ್ರೀ ಶಾರದಾ ಪೀಠದ ಪೂಜ್ಯ ಮಹಾಸ್ವಾಮೀಜಿ ಶ್ರೀಶ್ರೀ ಜಗದ್ಗುರು ಭಾರತೀ ತೀರ್ಥ ಮಹಾ ಮಹಿಮರ ಆಶೀರ್ವಾದದ ಅಡಿಯಲ್ಲಿ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು.

**❍ ಎಸ್.ಬಿ. ಕುರಂದವಾಡ**
ಬೆಂಗಳೂರು

ಪುಟ 6 ರಿಂದ...

ಸಮಸ್ಯೆಯನ್ನು ಕುರಿತಂತೆ ವಿಶ್ವ ಮಟ್ಟದಲ್ಲಿ ಸಾಕಷ್ಟು ಚರ್ಚೆ, ಸಂವಾದಗಳು ನಡೆಯುತ್ತಿದ್ದರೂ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿಲ್ಲ ಅಥವಾ ಕೈಗೊಳ್ಳುತ್ತಿಲ್ಲ. ಆಳುವ ವರ್ಗಗಳ ಪರಿಸರ ಕಾಳಜಿ ಕಾರ್ಪೊರೇಟ್ ಉದ್ಯಮಿಗಳ ಹೊಸ್ತಿಲಲ್ಲಿ ಬಂದು ಮುಗ್ಗರಿಸಿಬಿಡುತ್ತವೆ. ಅಧಿಕೃತ ವರದಿಗಳು ಹಿಮಾಲಯದಲ್ಲಿ ಅರಣ್ಯ ಪ್ರದೇಶ ಹೆಚ್ಚಾಗಿದೆ ಎಂದು ಹೇಳಿದರೂ ಕೃಷಿ, ನಗರೀಕರಣ ಮತ್ತು ಮಾನವನ ಅತಿಕ್ರಮಣದಿಂದ ಅರಣ್ಯ ಕ್ಷೀಣಿಸುತ್ತಿವೆ. 2001ರಲ್ಲಿ ಶೇ 84.9ರಷ್ಟಿದ್ದ ಅರಣ್ಯ ಪ್ರದೇಶ 2100ರವೇಳೆಗೆ ಶೇ 52.10ರಷ್ಟಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಇದೇ ಅವಧಿಯಲ್ಲಿ ದಟ್ಟ ಅರಣ್ಯ ಪ್ರದೇಶ ಶೇ 74ರಿಂದ ಶೇ 34ರಷ್ಟಾಗುತ್ತದೆ ಎನ್ನಲಾಗಿದೆ. ಈ ದಟ್ಟ ಅರಣ್ಯಗಳು ಮಳೆ ನೀರನ್ನು ಭೂಮಿಗೆ ಬೀಳದಂತೆ ಎಚ್ಚರ ವಹಿಸುತ್ತವೆ. ಮತ್ತು ಭೂಮಿಯನ್ನು ಗಟ್ಟಿಯಾಗಿಸುತ್ತವೆ. ಆದರೆ ಆಧುನಿಕ ಮಾನವನ ಐಷಾರಾಮಿ ಬದುಕಿಗೆ ಹಿಮಾಲಯ ತತ್ತರಿಸುತ್ತಿದೆ.
ಉತ್ತರಖಾಂಡ ಮತ್ತಿತರ ಹಿಮಾಲಯದ ಪ್ರದೇಶಗಳಲ್ಲಿ ಹೆಚ್ಚು ನಗರೀಕರಣ ಪ್ರಕ್ರಿಯೆ ನಡೆಯುತ್ತಿದ್ದು ಕಟ್ಟಡ ನಿರ್ಮಾಣವೂ ಹೆಚ್ಚಾಗುತ್ತಿದೆ. ಆರ್ಥಿಕ ಚಟುವಟಿಕೆಗಳು ಹೆಚ್ಚಾಗುತ್ತಿದ್ದು ಬೆಟ್ಟಗುಡ್ಡಗಳನ್ನು ಕಡಿದು ವಸತಿ ಸಮುಚ್ಚಯಗಳನ್ನು ನಿರ್ಮಿಸಲಾಗುತ್ತಿದೆ. ಗಂಗೋತ್ರಿ-ಯಮುನೋತ್ರಿ ನದಿಗಳ ಇಕ್ಕೆಲಗಳಲ್ಲಿ ನಲವತ್ತಕ್ಕೂ ಹೆಚ್ಚು ಹೋಟೆಲ್ ಮತ್ತು ರೆಸಾರ್ಟ್‌ಗಳಿರುವುದು ಇದಕ್ಕೆ ಸಾಕ್ಷಿ. ನಿಜ, ಅಲ್ಲಿನ ಜನತೆ ಆರ್ಥಿಕವಾಗಿ ಮುಂದುವರೆಯಬೇಕು, ಒಂದು ನೆಲೆ ಕಾಣಬೇಕು ಆದರೆ ಭೂಮಿಯನ್ನು ಬಳಸುವಲ್ಲಿ ಕೊಂಚ ಎಚ್ಚರವನ್ನೂ ವಹಿಸಬೇಕಾಗುತ್ತದೆ. ಉತ್ತರ ಕಾಶಿಯ ಅಸ್ಸಿ ಮತ್ತು ಭಾಗೀರಥಿ ನದಿ ತೀರದಲ್ಲಿ ಬೃಹತ್ ಕಟ್ಟಡಗಳು, ಹೋಟೆಲುಗಳು ನಿರ್ಮಾಣವಾಗುತ್ತಿದ್ದು ನದಿಗೂ ಮತ್ತು ಸುತ್ತಲಿನ ಮಾನವನ ನೆಲೆಗಳಿಗೂ ಇರುವ ಅಂತರ ಕಡಿಮೆಯಾಗುತ್ತಿದೆ. ಇದರ ಪರಿಣಾಮ ಈಗ ಕಂಡಿದ್ದೇವೆ.
ಉತ್ತರಖಾಂಡದ ದುರಂತದಲ್ಲಿ ಮಡಿದ ಐದು ಸಾವಿರಕ್ಕೂ ಹೆಚ್ಚು ಜನರ ಮೃತದೇಹಗಳ ಹಿಂದೆ ಮಾನವ ಸಮಾಜದ ದುರಾಸೆಯ ಕಥೆ ಇರುವುದನ್ನು ಗಮನಿಸಬೇಕಾಗಿದೆ. ದೇವರ ಶಾಪ, ಪ್ರಕೃತಿ ವಿಕೋಪ ಮುಂತಾದ ರೋಚಕ ಘೋಷಣೆಗಳ ಹಿನ್ನೆಲೆಯಲ್ಲಿ ಮಾನವ ಸಮಾಜ ನಿಸರ್ಗದ ಒಡಲಲ್ಲಿ ವಿಷವೃಕ್ಷಗಳನ್ನು ನೆಡುತ್ತಿರುವುದನ್ನು ಮರೆಮಾಚಲಾಗುವುದಿಲ್ಲ.

**❍ ನಾ ದಿವಾಕರ್**
ಕೃಪೆ : ಅವಧಿ

# ದೈವ ಭೂಮಿಯಲ್ಲಿ ಪ್ರಳಯಲೀಲೆ

ಕಳೆದ ತಿಂಗಳು ಹಿಮಾಲಯದ ಪ್ರಸಿದ್ಧ ತೀರ್ಥಕ್ಷೇತ್ರವಾದ ಕೇದಾರನಾಥ ಹಾಗೂ ಬದರೀನಾಥದಲ್ಲಿ ಆದ ವಿನಾಶ ಲೀಲೆ ಸಮುದ್ರದಲ್ಲಿ ಬರುವ ಸುನಾಮಿಗೆ ಸಮನಾಗಿತ್ತು. ಸಮುದ್ರದ ಅಡಿಯಲ್ಲಿ ಭೂಕಂಪನವಾದಾಗ ಸುನಾಮಿಯ ಅಲೆಗಳು ಸಮುದ್ರ ತೀರದಲ್ಲಿ ಭಾರಿ ಗಾತ್ರದ ಅಲೆಗಳನ್ನು ಸೃಷ್ಟಿಸಿ ಅಲ್ಲಿನ ಎಲ್ಲ ವಸ್ತುಗಳನ್ನು, ಜೀವನವನ್ನು ನಾಶ ಮಾಡಿದ್ದನ್ನು ನೋಡಿದ್ದೇವೆ. ಈಗ ಹಿಮಾಲಯ ಪರ್ವತ ಪ್ರದೇಶದಲ್ಲಿ ಬಿದ್ದ ಅಗಾಧ ಪ್ರಮಾಣದ ಮಳೆಯಿಂದ ನೀರಿನ ಜತೆ ಭೂಮಿಯೂ ಸಹ ಕುಸಿದು, ನದಿಗಳಲ್ಲಿ ಹರಿದು, ನದಿ ದಡದ ಜನವಸತಿ ಪ್ರದೇಶಗಳನ್ನು ಸಂಪೂರ್ಣವಾಗಿ ನಿರ್ನಾಮ ಮಾಡಿದೆ. ಸುನಾಮಿಯ ಭಯಂಕರ ಅಲೆಗಳಿಗಿಂತಲೂ ಅಪಾಯಕಾರಿ ಪ್ರವಾಹ ಹಿಮಾಲಯದಿಂದ ಹಿಡಿದು ಸಾವಿರಾರು ಕಿ.ಮೀ ದೂರವಿರುವ ದೇಶದ ರಾಜಧಾನಿ ದಿಲ್ಲಿಯನ್ನೂ ತಲುಪಿ, ಅದರಾಚೆಗಿನ ಗಂಗಾ ನದಿಯ ರಾಜ್ಯಗಳಿಗೂ ಹಬ್ಬಿರುವುದು ಹಿಮಾಲಯದ ಪ್ರವಾಹದ ದುಷ್ಪರಿಣಾಮ ವಿಸ್ತಾರವಾದದ್ದು ಎಂಬುದನ್ನು ಬಿಂಬಿಸುತ್ತದೆ. ಕೇದಾರನಾಥದಲ್ಲಿ ಇದರ ಪ್ರಭಾವ ಅತ್ಯಂತ ಭೀಕರ.

ಹಿಮಾಲಯದಲ್ಲಿ ನಡೆದ ಈ ವಿನಾಶಲೀಲೆ ಮಾನವ ನಿರ್ಮಿತವೇ? ಅಥವಾ ಜಾಗತಿಕ ತಾಪಮಾನದಲ್ಲಿ ಆಗುತ್ತಿರುವ ಬದಲಾವಣೆಯ ಸಂಕೇತವೇ? ಈಗಾಗಲೇ ಹಲವು ಪರಿಸರ ತಜ್ಞರು ಇದನ್ನು ಮಾನವ ನಿರ್ಮಿತ ಎಂದಿದ್ದಾರೆ. ಪರಿಸರ ಮತ್ತು ವಿಜ್ಞಾನ ಕೇಂದ್ರದ ನಿರ್ದೇಶಕಿ ಸುನಿತಾ ನಾರಾಯಣ ಅವರು “ಈ ವಿನಾಶ ಲೀಲೆಯಲ್ಲಿ ಮಾನವನ ಕೈವಾಡವನ್ನು ಸ್ಪಷ್ಟವಾಗಿ ಗುರುತಿಸಬಹುದು. ಬೇಕಾಬಿಟ್ಟಿ ರಸ್ತೆ ಹಾಗೂ ವಿದ್ಯುತ್ ಯೋಜನೆಗಳ ನಿರ್ಮಾಣದಿಂದ ಹಿಮಾಲಯದ ಪರ್ವತ ಶ್ರೇಣಿಯು ನಲುಗಿದೆ. ಈ ವಿನಾಶಕ್ಕೆ ಮನುಷ್ಯನ ದುರಾಸೆಯೇ ಮೂಲ” ಎಂದಿದ್ದಾರೆ. ಕೆಲವು ತಜ್ಞರು ಇದನ್ನು ಜಾಗತಿಕ ತಾಪಮಾನದಲ್ಲಿ ಆಗುತ್ತಿರುವ ಬದಲಾವಣೆ ಹಾಗೂ ಅದರಿಂದ ಆದ ತೀವ್ರ ಪ್ರಮಾಣದ ಏರುಪೇರುಗಳಿಂದ ಈ ಅವಘಡ ಸಂಭವಿಸಿದೆ ಎನ್ನುತ್ತಾರೆ. ಇಂದಿಗೂ ಸಹ ಮಾಧ್ಯಮದವರು, ಸರಕಾರ ಇದನ್ನು ಮೇಘಸ್ಫೋಟ (ಕ್ಲೌಡ್ ಬ್ಲಾಸ್ಟ್) ಎಂದು ಹೇಳುತ್ತಿರುವುದು ವಿಚಿತ್ರವಾಗಿದೆ. ಮೇಘಸ್ಫೋಟ ಎಂದರೆ, ಒಂದೆಡೆಯಲ್ಲಿ ಮೇಘಗಳು ಶೇಖರಣೆಗೊಂಡು ಬಿಸಿಗಾಳಿಯು ಹಿಮಾಲಯದ ತಂಪು ಗಾಳಿಯ ಸಂಪರ್ಕಕ್ಕೆ ಬಂದಾಗ ತೀವ್ರ ಪ್ರಮಾಣದಲ್ಲಿ ಮಳೆ ಬರುತ್ತದೆ. ಇದರಿಂದ ಹೆಚ್ಚೆಂದರೆ ಒಂದು ಕಣಿವೆ ಅಥವಾ ಹತ್ತರಿಂದ ಹದಿನೈದು ಕಿ.ಮೀ ವ್ಯಾಪ್ತಿಯಲ್ಲಿ ಮಳೆಯಿಂದ ನದಿಗಳು ಉಕ್ಕಿ ಹರಿದು ಪ್ರವಾಹ ಬಂದು ಅವಘಡ ಸಂಭವಿಸಬಹುದು. ಆದರೆ ಕಳೆದ ತಿಂಗಳ ಮೇಘಸ್ಫೋಟ ಕೇವಲ ಒಂದು ಕಣಿವೆಗೆ ಸೀಮಿತವಾಗಿರದೆ ಉತ್ತರ ಹಿಮಾಲಯದ ಹಿಮಾಚಲ ಪ್ರದೇಶದಿಂದ ಆರಂಭಗೊಂಡು, ಉತ್ತರಾಂಚಲ, ನೇಪಾಳ ಹಾಗೂ ಚೀನಾ ಆಕ್ರಮಿಸಿರುವ ಟಿಬೇಟ್‌ವರೆಗೂ; ಅಂದರೆ, ಕನಿಷ್ಠ ಒಂದು ಸಾವಿರ ಕಿ.ಮೀ ಅಗಲದ ಕ್ಷೇತ್ರದಲ್ಲಿ ವ್ಯಾಪಕವಾದ ವಿನಾಶಕ್ಕೆ ಎಡೆಮಾಡಿದೆ. ಆದ್ದರಿಂದ ಇದನ್ನು ಮೇಘಸ್ಫೋಟ ಎನ್ನುವುದು ತಪ್ಪಾದೀತು.

ಈ ವಿನಾಶದ ತಾಂಡವ ನೃತ್ಯದ ಪ್ರಭಾವ ‘ದೈವಭೂಮಿ’ ಎಂದು ಕರೆಯಲ್ಪಡುವ ನಾಲ್ಕು ಕ್ಷೇತ್ರಗಳಲ್ಲಿ (ಚಾರ್ ದಾಮ್) ಹೆಚ್ಚಿನದಾಗಿ ಕೇದಾರನಾಥ ಹಾಗೂ ಬದರೀನಾಥಗಳಲ್ಲಿ ಆಗಿದೆ. ಸಾಮಾನ್ಯವಾಗಿ ಜೂನ್ ತಿಂಗಳಲ್ಲಿ ಆಗುವ ಸರಾಸರಿ ಮಾನ್ಸೂನ್ ಮಳೆಗಿಂತ 1,140ಪಟ್ಟು ಮಳೆ ಎರಡೇ ದಿನಗಳಲ್ಲಿ ಬಿದ್ದಿದೆ! ಈ ಅಗಾಧ ಪ್ರಮಾಣದಲ್ಲಿ ಮಳೆಯಾದರೆ ಸಮತಲವಾಗಿರುವ ಪ್ರದೇಶದಲ್ಲೂ ಪ್ರವಾಹ ಬರುವುದು ನಿಶ್ಚಿತ. ಆದರೆ ಹಿಮಾಲಯವು ಜಗತ್ತಿನ ಪರ್ವತ ಮಾಲೆಗಳಲ್ಲಿ ಅತ್ಯಂತ ಕಿರಿದಾದ್ದು. ಅದು ಇನ್ನೂ ತನ್ನೊಡಲಲ್ಲಿ ಗಟ್ಟಿತನವನ್ನು ಪಡೆದಿಲ್ಲ. ಆದುದರಿಂದ ಇದನ್ನು ಇಲ್ಲಿಯ ಪರಿಸರವನ್ನು ಸೂಕ್ತವೆಂದು ವಿಜ್ಞಾನಿಗಳು ಪರಿಗಣಿಸಿದ್ದಾರೆ.

ಆದರೆ ಈ ಸೂಕ್ಷ್ಮ ಕ್ಷೇತ್ರದಲ್ಲಿ ಕಳೆದ 30 ವರ್ಷಗಳಿಂದ ಯಾವುದೇ ಅಡೆತಡೆಗಳಿಲ್ಲದೆ ‘ಅಭಿವೃದ್ಧಿ’ಯ ಬೆನ್ನುಹತ್ತಿದ ಅಲ್ಲಿನ ಸರಕಾರಗಳು ಪರಿಸರವನ್ನು ನಾಶ ಮಾಡಿವೆ. ಗಂಗಾ ನದಿಗೆ ಅಡ್ಡವಾಗಿ ಟಿಹರಿಯಲ್ಲಿ ಬೃಹತ್ ಅಣೆಕಟ್ಟು ನಿರ್ಮಾಣವಾಯಿತು. ಜೊತೆಗೆ ಇಡೀ ಕ್ಷೇತ್ರದಲ್ಲಿ 70 ದೊಡ್ಡ ಹಾಗೂ 200 ಕಿರು ಜಲ ವಿದ್ಯುತ್ ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ಸಡಿಲ ಮಣ್ಣನ್ನು ಹೊಂದಿರುವ ಈ ಪ್ರದೇಶದಲ್ಲಿ ವ್ಯಾಪಕವಾಗಿ ರಸ್ತೆ ಹಾಗೂ ಅಣೆಕಟ್ಟುಗಳ ನಿರ್ಮಾಣಕ್ಕಾಗಿ ಪರ್ವತಗಳನ್ನೇ ಕಡಿದು, ನದಿಗಳನ್ನೇ ತಿರುಗಿಸಿ ನಿಸರ್ಗದ ಮೇಲೆ ಅಭಿವೃದ್ಧಿಯ ಹೆಜ್ಜೆಯ ಗುರುತು ಸ್ಥಾಪಿಸುವ ಕೆಲಸವನ್ನು ಸರಕಾರ ಮಾಡುತ್ತಿದೆ. ಹಲವು ವರ್ಷಗಳಿಂದ ಚಿಪ್ಕೋ ಚಳುವಳಿಯ ನೇತಾರರಾದ ಸುಂದರಲಾಲ್ ಬಹುಗುಣ ಅವರು ಈ ಅಭಿವೃದ್ಧಿಯನ್ನು ಪ್ರಶ್ನಿಸುತ್ತ ಬಂದಿದ್ದಾರೆ. ಆದರೆ ಇದನ್ನು ವಿರೋಧಿಸಿದ ಪರಿಸರವಾದಿಗಳನ್ನು ‘ಪ್ರಗತಿ ವಿರೋಧಿಗಳು’ ಎಂದು ಹೀಯಾಳಿಸಲಾಗುತ್ತದೆ. ಇನ್ನು ಗುತ್ತಿಗೆದಾರರು ಹಾಗೂ ಸರಕಾರ ಜತೆ ಸೇರಿ ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಪರಿಸರವಾದಿ ಭರತ್ ಜುಂಜನವಾಲಾ ಅವರನ್ನು ಥಳಿಸಿದ್ದಲ್ಲದೆ, ಉತ್ತರಾಖಂಡ ರಾಜ್ಯ ಬಿಟ್ಟು ಓಡಿಸಿದರು. ಕೇವಲ ಗಂಗಾ ನದಿ ಉಗಮ ಸ್ಥಳವಾದ ಗಂಗೋತ್ರಿಯ ಕೆಲಪ್ರದೇಶಗಳನ್ನು ‘ಪರಿಸರ ಸೂಕ್ಷ್ಮ ವಲಯ’ ಎಂದು ಕೇಂದ್ರ ಪರಿಸರ ಮಂತ್ರಾಲಯ ಈ ಹಿಂದೆ ಘೋಷಿಸಿದಾಗ ಅದರ ವಿರುದ್ಧ ರಾಜಕಾರಣಿಗಳೆಲ್ಲ ಒಟ್ಟಾಗಿದ್ದರು. ಇಂದಿನ ಮುಖ್ಯಮಂತ್ರಿ ವಿಜಯ ಬಹುಗುಣ ಅವರು ಇದನ್ನು ವಿರೋಧಿಸಿ ಪ್ರಧಾನ ಮಂತ್ರಿಗಳ ಬಳಿ ನಿಯೋಗ ಒಯ್ದು ಪರಿಸರಸೂಕ್ಷ್ಮವಲಯ ಮಾಡಬಾರದೆಂದು ಒತ್ತಾಯಿಸಿದ್ದರು. ಇಂದು ಇದೇ ರಾಜಕಾರಣಿಗಳು ಪ್ರವಾಹದ ನಂತರ ಪುನರ್ವಸತಿಗಾಗಿ ಕೋಟ್ಯಾಂತರ ರೂಪಾಯಿಗಳ ಬರುವಿಕೆಗಾಗಿ ಕಾಯುತ್ತಿದ್ದಾರೆ. ವಿಪತ್ತಿನಲ್ಲಿಯೂ ಸ್ವಾರ್ಥ ರಾಜಕಾರಣಿಗಳ ಈ ಸಂಕುಚಿತದ ದೃಷ್ಟಿಕೋನ ಹೇಸಿಗೆ ಹುಟ್ಟಿಸುತ್ತದೆ.

ಈ ಜಲಪ್ರಳಯದ ತೀವ್ರತೆಯನ್ನು ತಡೆದು, ಜನರ ಹಾಗೂ ಸಂಪತ್ತಿನ ರಕ್ಷಣೆ ಸಾಧ್ಯವಿತ್ತು. ಆದರೆ ಅದನ್ನು ಮಾಡಲು ದಶಕಗಳ ಸಿದ್ಧತೆ ಹಾಗೂ ಸೂಕ್ಷ್ಮಪ್ರದೇಶದಲ್ಲಿ ಯಾವ ರೀತಿಯ ಯೋಜನೆ ಜಾರಿಗೊಳ್ಳಬೇಕು ಎಂಬುದರ ಬಗ್ಗೆ–ಪ್ರಕೃತಿಯ ವಿರುದ್ಧ ಹೋರಾಡುವುದಕ್ಕಿಂತ ಅದಕ್ಕೆ ಪೂರಕವಾಗಿ ಹೇಗೆ ಹೋಗಬಹುದು ಎಂಬ ವಿವೇಚನೆ, ಮುಂದಾಲೋಚನೆಯನ್ನು ರಾಜ್ಯವನ್ನು ಆಳುವ ನೇತಾರರು, ವಿಜ್ಞಾನಿಗಳು ಯೋಚಿಸಬೇಕಾಗಿತ್ತು. ರಸ್ತೆ ಹಾಗೂ ಅಣೆಕಟ್ಟೆಗಳ ನಿರ್ಮಾಣಕ್ಕಾಗಿ ಸ್ಫೋಟಕಗಳನ್ನು ಬಳಸುವುದರ ಜೊತೆಗೆ ಅಪಾರ ಪ್ರಮಾಣದಲ್ಲಿ ಅರಣ್ಯ ನಾಶ ಮಾಡಿದರು. ಇದರಿಂದ ಸಡಿಲವಾಗಿದ್ದ ಭೂಮಿ ಅಸ್ಥಿರವಾಗಿ ಅಗಾಧ ಪ್ರಮಾಣದಲ್ಲಿ ಮಳೆ ಆದಾಗ ಭೂಕುಸಿತಕ್ಕೆ ದಾರಿ ಮಾಡಿಕೊಟ್ಟಿತು. ಇದರಿಂದಾಗಿ ಪರ್ವತ ಶಿಖರಗಳು ಶಿಥಿಲಗೊಂಡು, ಮಣ್ಣು ನದಿಗಳ ಜೊತೆಗೂಡಿ ಪ್ರಳಯಕಾರಿ ಪ್ರವಾಹಕ್ಕೆ ನಾಂದಿ ಹಾಡಿತು. ನದಿಯನ್ನೇ ಅತಿಕ್ರಮಣ ಮಾಡಿ ಕಟ್ಟಿದ ಕಟ್ಟಡಗಳು ಕ್ಷಣ ಮಾತ್ರದಲ್ಲಿ ನೆಲಸಮಗೊಂಡವು. ಹೂಳು, ಮಣ್ಣು, ಕಲ್ಲು, ಬಂಡೆಗಳೊಡನೆ ಗುಡ್ಡಗಳೇ ನದಿನೀರಿಗೆ ಸೇರಿ ರಭಸವಾಗಿ ಬಂದಾಗ ಪ್ರಳಯವಾಗದೆ ಇನ್ನೇನಾದೀತು? ಆಗಲೇ ನಿರ್ಮಿಸಲಾದ ಅಣೆಕಟ್ಟುಗಳಿಗೆ ಇದರಿಂದಾಗುವ ಅಪಾಯ ತಪ್ಪಿಸುವ ಉದ್ದೇಶದಿಂದ ಶೇಖರಣೆಯಾದ ನೀರನ್ನು ಹೊರಬಿಟ್ಟಿದ್ದರ ಪರಿಣಾಮವಾಗಿ ಪ್ರವಾಹದ ತೀವ್ರತೆ ಇನ್ನೂ ಹೆಚ್ಚಾಯಿತು. ಹಿಮಾಲಯ ಸೂಕ್ಷ್ಮ ಪ್ರದೇಶವಾದ್ದರಿಂದ ಈ ನಾಲ್ಕು ಧಾಮಗಳಿಗೆ ಹೋಗಲು ಕಾಲುದಾರಿಗಳಿದ್ದವು. ಇವುಗಳನ್ನೇ ಬಳಸುವ ಜನರೂ ಕಡಿಮೆ ಇದ್ದರು. ಆದರೆ ಕಳೆದ 2 ದಶಕಗಳಿಂದೀಚೆ ತೀರ್ಥಯಾತ್ರೆಯೂ ಸಹ ಒಂದು ಬೃಹತ್ ಉದ್ದಿಮೆಯಾದಾಗ, ರಸ್ತೆಗಳ ಜೊತೆ ಅನಧಿಕೃತ ಕಟ್ಟಡಗಳ ನಿರ್ಮಾಣ, ಅರಣ್ಯನಾಶ ಸಾಮಾನ್ಯವಾಗಿತ್ತು. ತೀರ್ಥಯಾತ್ರಿಗಳ ಸಂಖ್ಯೆ ಸಾವಿರ ದಾಟಿ ಲಕ್ಷಾಂತರಕ್ಕೆ ಮುಟ್ಟಿತ್ತು. ಈ ಸೂಕ್ಷ್ಮ ಪ್ರದೇಶ ಇಷ್ಟು ಅಗಾಧ ಪ್ರಮಾಣದ ಒತ್ತಡವನ್ನು ಸಹಿಸಲು ಸಾಧ್ಯವಿಲ್ಲ ಎನ್ನುವ ಸತ್ಯ ತಿಳಿದೂ ಸರಕಾರ ಹಾಗೂ ಜನ ಹಿಮಾಲಯವನ್ನು ಶೋಷಣೆ ಮಾಡಲು ಮುಂದಾದರು. ಇದರ ಪರಿಣಾಮವಾಗಿ ಅಮಾಯಕ ಜನ ತಮ್ಮ ಪ್ರಾಣವನ್ನೇ ಬಲಿಕೊಡುವುದು ಅನಿವಾರ್ಯವಾಯಿತು. ನೀರಿನಲ್ಲಿರುವ ಒಂದು ದೋಣಿಯ ಕ್ಷಮತೆ ನೂರು ಜನರನ್ನು ಒಯ್ಯುವಷ್ಟು ಇರುವಾಗ ಅದರಲ್ಲಿ ಸಾವಿರ ಜನ ಕುಳಿತರೆ ಏನಾದೀತು? ಹಿಮಾಲಯದ ಸೂಕ್ಷ್ಮ ಪ್ರದೇಶದ ಧಾರಣಾ ಸಾಮರ್ಥ್ಯವನ್ನೇ ಅಲಕ್ಷಿಸಿ ಅಲ್ಲಿ ಮಾನವ ತನ್ನ ಸ್ವಾರ್ಥ ಸಾಧನೆಗೆ ಮಹತ್ವ ನೀಡಿದಾಗ ಏನಾಗುತ್ತದೆ ಎಂಬುದನ್ನು ಈ ಪ್ರಳಯ ಸೂಚಿಸಿದೆ. ಆದರೆ ಇದರಿಂದ ನಮ್ಮ ರಾಜಕಾರಣಿಗಳು ಪಾಠ ಕಲಿತು ಈ ಪ್ರದೇಶವನ್ನು, ಅಲ್ಲಿರುವ ಜನ–ಜೀವನವನ್ನು ಸುರಕ್ಷಿತವಾಗಿಸಲು ಹೊಸ ನೀತಿಗಳನ್ನು ರೂಪಿಸುವರೇ?

**❍ ಪಾಂಡುರಂಗ ಹೆಗಡೆ**
ಖ್ಯಾತ ಪರಿಸರವಾದಿ
ಕೃಪೆ: ವಿಜಯ ಕರ್ನಾಟಕ

# ಉತ್ತರಾಖಂಡದ ರೌದ್ರಾವತಾರಕ್ಕೆ ಸಾಕ್ಷಿಯಾದಾಗ....



**ಈ ಶತಮಾನ ಕಂಡರಿಯದ ಮಹಾ ಪ್ರಳಯ ಇಡೀ ದೇಶವನ್ನು ತಲ್ಲಣಗೊಳಿಸಿದೆ. ರುದ್ರಭೂಮಿಯಾದ ದೇವಭೂಮಿಯ ಭಯಾನಕ, ಭೀಭತ್ಸ ದೃಶ್ಯಗಳನ್ನು ಕನ್ನಡ ಸುದ್ದಿ ವಾಹಿನಿಗಳಿಗಾಗಿ ಪ್ರತ್ಯಕ್ಷ ವರದಿಯ ನೇರ ಪ್ರಸಾರ ಮಾಡಿದ ದೆಹಲಿಯ ನಮ್ಮ ವರದಿಗಾರರು ನಿಜಕ್ಕೂ ಪ್ರಶಂಸಾರ್ಹರು. ಉತ್ಸಾಹೀ ತರುಣ ಚಂದ್ರಮೋಹನ್ ಹಾಗೂ ಅರುಣ್ ಬಡಿಗೇರ್ ಅವರು ನಮ್ಮ 'ಅಭಿಮತ'ಕ್ಕಾಗಿ ನೀಡಿದ ವಿಶೇಷ ಸಚಿತ್ರ ಅನುಭವಗಳು ನಿಮಗಾಗಿ....ಇವರಿಗೆ ನಮ್ಮ ಮನಃಪೂರ್ವಕ ಧನ್ಯವಾದಗಳು**

ಅಲ್ಲಿದ್ದದ್ದು ಭಯಾನಕ, ಹೃದಯ ಬಾಡಿ ಹೋಗುವಂತಹ ದೃಶ್ಯ. ಎಲ್ಲಿ ನೋಡಿದರಲ್ಲಿ ಹೆಣಗಳ ರಾಶಿ, ನಾಮಾವಶೇಷಗೊಂಡಿದ್ದ ಮನೆಗಳು, ದಿಕ್ಕಾಪಾಲಾಗಿ ಸೂರಿಲ್ಲದೆ ನರಳಾಡುತ್ತಿದ್ದವರು ಕಣ್ಣಿಗೆ ರಾಚುತ್ತಿದ್ದರು. ಇಂತಹ ಮನಕಲುಕುವ ದೃಶ್ಯವನ್ನು ಹಾಲಿವುಡ್ ಚಿತ್ರಗಳಲ್ಲಿ ಮಾತ್ರ ಕಂಡಿದ್ದೆ. ಆದರೆ ಅಂಥದ್ದೇ ಮಾದರಿಯ ದೃಶ್ಯವನ್ನು ಕಣ್ಣಾರೆ ಕಾಣುವ ದೌರ್ಭಾಗ್ಯ ನನಗೊದಗಿ ಬಂದಿತ್ತು.

ಅಂದು ಎಂದಿನಂತೆ ದೆಹಲಿಯ ಕರ್ನಾಟಕ ಭವನದ ವಾರ್ತಾ ಇಲಾಖೆಯಲ್ಲಿ ಕುಳಿತಿದ್ದೆ. ಏಕಾಏಕಿ ನ್ಯೂಸ್ ಚಾನಲ್‌ಗಳಲ್ಲಿ ಉತ್ತರಾಖಂಡದ ವರದಿ ಬಿತ್ತರಿಸಲಾರಂಭಿಸಿತು. ಹತ್ತಾರು ಸಾವಿರ ಜನರು ನಾಪತ್ತೆಯಾಗಿದ್ದಾರೆ ಎಂಬ ಆತಂಕಕಾರಿ ಸುದ್ದಿ ಪ್ರಸಾರವಾಗುತ್ತಿತ್ತು. ಬದರಿನಾಥ, ಕೇದಾರ್‌ನಾಥ ಯಾತ್ರಾಸ್ಥಳಗಳು ಸಂಪೂರ್ಣವಾಗಿ ಗಂಗಾ ನದಿಯ ಪ್ರವಾಹಕ್ಕೆ ತುತ್ತಾಗುತ್ತಿದ್ದ ದೃಶ್ಯಗಳು ಟಿವಿಯಲ್ಲಿ ಪ್ರಸಾರಗೊಳ್ಳುತ್ತಿತ್ತು. ಆ ಕ್ಷಣ ನನಗನ್ನಿಸಿದ್ದು, ನಾನು ಅಲ್ಲಿಗೆ ಹೋಗಬೇಕು, ಅದರ ವರದಿ ಮಾಡಬೇಕು ಎಂದು. ಕೂಡಲೇ ನಮ್ಮ ಸುದ್ದಿವಾಹಿನಿಯ ಕೇಂದ್ರ ಕಚೇರಿಗೆ ಫೋನ್ ಮಾಡಿದೆ. ಅಲ್ಲಿಂದ ಸಮ್ಮತಿ ಸಿಗುವ ವೇಳೆಗೆ ಅದಾಗಲೇ ಸಂಜೆಯಾಗಿತ್ತು. ಸುಮಾರು 5 ಗಂಟೆಗೆ ಫೋನ್ ಬಂತು. ಕೂಡಲೇ ಹೊರಡು ಎಂದರು. ತಡ ಮಾಡದೆ ನಮ್ಮ ತಂಡ ಕಟ್ಟಿಕೊಂಡು ಹೊರಟೇ ಬಿಟ್ಟೆ. ಬೆಳಿಗ್ಗೆ 4 ಗಂಟೆಗೆ ಸರಿಯಾಗಿ ಹರಿದ್ವಾರ ತಲುಪಿದೆವು. ಹೊಟೇಲ್ ಒಂದರಲ್ಲಿ ಫ್ರೆಶ್ ಆಗಿ ಕೆಲಸ ಆರಂಬಿಸಿದೆವು.

ಹರಿದ್ವಾರ, ಭಾರತದ ನಾಗರೀಕತೆಯ ಮತ್ತು ಸಂಸ್ಕೃತಿಯ ಪ್ರತೀಕವಾಗಿರುವ ಧಾಮ. ಹರಿದ್ವಾರ ಮತ್ತು ಹೃಷಿಕೇಶ್ ಭಾಗಶಃ ಗಂಗೆಯ ಕೋಪಕ್ಕೆ ತುತ್ತಾಗಬೇಕಿತ್ತು. ಆದರೆ, ಭಾರತದ ಬೃಹದಾಕಾರದ ತೆಹರಿ ಆಣೆಕಟ್ಟಿನಿಂದಾಗಿ ಈ ಎರಡು ಧಾರ್ಮಿಕ ತಾಣಗಳು ಬಚಾವಾದವು. ಹರಿದ್ವಾರದ ನಂತರ ಬರುವ ಹಳ್ಳಿಗಳು ಬದುಕುಳಿದಿದ್ದು, ಹರಿದ್ವಾರದ ಭೀಮ್ ಗೋಡಾ ಆಣೆಕಟ್ಟಿನಿಂದ. ನಾವು ಅಲ್ಲಿ ತಲುಪಿದ ಮಾರನೇ ದಿನವೇ ಈ ಆಣೆಕಟ್ಟಿನಲ್ಲಿ 48 ಮೃತದೇಹಗಳು ಪತ್ತೆಯಾದವು. ಆ ಶವಗಳನ್ನು ನೋಡಿ ಎದೆ ಝಲ್ ಎನಿಸಿದ್ದು ಸುಳ್ಳಲ್ಲ. ನೀರಲ್ಲಿ ಮುಳುಗಿ ಸಾವನ್ನಪ್ಪಿದವರನ್ನು ನೋಡಿದ್ದು ಇದು ಮೊದಲೇನಲ್ಲ. ಆದರೆ 48 ದೇಹಗಳನ್ನು ಒಟ್ಟಾಗಿ ನೋಡಿದ್ದು ಮೊದಲ ಬಾರಿ. ಅಲ್ಲಿ ಕಾಲಿಡಲು ಸಾಧ್ಯವಾಗುತ್ತಿರಲಿಲ್ಲ. ಹೆಣಗಳ ವಾಸನೆ ಸುಮಾರು 100 ಮೀಟರ್ ದೂರದವರೆಗೂ ಹಬ್ಬಿಕೊಂಡಿತ್ತು. ಗುರುತು ಸಿಗಲಾರದಷ್ಟು ದೇಹಗಳೆಲ್ಲ ಕೊಳೆತು ಹೋಗಿದ್ದವು. ಅವುಗಳನ್ನು ಗುರುತಿಸುವುದು ಇರಲಿ, ನೋಡುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ.

ಜನರ ಮನದೊಳಗೆ ಆತಂಕ ಮಡುಗಟ್ಟಿದ್ದ ಸನ್ನಿವೇಶದಲ್ಲೇ ನನಗೊಂದು ವಿಚಿತ್ರ ಆಸೆ ಮೂಡಿತ್ತು. ಹರಿದ್ವಾರದಲ್ಲೇ ಒಂದು ಬಾರಿ ನೀರಿನ ರಭಸ ಪರೀಕ್ಷಿಸೋಣ ಎಂದು ನಾನು ಗಂಗಾ ನದಿಯಲ್ಲಿ ಇಳಿದಿದ್ದೆ! ಅಬ್ಬಾ, ಆ ನೀರಿನ ರಭಸಕ್ಕೆ ಮನುಷ್ಯ ನಿಲ್ಲುವುದಿರಲಿ, ಈಜಲು ಸಾಧ್ಯವಿಲ್ಲ. ಒಂದು ವೇಳೆ ಈಜಲು ಹೋದ್ರೆ, ಕೈ ಕಾಲು ಬಡಿಯುವ ಅವಶ್ಯಕತೆಯೂ ಇಲ್ಲ, ಏಕೆಂದರೆ, ನೀರೇ ನಿಮ್ಮನ್ನು ಎಳೆದೊಯ್ಯುತ್ತದೆ.

ಹರಿದ್ವಾರದಲ್ಲಿ ಇತ್ತೀಚೆಗಷ್ಟೇ ಒಂದು ಮಲ್ಟಿ ಕಾರ್ ಪಾರ್ಕಿಂಗ್ ಎಂದು ಎರಡು ಅಂತಸ್ತಿನ ಕಟ್ಟಡ ಕಟ್ಟಿದ್ದಾರೆ. ಈ ಕಟ್ಟಡದ ಮೊದಲನೆಯ ಪಾರ್ಕಿಂಗ್‌ನಲ್ಲಿ ಕಾರಿನ ಬದಲಾಗಿ ನದಿಯ ರೇವೆ ಮಣ್ಣು ತುಂಬಿಕೊಂಡಿದೆ. ಪಾರ್ಕಿಂಗ್ ಸ್ಥಳದಲ್ಲೇ ಓರ್ವ ಪ್ರವಾಸಿಗ ಸಿಕ್ಕಿದರು. "ಪ್ರವಾಹ ಬಂದ ದಿನ, ಈ ಭೀಮ್ ಗೋಡಾ ಆಣೆಕಟ್ಟಿನಲ್ಲಿ ಅದೆಷ್ಟೋ ಹೆಣಗಳು ತೇಲಿಕೊಂಡು ಹೋದವು. ಕಾರುಗಳು ಸಹ ಆಟಿಕೆ ಸಾಮಾನುಗಳಂತೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದವು. ಇದನ್ನೆಲ್ಲ ನೋಡಿ ನಮಗೆ ನಾವು ಬದುಕುತ್ತೇವಾ ಅಂತ ಅನಿಸಿತ್ತು ಸರ್" ಎಂದು ಕಣ್ಣಮುಂದಿದ್ದ ಭಯಾನಕ ಚಿತ್ರಣವನ್ನು ಮುಂದಿಟ್ಟರು. ಅವರ ಮಾತನ್ನು ಕೇಳಿದ್ದ ನಾನು ಒಂದು ಬಾರಿ ದಿಕ್ಕು ತೋಚದಂತಾಗಿದ್ದೆ.

ಇದಾದ ಬಳಿಕ ನಾವು ಡೆಹರಾಡೂನ್‌ನ ಮಸ್ಸೂರಿ ಬೈ ಪಾಸ್ ಬಳಿ ಇರುವ ಸಹಸ್ರಧಾರಾ ಹೆಲಿಪ್ಯಾಡ್ ಬಳಿ ಹೊರಟೆವು. ಅದು ಹರಿದ್ವಾರದಿಂದ ಸುಮಾರು 60 ಕಿ.ಮೀ ದೂರದಲ್ಲಿದೆ. ಇಲ್ಲಿ ಪ್ರವಾಹದಲ್ಲಿ ಸಿಲುಕಿದವರ ರಕ್ಷಣಾ ಕಾರ್ಯ ನಡೆಯುತಿತ್ತು. ಬದರಿನಾಥ್, ಗೋಚರ್, ಉತ್ತರಕಾಶಿ, ಗೌರಿಕುಂಡ ಸೇರಿದಂತೆ ಎಲ್ಲೆಲ್ಲಿ ಜನರು ಸಿಲುಕಿಕೊಂಡಿದ್ದರೋ, ಅವರನ್ನು ವಾಪಸ್ ತರುವ ಕೆಲಸ ಸಾಗುತ್ತಿತ್ತು. ಹೋಗುವಾಗ ಆಹಾರ ಸಾಮಾಗ್ರಿಗಳನ್ನು ತೆಗೆದುಕೊಂಡು ಹೋಗುತ್ತಿದ್ದ ಹೆಲಿಕಾಪ್ಟರ್‌ಗಳು, ಬರುವಾಗ ನೊಂದ ಜೀವಗಳನ್ನು ಹೊತ್ತು ತರುತ್ತಿದ್ದವು... ಹೀಗೆ ರಕ್ಷಣಾ ಕಾರ್ಯ ಭರದಿಂದ ನಡೆಯುತ್ತಿತ್ತು. ಆದರೆ, ಈ ಹೆಲಿಕಾಪ್ಟರ್‌ಗಳಿಗೆ ಮೇಲಿಂದ ಮೇಲೆ ಕಾಡುತ್ತಿದ್ದ ಸಮಸ್ಯೆ, ಹವಾಮಾನ ವೈಪರೀತ್ಯ. ಐದು ನಿಮಿಷಕ್ಕೊಮ್ಮೆ ಹವಾಮಾನ ಬದಲಾಗುತ್ತಿತ್ತು. ಹೋದ ಹೆಲಿಕಾಪ್ಟರ್‌ಗಳು ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಹಲವು ಬಾರಿ ವಾಪಸ್ ಬಂದಿದ್ದವು. ವಾಪಸ್ ಬಂದ ಅಧಿಕಾರಿಗಳನ್ನು ನೋಡಿದಾಗ ಅವರ ಮುಖದಲ್ಲಿ ನಿಸ್ಸಹಾಯಕತೆ ಎದ್ದು ಕಾಣುತ್ತಿತ್ತು.

ಅಷ್ಟಿದ್ದರೂ ಸಹ ಕೆಲವು ಹೆಲಿಕಾಪ್ಟರ್‌ಗಳು ಮಂಜು ಕವಿದ ವಾತಾವರಣದಲ್ಲೇ ಗೌರಿಕುಂಡ, ಗೋಚರ್ ಮುಟ್ಟಲು ಪ್ರಯತ್ನಿಸುತ್ತಿದ್ದವು. ಇಂತಹ ಸಮಯದಲ್ಲೇ ಎರಡು ಹೆಲಿಕಾಪ್ಟರ್‌ಗಳು ದುರಂತಕ್ಕಿಡಾದ ಸುದ್ದಿ ತಿಳಿದು ಮನಸಿಗೆ ತುಂಬಾ



ಬೇಸರವಾಯ್ತು. ಅದರಲ್ಲೂ ಒಂದು ಹೆಲಿಕಾಪ್ಟರ್‌ನಲ್ಲಿದ್ದ 20 ಜನರು ಸಾವನ್ನಪ್ಪಿದ್ರು ಅನ್ನುವ ಸುದ್ದಿ ಕೇಳಿ ಪ್ರಕೃತಿ ಮಾತೆಯ ಮುನಿಸು ಹೀಗೂ ಕಾಡಿತಲ್ಲ ಎಂದು ಅವಾಕ್ಕಾದೆ. ಇದೇ ಸಂದರ್ಭದಲ್ಲಿ ಒಂದು ಹೆಲಿಕಾಪ್ಟರ್ ಗೋಚರ್‌ದಿಂದ ಆಗಮಿಸಿತು. ಅದರಲ್ಲಿ ಕರ್ನಾಟಕದ ಬೆಂಗಳೂರಿನ 4 ಜನರಿದ್ದರು. ಆದರೆ, ಅವರ ವ್ಯಥೆ ಕೇಳಿ ಕಣ್ಣುಗಳೆಲ್ಲ ತುಂಬಿ ಹೋದವು. 18 ಕುಟುಂಬ ಸದಸ್ಯರು ಹೋಗಿ ಅದರಲ್ಲಿ ವಾಪಸ್ಸಾಗಿದ್ದು ನಾಲ್ವರು ಮಾತ್ರ. ಉಳಿದವರೆಲ್ಲಿ ಎಂಬ ಪ್ರಶ್ನೆ ಈ ಕುಟುಂಬದ ಸದಸ್ಯರನ್ನು ಕಾಡುತ್ತಲೇ ಇದೆ.

ಈ ಮಧ್ಯೆ ಕರ್ನಾಟಕದ ಹಲವು ಕುಟುಂಬದ ಸದಸ್ಯರು ಫೋನ್ ಮಾಡಿ, ಸರ್ ನಮ್ಮ ತಂದೆ ತಾಯಿ ಬದರಿನಾಥ್‌ನಲ್ಲಿದ್ದಾರೆ, ಅವರನ್ನ ವಾಪಸ್ ಕರೆತನ್ನಿ ಸರ್, ಪ್ಲೀಸ್ ಸರ್ ಅಂತಾ ಅಂಗಲಾಚುತ್ತಿದ್ದರು. ಇನ್ನು ಕೆಲವರು, ನಮ್ಮ ತಂದೆ ತಾಯಂದಿರ ಫೋನ್ ರೀಚ್ ಆಗ್ತಿಲ್ಲ ಸರ್, ಹೇಗಾದ್ರೂ ಮಾಡಿ ಅವರ ಜೊತೆ ಮಾತನಾಡಿಸಿ ಸರ್ ಅಂತಾ ಬೇಡಿಕೊಳ್ಳುತ್ತಿದ್ದರು.







ಮಾಡುತ್ತಿದ್ದರು. ಇದನ್ನು ನೋಡಿ ನಿಜವಾಗಿಯೂ ನನಗೆ ಹೆಮ್ಮೆ ಅನಿಸಿತು. ಆದ್ರೆ, ಇನ್ನೊಂದೆಡೆ ಸಾವಿರಾರು ಜನ ತಮ್ಮ ಸಂಬಂಧಿಕರ ಫೋಟೋ ಹಿಡಿದು ಹುಡುಕುತ್ತಿದ್ದ ಪರಿ ನೋಡಿ, ಕಣ್ಣಲ್ಲಿ ನೀರು ಬಂದಿದ್ದೂ ಇದೆ.

ಹೀಗೆ ಹೃಷಿಕೇಶದಿಂದ ನಾವು ದೇವಪ್ರಯಾಗಕ್ಕೆ ಹೋಗುವ ಪ್ರಯತ್ನ ಮಾಡಿದೆವು. ಅಲ್ಲಿನ ಪರಿಸ್ಥಿತಿಯನ್ನು ಎಳೆಎಳೆಯಾಗಿ ತೋರಿಸುವ ಪ್ರಯತ್ನ ನಮ್ಮದಾಗಿತ್ತು. ಹೀಗೆ ಶಿವಾಲಿಕ ಬೆಟ್ಟಗಳ ಮಧ್ಯದಲ್ಲಿ ಗಂಗಾ ನದಿಯ ದಡದಲ್ಲಿ ರಸ್ತೆಯ ಮೇಲೆ ಹೋಗುವಾಗ, ಕೆಲವು ಕಡೆ ಬೆಟ್ಟಗಳಿಂದ ಬಂಡೆಗಳು ಬಿದ್ದಿದ್ದು ಇದೆ. ಕೆಲವು ಕಡೆ ರಸ್ತೆ ದುರಸ್ಥಿ ಕಾರ್ಯ ನಡೀತಿತ್ತು. ಇನ್ನು ಕೆಲವು ಕಡೆ ಸುಮಾರು 1 ಕಿ.ಮೀವರೆಗೂ ರಸ್ತೆಗಳೇ ಮಾಯವಾಗಿದ್ದವು. ಹಾಗಾಗಿ ವಾಪಸ್ ಬರಬೇಕಾದ ಅನಿವಾರ್ಯ ನಮಗೊದಗಿತು.

ಇದರ ಮಧ್ಯದಲ್ಲಿ ಕೆಲವು ಭಯಾನಕ ಘಟನೆಗಳನ್ನು ಕೇಳಿದೆ. ಶಿವಪುರಿ ಎಂಬ ಚಿಕ್ಕ ಹಳ್ಳಿಯಲ್ಲಿ ಪ್ರವಾಹ ಬರುವ ಮುಂಚೆ ಇಲ್ಲಿ ವಾಟರ್ ರಾಫ್ಟಿಂಗ್ ಕ್ಯಾಂಪ್ ನಡೆಯುತ್ತಿತ್ತು. ಕೇವಲ 5 ನಿಮಿಷಗಳ ಅಂತರದಲ್ಲಿ

ಇದನ್ನು ಕೇಳಿ ಮನಸ್ಸು ಒಂದು ರೀತಿ ವಿಚಲಿತವಾಯ್ತು. ಏನು ಮಾಡಬಹುದು ಎಂಬ ಯೋಚನೆಯಲ್ಲಿ ತೊಡಗಿತು. ಆಗಷ್ಟೇ ಸಚಿವ ಸಂತೋಷ ಲಾಡ್, ಅಧಿಕಾರಿಗಳ ಜೊತೆ ಆಗಮಿಸಿದ್ರು. ಹಾಗಾಗಿ ಎಲ್ಲ ವಿಷಯ ಅವರಿಗೆ ತಿಳಿಸಿದೆ. ವಿಷಯ ತಿಳಿದ ಅವರು ಬದ್ರಿನಾಥ್‌ದಲ್ಲಿರೋ ಜನರನ್ನು ಫೋನ್ ಮೂಲಕವೇ ಮಾತಾಡಿಸಿದ್ರು. ಅವರ ಪರಿಸ್ಥಿತಿ ಕೇಳಿದರು. ಬಳಿಕ ತಾವು ಅಲ್ಲಿಗೆ ಹೋಗುವ ಪ್ರಯತ್ನ ಮಾಡಿದರು. ಸುಮಾರು 3 ದಿನಗಳ ಅವರ ಪ್ರಯತ್ನಕ್ಕೆ 4 ನೇ ದಿನ ಫಲ ಸಿಕ್ಕಿತು. ಕೊನೆಗೂ ಅವರು ಬದರಿನಾಥ್ ತಲುಪಿ ಅಲ್ಲಿದ್ದ ಜನರಿಗೆ ಸ್ವಲ್ಪ ಧೈರ್ಯ ತುಂಬಿದರು.

ಇಷ್ಟೆಲ್ಲ ಆದ ಬಳಿಕ ನಾವು ಡೆಹರಾಡೂನ್‌ನಿಂದ ನೇರವಾಗಿ ಹೃಷಿಕೇಶದತ್ತ ಪ್ರಯಾಣ ಬೆಳೆಸಿದೆವು. ಅಲ್ಲಿ ನಿರಾಶ್ರಿತರ ಕೇಂದ್ರಗಳನ್ನು ತೆರೆಯಲಾಗಿತ್ತು. ಚಿಕಿತ್ಸೆ ನೀಡಲು ವೈದ್ಯರ ತಂಡಗಳು ನೆರೆದಿದ್ದವು. ಬಹಳಷ್ಟು ಜನ ಬೇರೆ ಬೇರೆ ರಾಜ್ಯಗಳಿಂದ ಬಂದು ಸ್ವಯಂ ಪ್ರೇರಿತರಾಗಿ ಉಚಿತ ಊಟ, ನೀರು, ಚಿಕಿತ್ಸೆ ಕೊಡುವ ಕೆಲಸ









ಆ ಕ್ಯಾಂಪ್‌ನಲ್ಲಿದ್ದ 100 ಜನರು ಬಚಾವಾಗಿದ್ದರಂತೆ. ಆದರೆ ಕ್ಯಾಂಪ್ ಮತ್ತು ಅಲ್ಲಿದ್ದ ಕೆಲವು ಮನೆಗಳು ಆಟಿಕೆಯ ವಸ್ತುಗಳಂತೆ ನೀರಲ್ಲಿ ಕೊಚ್ಚಿಕೊಂಡು ಹೋಗಿದ್ದವು.

ಕೋಡಿಯಾಲಾ ಎಂಬಲ್ಲಂತೂ 3 ಅಂಗಡಿಗಳು ನೀರು ಪಾಲಾಗಿದ್ದರೆ, 8 ಮನೆಗಳು ಗಂಗೆಯಲ್ಲಿ ಸಮಾಧಿಯಾಗಿದ್ದವು. ಅದೃಷ್ಟವಶಾತ್ ಅಲ್ಲಿ ಯಾವ ಸಾವುನೋವು ಸಂಭವಿಸಿರಲಿಲ್ಲ. ಇದನ್ನೆಲ್ಲ ನೋಡಿ ನಮ್ಮ ವಾಹನ ಚಾಲಕ ಮುಂದೆ ಹೋಗಲು ನಿರಾಕರಿಸಿದ. ಜೊತೆಗೆ ನಮ್ಮ ಕ್ಯಾಮರಾ ಕೂಡ ಕೆಲಸ ಮಾಡೋದನ್ನ ನಿಲ್ಲಿಸಿ ಬಿಟ್ಟಿತ್ತು. ಹೀಗಾಗಿ ನಾವು ವಾಪಸ್ ಬರಬೇಕಾಯ್ತು.

ಇಲ್ಲಿ ಹೇಳಲು ಇನ್ನೂ ಸಾಕಷ್ಟು ವಿಷಯ ಇದೆ. ಆದರೆ, ಎಲ್ಲವನ್ನೂ ಇಲ್ಲಿ ಹೇಳಲು ಸಾಧ್ಯವಾಗುತ್ತಿಲ್ಲ. ಮನಕಲಕಿದ್ದ ಆ ಹೃದಯವಿದ್ರಾವಕ ದೃಶ್ಯಗಳು ಈಗಲೂ ಕಣ್ಣಿಗೆ ಬಡಿದಂತೆ ಭಾಸವಾಗುತ್ತಿದೆ.

**○ ಅರುಣಕುಮಾರ ಸಿ. ಬಡಿಗೇರ್**
ದೆಹಲಿ ಬ್ಯೂರೊ ಮುಖ್ಯಸ್ಥ, ಪಬ್ಲಿಕ್ ಟಿವಿ

# ಜಲಪ್ರಳಯಕ್ಕೆ ತತ್ತರಿಸಿದ ಉತ್ತರಾಖಂಡ್



ಹಿಮಾಲಯದ ತಪ್ಪಲಿನ ಉತ್ತರಾಖಂಡ್ ರಾಜ್ಯ ಜಲಪ್ರಳಯಕ್ಕೆ ತತ್ತರಿಸಿದೆ. ಸಾವಿರಾರು ಜನರ ಜೀವಗಳು ಬಲಿಯಾಗಿವೆ. ಸಾವಿನ ನಿಖರ ಸಂಖ್ಯೆ ಯಾರಿಗೂ ತಿಳಿದಿಲ್ಲ. ಆದರೆ ಅಂದಾಜು ಹತ್ತರಿಂದ ಹದಿನೈದು ಸಾವಿರ ಮಂದಿಯಂತೂ ದೇವರ ದರ್ಶನಕ್ಕೆ ಹೋಗಿ ದಾರುಣ ಅಂತ್ಯ ಕಂಡಿದ್ದಾರೆ. ಹಿಂದೂಗಳಲ್ಲಿ ಜೀವನದಲ್ಲಿ ಒಮ್ಮೆಯಾದರೂ ಕೇದಾರನಾಥ್ ಮತ್ತು ಬದರಿನಾಥ್ ದೇವರ ದರ್ಶನ ಪಡೆದರೆ ಸ್ವರ್ಗ ಪ್ರಾಪ್ತಿಯಾಗುತ್ತೆ ಎನ್ನುವ ನಂಬಿಕೆ ಇದೆ. ಈ ನಂಬಿಕೆಯಿಂದಾಗಿಯೇ ಇಳಿವಯಸ್ಸಿನಲ್ಲಿರುವ ಜನರು ಹೆಚ್ಚಾಗಿ ಕೇದಾರನಾಥ ಮತ್ತು ಬದರಿನಾಥ್ ದೇವರ ದರ್ಶನಕ್ಕೆ ಭೇಟಿ ನೀಡುತ್ತಾರೆ. ಆದರೆ ದೇವರ ಸನ್ನಿಧಿಗೆ ಹೋದಾಗಲೇ ಯಮರಾಯ ಜೀವಗಳನ್ನು ಬಲಿ ತೆಗೆದುಕೊಂಡಿದ್ದಾನೆ. ಮಂದಾಕಿನಿ ನದಿಯ ಆರ್ಭಟ ಹೆಚ್ಚಾದಾಗ ಭಕ್ತರು ಕೇದಾರನಾಥ್ ದೇವಸ್ಥಾನದ ಒಳಗೆ ಓಡಿ ಹೋಗಿದ್ದಾರೆ. ಆದರೆ ದೇವಸ್ಥಾನದ ಒಳಗೆ ಹೋದರೂ ಸಾವಿನಿಂದ ಪಾರಾಗಲು ಸಾಧ್ಯವಾಗಲಿಲ್ಲ. ಇನ್ನೂ ಸಾವಿರಾರು ಮಂದಿ ನದಿ ನೀರಿನ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದಾರೆ. ಮಂದಾಕಿನಿ ನದಿಯ ಅನೇಕ ಕಡೆ ಪ್ರವಾಹ ಬಂದ ಹತ್ತು ಹದಿನೈದು ದಿನಗಳ ಬಳಿಕವೂ ಅನೇಕರ ಶವಗಳು ಸಿಲುಕಿಕೊಂಡಿದ್ದು ಪತ್ತೆಯಾಗಿದೆ. ಮಂದಾಕಿನಿ ನದಿ ಉಕ್ಕಿ ಹರಿದಿದ್ದಕ್ಕೆ ಈಗ ಹಲವರು ತಮ್ಮ ನಂಬಿಕೆ, ಆಧಾರಗಳಿಗೆ ಅನುಗುಣವಾಗಿ ಅನೇಕ ಕಾರಣಗಳನ್ನು ಕೊಡುತ್ತಿದ್ದಾರೆ. ಉತ್ತರಾಖಂಡ್‌ದ ಶ್ರೀನಗರ ಬಳಿ ನದಿ ದಡದಲ್ಲಿದ್ದ ಧರಿ ದೇವಿ ವಿಗ್ರಹವನ್ನು ರೆಸಾರ್ಟ್ ನಿರ್ಮಿಸಲು ಸ್ಥಳಾಂತರಿಸಿದ್ದರಿಂದ ಪ್ರವಾಹ ಬಂತು ಅಂತಾ ಆಸ್ತಿಕರು ಹೇಳಿದ್ದಾರೆ. ಮೇಘಸ್ಫೋಟದಿಂದ ಪ್ರವಾಹ ಬಂತು ಅಂತಾ ಇನ್ನೂ ಕೆಲವರ ವಾದ. ಮಂದಾಕಿನಿ ನದಿಯು ಈ ಮೊದಲು ಎರಡು ಕವಲುಗಳಾಗಿ ದೇವಸ್ಥಾನದ ಎಡ ಮತ್ತು ಬಲಭಾಗದಲ್ಲಿ ಹರಿಯುತ್ತಿತ್ತು. ಆದರೆ ದೇವಸ್ಥಾನದ ಹಿಂಭಾಗ ಕಟ್ಟಡಗಳನ್ನು ಕಟ್ಟಿದ್ದರಿಂದ ನದಿಯು ದಿಕ್ಕು ಬದಲಿಸಿ ಒಂದೇ ಕವಲು ಆಗಿ ದೇವಸ್ಥಾನದ ಎಡಭಾಗದಲ್ಲಿ ಮಾತ್ರ ಹರಿಯಲಾರಂಭಿಸಿತು. ಇದರಿಂದ ಕೇದಾರನಾಥ್ ದೇವಸ್ಥಾನದ ಬಳಿ ಹೆಚ್ಚಿನ ನೀರು ಉಕ್ಕಿ ಹರಿದು ದೇವಸ್ಥಾನದ ಆವರಣ ಮುಳುಗಡೆಯಾಯಿತು. ಆದರೆ ಸ್ಯಾಟಲೈಟ್ ಫೋಟೋಗಳ ಆಧಾರದ ಮೇಲೆ ನೋಡಿದಾಗ ಭಾರಿ ಮಳೆ ನೀರಿನಿಂದಲೇ ಮಂದಾಕಿನಿ ನದಿ ಉಕ್ಕಿ ಹರಿದು ಪ್ರವಾಹ ಬಂದಿದೆ. ಮೇಘಸ್ಫೋಟ ಸಂಭವಿಸಿಲ್ಲ. ಶೇಕಡಾ 449 ರಷ್ಟು ಹೆಚ್ಚಿನ ಮಳೆ ಬಂದಿದ್ದರಿಂದ ಪ್ರವಾಹ ಸಂಭವಿಸಿದೆ ಅಂತ ಹವಾಮಾನ ಇಲಾಖೆ ಹೇಳಿದೆ. ಉತ್ತರಾಖಂಡ್ ರಾಜ್ಯದಲ್ಲಿ ಜೂನ್ 14 ರಿಂದ 17ರವರೆಗೆ ಭಾರಿ ಮಳೆಯಾಗುತ್ತೆ ಎನ್ನುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿತ್ತು. ಆದರೆ ಈ ಮುನ್ಸೂಚನೆಯನ್ನು ಉತ್ತರಾಖಂಡ್ ರಾಜ್ಯ ಸರ್ಕಾರ ನಿರ್ಲಕ್ಷಿಸಿ ಕಸದ ಬುಟ್ಟಿಗೆ ಹಾಕಿತ್ತು. ಇದರ ಪರಿಣಾಮವೇ ಸಾವಿರಾರು ಜನರ ಜೀವಗಳು ಬಲಿಯಾದವು. ಉತ್ತರಾಖಂಡ್ ಸರ್ಕಾರ, ಸ್ವಲ್ಪವಾದರೂ ಹವಾಮಾನ ಇಲಾಖೆಯ ಮುನ್ಸೂಚನೆಯನ್ನು ಗಂಭೀರವಾಗಿ ಪರಿಗಣಿಸಿ ನದಿದಡದಲ್ಲಿದ್ದ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದ್ದರೆ, ಕೇದಾರನಾಥ್ ಮತ್ತು ಬದರಿನಾಥ್ ಯಾತ್ರೆಯನ್ನು ನಾಲ್ಕೈದು ದಿನ ಮುಂದೂಡಿದ್ದರೆ, ಸಾವಿರಾರು ಜನರ ಜೀವಗಳು ಬಲಿಯಾಗುವುದನ್ನು ತಪ್ಪಿಸಬಹುದಿತ್ತು. ಆದರೆ ನಮ್ಮ ಸರ್ಕಾರಗಳಿಗೆ ಕಣ್ಣೂ ಇಲ್ಲ, ಕಿವಿಯೂ ಇಲ್ಲ. ಬಾಯಿಯೂ ಇಲ್ಲ.

ನಾವು ಪ್ರವಾಹ ಬಂದ ಎರಡು ದಿನಗಳ ಬಳಿಕ ಉತ್ತರಾಖಂಡ್‌ಗೆ ದೆಹಲಿಯಿಂದ ಹೊರಟೆವು. ರಾತ್ರಿ ಹೊರಟ ನಮ್ಮ ಕಾರು ಮುಂಜಾನೆ ಐದು ಗಂಟೆಯಲ್ಲಿ ಹೃಷಿಕೇಶ ದಾಟಿ ಗಂಗಾ ನದಿಯ ಪಕ್ಕದ ರಸ್ತೆಯಲ್ಲೇ ದೇವಪ್ರಯಾಗದತ್ತ ಹೊರಟಿತ್ತು. ಒಂದೆಡೆ ಗಂಗಾ ನದಿಯನ್ನು ಮೊದಲ ಬಾರಿ ನೋಡಿದ ಖುಷಿಯಾದರೆ, ಮತ್ತೊಂದೆಡೆ ಕಿರಿದಾದ ರಸ್ತೆಯಲ್ಲಿ ಕಾರು ನದಿ ಪಕ್ಕದಲ್ಲೇ ಚಲಿಸುತ್ತಿದುದ್ದನ್ನು ನೋಡಿ ಭಯ ಶುರುವಾಗಿತ್ತು. ಕಾರು ಚಾಲಕ ಸ್ವಲ್ಪ ಯಾಮಾರಿದರೂ ಕಾರು ನದಿಗೆ ಬೀಳುತ್ತೆ. ಅಷ್ಟು ಕಿರಿದಾದ ರಸ್ತೆ. ಕರ್ನಾಟಕದಲ್ಲಿ ಕಾಲುದಾರಿಗಳು ಕೂಡ ಆ ರಸ್ತೆಗಿಂತ ಅಗಲವಾಗಿರುತ್ತವೆ. ರಸ್ತೆಯ ಬಲಭಾಗದಲ್ಲಿ ಸಾವಿರ ಅಡಿ ಆಳದಲ್ಲಿ ಭೋರ್ಗರೆದು ಹರಿಯುತ್ತಿರುವ ಗಂಗಾ ನದಿ. ರಸ್ತೆಯ ಎಡಭಾಗದಲ್ಲಿ ಭಾರಿ ಬೆಟ್ಟಗುಡ್ಡ. ಬೆಟ್ಟಗುಡ್ಡಗಳಿಂದ ಕಲ್ಲುಬಂಡೆಗಳು ರಸ್ತೆಗೆ ಕುಸಿದು ಬೀಳೋದು, ರಸ್ತೆಯಲ್ಲಿ ಭೂ ಕುಸಿತವೂ ಸಾಮಾನ್ಯ. ಉತ್ತರಾಖಂಡ್ ರಾಜ್ಯದುದ್ದಕ್ಕೂ ಕಿರಿದಾದ ಈ ರಸ್ತೆಗಳಲ್ಲೇ ಜೀವ ಕೈಯಲ್ಲಿ ಹಿಡಿದುಕೊಂಡು ಕಾರಿನಲ್ಲಿ ಸಂಚರಿಸಬೇಕಾದ ಅನಿವಾರ್ಯ ಸ್ಥಿತಿ. ಅಂತೂ ಬೆಳಿಗ್ಗೆ ಏಳು ಗಂಟೆ ವೇಳೆಗೆ ನಾವು ದೇವಪ್ರಯಾಗ ತಲುಪಿದ್ದೆವು. ಈ ದೇವಪ್ರಯಾಗದಲ್ಲೇ ಅಲಕಾನಂದ ಮತ್ತು ಭಾಗೀರಥಿ ನದಿಗಳು ಸಂಗಮವಾಗುತ್ತವೆ. ಇಲ್ಲಿಂದ ಮುಂದೆ ಹರಿಯುವ ನದಿಯೇ ಪವಿತ್ರ ಗಂಗಾ ನದಿ–ಗಂಗಾ ಮಾತೆ. ನಾವು ಹೋದಾಗ ಗಂಗಾ ನದಿಯಲ್ಲಿ ನೀರಿನ ಆರ್ಭಟ ಸ್ವಲ್ಪ ಕಡಿಮೆಯಾಗಿತ್ತು ಅಂತ ಸ್ಥಳೀಯರು ಹೇಳಿದ್ದರು. ಎರಡು ಮೂರು ದಿನಗಳ ಹಿಂದೆ ಇನ್ನೂ ಹತ್ತು ಹದಿನೈದು ಅಡಿ ಎತ್ತರದಲ್ಲಿ ಗಂಗಾ ನದಿ ಉಕ್ಕಿ ಹರಿಯುತ್ತಿತ್ತು. ನದಿ ದಂಡೆಯಲ್ಲಿದ್ದ ಮನೆ, ರೆಸಾರ್ಟ್, ಲಾಡ್ಜ್ ಗಳೆಲ್ಲಾ ನದಿ ನೀರಿನ ಆರ್ಭಟಕ್ಕೆ ಕುಸಿದು ಹೋಗಿದ್ದವು. ನೂರಾರು ಜನರು ಅಂಗಡಿ, ಮನೆ ಕಳೆದುಕೊಂಡು ನಿರಾಶ್ರಿತರಾಗಿದ್ದರು. ಆದರೆ ಇದರಲ್ಲಿ ಜನರ ತಪ್ಪು ಕೂಡ ಇದೆ. ಮಳೆ, ನದಿ, ಪ್ರವಾಹವನ್ನು ದೂಷಿಸುವುದರಲ್ಲಿ ಯಾವುದೇ ಅರ್ಥ ಇಲ್ಲ. ನದಿ ದಂಡೆಯ ನೂರು ಮೀಟರ್ ಜಾಗದಲ್ಲಿ ಯಾವುದೇ ಮನೆ, ರೆಸಾರ್ಟ್, ಕಟ್ಟಡ ಕಟ್ಟಬಾರದು ಎಂದು ವರ್ಷಗಳ ಹಿಂದೆಯೇ ನಿಯಮ ರೂಪಿಸಿದ್ದರೂ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದರು. ಉತ್ತರಾಖಂಡ್ ರಾಜ್ಯ ಹೇಳಿಕೇಳಿ ಬೆಟ್ಟಗುಡ್ಡಗಳ ರಾಜ್ಯ. ಕರ್ನಾಟಕದಂತೆ ಸಮತಟ್ಟಾದ ಭೂಮಿ ಸಿಗುವುದೇ ಅಪರೂಪ. ಉತ್ತರಾಖಂಡ್ ದಲ್ಲಿ ಜನರು ಬೆಟ್ಟಗುಡ್ಡಗಳ ಮೇಲೆ ಮನೆ ಕಟ್ಟಿಕೊಂಡು ವಾಸಿಸುತ್ತಾರೆ ಇಲ್ಲವೇ, ನದಿ ದಂಡೆಯಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಾರೆ. ನದಿ ದಂಡೆಯಲ್ಲಿ ಮನೆ ಕಟ್ಟಿಕೊಂಡು ವಾಸಿಸುವುದೇ ಜನರ ಜೀವಕ್ಕೆ ಕುತ್ತು ತಂದಿತು.

ದೇವ ಪ್ರಯಾಗದಿಂದ 35 ಕಿಲೋಮೀಟರ್ ದೂರ ಇರೋ ಶ್ರೀನಗರಕ್ಕೆ ಹೋದೆವು. ಶ್ರೀನಗರದಿಂದ ರುದ್ರಪ್ರಯಾಗಕ್ಕೆ ಹೋಗೋ ಎನ್.ಎಚ್.58 ರಸ್ತೆಯು ಭೂಕುಸಿತದಿಂದ ಬಂದ್ ಆಗಿತ್ತು. ಹೀಗಾಗಿ ಸುತ್ತಿ ಬಳಸಿ ರುದ್ರಪ್ರಯಾಗ ತಲುಪಲು ಹೊರಟೆವು.

## ರಸ್ತೆಗೆ ಬಿದ್ದ ಬಂಡೆಗಲ್ಲು

ಆದರೆ ನಾವು ಹೋಗುತ್ತಿದ್ದ ರಸ್ತೆಯಲ್ಲಿ ಸಂಜೆ ನಾಲ್ಕು ಗಂಟೆ ವೇಳೆಗೆ ಬೆಟ್ಟದಿಂದ ದೊಡ್ಡ ಬಂಡೆಗಲ್ಲು ಕುಸಿದು ರಸ್ತೆಗೆ ಬಿತ್ತು. ನಾವು ಇನ್ನೂ ಐದು ನಿಮಿಷ ಮುಂಚೆ ಹೋಗಿದ್ದರೂ ನಮ್ಮ ಕಾರು, ಬಂಡೆಗಲ್ಲು ಕುಸಿದ ಸ್ಥಳದಿಂದ ಮುಂದೆ ಹೋಗಿರುತ್ತಿತ್ತು. ಆದರೆ ಬಂಡೆಗಲ್ಲು ಕುಸಿದು ರಸ್ತೆಗೆ ಬಿದ್ದಿದ್ದರಿಂದ ನಾವು ಮಾರ್ಗಮಧ್ಯೆಯೇ ಸಿಲುಕಿಕೊಳ್ಳಬೇಕಾಯಿತು. ಶ್ರೀನಗರಕ್ಕೆ ವಾಪಸ್ ಬಂದರೂ ರುದ್ರಪ್ರಯಾಗ ತಲುಪಲು ಬೇರೆ ರಸ್ತೆಗಳಿಲ್ಲ. ಹೀಗಾಗಿ ಬಂಡೆಗಲ್ಲನ್ನು ರಸ್ತೆಯಿಂದ ಬೇಗ ತೆರವುಗೊಳಿಸಬಹುದೆಂದು ಅದೇ ಸ್ಥಳದಲ್ಲಿ ಕಾದೆವು. ನಮ್ಮ ಜೊತೆಗೆ ರಾಷ್ಟ್ರೀಯ ವಿಕೋಪ ನಿರ್ವಹಣಾ ತಂಡದ ಒಂದು ಬೆಟಾಲಿಯನ್ ಕೂಡ ರಸ್ತೆಯಲ್ಲಿ ಸಿಲುಕಿಕೊಂಡಿತ್ತು. ಸಂಜೆ ಆರು ಗಂಟೆ ವೇಳೆಗೆ ಎರಡು ಜೆಸಿಬಿ ವಾಹನಗಳು ಸ್ಥಳಕ್ಕೆ ಬಂದವು. ಹೀಗಾಗಿ ಬೇಗ ಬಂಡೆಗಲ್ಲು ತೆರವುಗೊಳಿಸಿ ರಸ್ತೆ ಸಂಚಾರ ಸುಗಮಗೊಳಿಸಬಹುದೆಂಬ ಆಶಾಭಾವನೆ ಮೂಡಿತ್ತು. ಆದರೆ ಬಂಡೆಗಲ್ಲಿನ ಹತ್ತಿರ ಹೋಗಿ ನೋಡಿದಾಗ ಪರಿಸ್ಥಿತಿ ಬೇರೆಯೇ ಇತ್ತು. ಏಕೆಂದರೆ ರಸ್ತೆಗೆ ಕುಸಿದಿದ್ದ ಬಂಡೆಗಲ್ಲು ಸಾಮಾನ್ಯದಲ್ಲ. ಅದೊಂದು ಭಾರಿ ಬಂಡೆಗಲ್ಲು. ಅದನ್ನು ಜೆಸಿಬಿಯಿಂದ ತೆರವುಗೊಳಿಸಲು ಖಂಡಿತ ಸಾಧ್ಯವಿರಲಿಲ್ಲ. ಬಂಡೆಗಲ್ಲನ್ನು ಜಿಲಿಟಿನ್ ನಿಂದ ಸಿಡಿಸಿ ಛಿದ್ರಗೊಳಿಸಿದ ಬಳಿಕವಷ್ಟೇ ತೆರವುಗೊಳಿಸಬೇಕಾಗಿತ್ತು. ರಾತ್ರಿ ವೇಳೆ ಜಿಲೆಟಿನ್ ಸಿಡಿಸುವ ರಿಸ್ಕ್ ಅನ್ನು ಅಧಿಕಾರಿಗಳೂ ತೆಗೆದುಕೊಳ್ಳಲ್ಲ.

## ಕಾಡಿನ ಮಧ್ಯೆ ಒಂದು ರಾತ್ರಿ

ರಾತ್ರಿ ಇಡೀ ನಾವು ರಸ್ತೆಯಲ್ಲೇ ಕಾಲ ಕಳೆಯಬೇಕಾಯಿತು. ನಮ್ಮ ಜೊತೆ ಇದ್ದ ರಾಷ್ಟ್ರೀಯ ವಿಕೋಪ ನಿರ್ವಹಣಾ ತಂಡದ ಟೆಂಪೋದಲ್ಲಿ ಅಡುಗೆ ಸಾಮಾಗ್ರಿಗಳಿದ್ದವು. ಅವರು ಅಲ್ಲಿ ಕಾಡಿನಲ್ಲಿ ಇದ್ದ ಒಣ ಸೌದೆ ತಂದು ಅಡುಗೆ ಮಾಡಿದ್ದರು. ಅವರು ಕೊಟ್ಟ ಕಿಚಡಿ ತಿಂದು ರಾತ್ರಿ ಕಾಡಿನಲ್ಲೇ ಕಾರಿನಲ್ಲಿ ಮಲಗಿದೆವು. ಬೆಳಿಗ್ಗೆ ಎದ್ದು ನೋಡಿದಾಗ ಬಂಡೆಗಲ್ಲು ಸ್ವಲ್ಪವೂ ಸ್ಥಳ ಬದಲಿಸಿರಲಿಲ್ಲ. ಹೀಗಾಗಿ ಒಂದು ದಿನ ಕಳೆದರೂ ಬಂಡೆಗಲ್ಲು ತೆರವುಗೊಳಿಸುವುದು ಸಾಧ್ಯವಿಲ್ಲ ಎನ್ನುವುದು ಮನವರಿಕೆಯಾಗಿತ್ತು. ಅಷ್ಟರಲ್ಲಿ ಶ್ರೀನಗರದಿಂದ ರುದ್ರಪ್ರಯಾಗಕ್ಕೆ ಹೋಗೋ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳು ಸಂಚರಿಸುತ್ತಿವೆ ಎನ್ನುವುದು ಗೊತ್ತಾಯಿತು. ಹೀಗಾಗಿ ವಾಪಸ್ ಬಂದು, ಶ್ರೀನಗರ ಮೂಲಕ ರುದ್ರಪ್ರಯಾಗ ತಲುಪಿದೆವು. ರಾತ್ರಿ ರುದ್ರಪ್ರಯಾಗದಲ್ಲಿ ತಂಗಿದ್ದು, ಬೆಳಿಗ್ಗೆ ಗುಪ್ತಕಾಶಿಯತ್ತ ಹೊರಟೆವು. ಬೆಳಿಗ್ಗೆ ಏಳು ಗಂಟೆಗೆ ಕಾರಿನಲ್ಲಿ ಹೊರಟಾಗ ಮತ್ತೆ ಉತ್ತರಾಖಂಡ್ ದ ಸಾವಿನ ರಸ್ತೆಗಳ ದರ್ಶನವಾಯಿತು. ರಸ್ತೆ ಪಕ್ಕದಲ್ಲಿ ಸಾವಿರ ಅಡಿ ಆಳದ ಪ್ರಪಾತ. ಇಕ್ಕಟ್ಟಾದ, ಕಿರಿದಾದ, ಗುಂಡಿಬಿದ್ದ ರಸ್ತೆಗಳು.

## ಯಾತ್ರಾರ್ಥಿಗಳ ದರೋಡೆ, ಅತ್ಯಾಚಾರ

ಮಾರ್ಗಮಧ್ಯೆ ಬೆಳಗ್ಗಿನ ತಿಂಡಿ ತಿನ್ನಲು ಕಾರು ನಿಲ್ಲಿಸಿದಾಗ ನೇಪಾಳಿಗಳು ಯಾತ್ರಾರ್ಥಿಗಳನ್ನು ದೋಚುತ್ತಿದ್ದಾರೆ ಎನ್ನುವ ಮಾಹಿತಿ ಬಂತು. ಹೋಟೇಲ್ ಬಳಿ ಪೋಲೀಸರು ಕಾಲ್ನಡಿಗೆಯಲ್ಲಿ ಹೋಗುತ್ತಿದ್ದ ನೇಪಾಳಿಗಳನ್ನು ತಡೆದು ಅವರ ಬ್ಯಾಗ್ ತಪಾಸಣೆಗೊಳಪಡಿಸಿದ್ದರು. ಆಗಲೇ ಇಪ್ಪತ್ತಕ್ಕೂ ಹೆಚ್ಚು ಮೊಬೈಲ್ ಫೋನ್‌ಗಳು ಸಿಕ್ಕವು. ಇದು ಅನುಮಾನಕ್ಕೆ ಮತ್ತಷ್ಟು ಪುಷ್ಠಿ ನೀಡಿತು. ಸ್ಥಳೀಯರು ಕೂಡ ಸಂಕಷ್ಟಕ್ಕೆ ಸಿಲುಕಿಕೊಂಡ ಯಾತ್ರಾರ್ಥಿಗಳಿಗೆ ಸಹಾಯ ಮಾಡೋ ನೆಪದಲ್ಲಿ ಹಣ, ಒಡವೆ ದೋಚುತ್ತಿದ್ದಾರೆ. ಇದೊಂದು ಬೆಂಕಿ ಬಿದ್ದ ಮನೆಯಲ್ಲಿ ಗಳ ಇರಿಯುವ ಕೆಲಸ. ಕನಿಷ್ಠ ಮಾನವೀಯತೆಯೂ ಇಲ್ಲದೇ ಮೊದಲೇ ಸಂಕಷ್ಟದಲ್ಲಿರುವ ಜನರನ್ನು ದೋಚುವವರದ್ದು ಮನುಷ್ಯತ್ವವೂ ಇಲ್ಲದ ಮೃಗೀಯ ವರ್ತನೆ. ಕೆಲವು ನೇಪಾಳಿಗಳು ಮಹಿಳೆಯರ





ಮೇಲೆ ಅತ್ಯಾಚಾರ ಎಸಗುತ್ತಿದ್ದಾರೆ ಎನ್ನುವುದು ಗೊತ್ತಾಯಿತು. ಮಧ್ಯಾಹ್ನದ ಊಟವೂ ಇಲ್ಲದೇ ಸಂಜೆ ವೇಳೆಗೆ ಗುಪ್ತಕಾಶಿ ತಲುಪಿದೆವು. ಗುಪ್ತಕಾಶಿಗೆ ಕೇದಾರನಾಥ್, ಗೌರಿಕುಂಡ್ ದಲ್ಲಿ ಸಿಲುಕಿಕೊಂಡಿದ್ದ ಯಾತ್ರಾರ್ಥಿಗಳನ್ನು ಹೆಲಿಕಾಪ್ಟರ್ ಮೂಲಕ ಕರೆತರಲಾಗುತ್ತಿತ್ತು. ನಾವು ತಕ್ಷಣ ಹೆಲಿಪ್ಯಾಡ್ ನತ್ತ ಹೋದೆವು. ಹೆಲಿಪ್ಯಾಡ್ ಶೂಟಿಂಗ್ ಮಾಡುತ್ತಿದ್ದಾಗ ಕೆಲವು ಕನ್ನಡಿಗರು ಸಿಕ್ಕರು. ಬೆಂಗಳೂರಿನ ಮಂಜುನಾಥ್, ಅರುಣ್ ಮತ್ತು ರಾಯಚೂರಿನ ಶ್ರೀನಿವಾಸ್ ಶೆಟ್ಟಿ ದಂಪತಿಗಳು ಸಿಕ್ಕರು. ಮಂಜುನಾಥ್ ತಮ್ಮ ಕುಟುಂಬದ ಸದಸ್ಯರು ನಾಪತ್ತೆಯಾಗಿದ್ದಾರೆ. ಅವರು ಬರದೇ ನಾವು ಮಾತ್ರ ಹೇಗೆ ಬೆಂಗಳೂರಿಗೆ ವಾಪಸ್ ಹೋಗಲಿ ಎಂದು ಸಂಕಷ್ಟ ಹೇಳಿಕೊಂಡು ಗುಪ್ತಕಾಶಿ ಹೆಲಿಪ್ಯಾಡ್‌ನಲ್ಲಿ ಕೇದಾರನಾಥ್‌ದಿಂದ ಬರೋ ಹೆಲಿಕಾಪ್ಟರ್‌ಗಳನ್ನೆಲ್ಲಾ ನೋಡುತ್ತಿದ್ದರು. ಹೆಲಿಕಾಪ್ಟರ್‌ಗಳಲ್ಲಿ ತಮ್ಮ ಕುಟುಂಬದ ಸದಸ್ಯರು ಬರಬಹುದು ಎನ್ನುವ ಆಶಾಭಾವನೆಯಿಂದ ಕಾಯುತ್ತಿದ್ದರು. ಇನ್ನು ಬೆಂಗಳೂರಿನ ಅರುಣ್ ಅವರದ್ದು ಇದೇ ಕಥೆ. ತಮ್ಮ ಜೊತೆ ಕೇದಾರನಾಥ್‌ಗೆ ಇನ್ನೂ ಐದು ಮಂದಿ ಬಂದಿದ್ದರು. ಆದರೆ ಪ್ರವಾಹ ಬಂದಾಗ ಎಲ್ಲರೂ ದಿಕ್ಕಾಪಾಲಾಗಿದ್ದೇವೆ. ಜೊತೆಯಲ್ಲಿ ಬಂದಿದ್ದವರು ಎಲ್ಲಿದ್ದಾರೆ ಎನ್ನುವುದೇ ಗೊತ್ತಿಲ್ಲ. ಹೆಲಿಕಾಪ್ಟರ್ ನಲ್ಲಿ ಬರಬಹುದು ಎಂದು ಕಾಯುತ್ತಿದ್ದೇನೆ ಎಂದರು. ಶ್ರೀನಿವಾಸ್ ಶೆಟ್ಟಿ ದಂಪತಿ, ಪ್ರವಾಹ ಬಂದಾಗ ತಾವು ತಂಗಿದ್ದ ಹೋಟೇಲ್ ನಲ್ಲಿ ಎಲ್ಲರನ್ನೂ ಎರಡು ಮತ್ತು ಮೂರನೇ ಮಹಡಿಗೆ ಹತ್ತಿಸಿದ್ದರು. ಇದರಿಂದ ಜೀವ ಉಳಿಯಿತು. ಪ್ರವಾಹದಲ್ಲಿ ಅನೇಕರು ಕೊಚ್ಚಿಕೊಂಡು ಹೋಗಿದ್ದನ್ನು ನೋಡಿದ್ದೆವು. ಅನೇಕರ ಬ್ಯಾಗ್‌ಗಳು ಕೊಚ್ಚಿಕೊಂಡು ಹೋದವು. ತಾವು ಜೀವಂತವಾಗಿ ಬಂದಿದ್ದೇ ದೊಡ್ಡದು. ಈಗ ವಾಪಸ್ ಸುರಕ್ಷಿತವಾಗಿ ರಾಯಚೂರಿಗೆ ಹೋದರೆ, ಸಾಕಪ್ಪಾ ಎಂದು ತಮ್ಮ ಕಣ್ಣೆದುರೇ ನಡೆದ ಘಟನೆಯನ್ನು ವಿವರಿಸಿದರು. ಗುಪ್ತಕಾಶಿಯಿಂದ ಕೇದಾರನಾಥ್ ದೇವಸ್ಥಾನಕ್ಕೆ ನಲವತ್ತೇಳು ಕಿಲೋಮೀಟರ್ ದೂರ. ಕೇದಾರನಾಥ್ ಮತ್ತು ಕೇದಾರನಾಥ್ ದಿಂದ ಹದಿಮೂರು ಕಿಲೋಮೀಟರ್ ಕೆಳಗಡೆ ಇರೋ ಗೌರಿಕುಂಡ್ ದಲ್ಲಿ ಸಿಲುಕಿಕೊಂಡಿದ್ದ ಜನರನ್ನು ಹೆಲಿಕಾಪ್ಟರ್‌ಗಳು ಗುಪ್ತಕಾಶಿಗೆ ಕರೆತರುತ್ತಿದ್ದವು. ಗುಪ್ತಕಾಶಿಯಿಂದ ರಸ್ತೆ ಮಾರ್ಗವಾಗಿ ಯಾತ್ರಾರ್ಥಿಗಳು ಹರಿದ್ವಾರ, ಹೃಷಿಕೇಶ ಮತ್ತು ಡೆಹರಾಡೂನ್ ತಲುಪಲು ವಾಹನದ ವ್ಯವಸ್ಥೆ ಮಾಡಲಾಗಿತ್ತು. ಮಾರನೇ ದಿನ ನಾವೂ ಕೂಡ ವಾಯುಪಡೆಯ ಹೆಲಿಕಾಪ್ಟರ್ ಹತ್ತಿ ಡೆಹರಾಡೂನ್‌ಗೆ ಬಂದೆವು.



### ಕೇದಾರನಾಥ್ ಇಲ್ಲವೇ ಬದರಿನಾಥ್‌ಗೆ ಹೋಗಲು ಹರಸಾಹಸ

ಚಾರುಧಾಮಗಳಲ್ಲಿ ಪ್ರಮುಖವಾದವುಗಳೆಂದರೆ, ಕೇದಾರನಾಥ್ ಮತ್ತು ಬದರಿನಾಥ್. ಕೇದಾರನಾಥ್ ಪ್ರವಾಹಕ್ಕೆ ಹೆಚ್ಚು ತುತ್ತಾಗಿ ಜನರನ್ನು ಬಲಿ ಪಡೆದು, ಹೆಚ್ಚಿನ ಹಾನಿ ಸಂಭವಿಸಿದ ಸ್ಥಳ. ಅದೃಷ್ಟವಶಾತ್ ಬದರಿನಾಥ್ ದಲ್ಲಿ ಪ್ರವಾಹ, ಸಾವು-ನೋವು ಇಲ್ಲದೇ ಇದ್ದರೂ ಭೂಕುಸಿತದಿಂದ ರಸ್ತೆ ಸಂಪರ್ಕ ಕಡಿತಗೊಂಡು ಹದಿನೈದು ಸಾವಿರಕ್ಕೂ ಹೆಚ್ಚು ಯಾತ್ರಾರ್ಥಿಗಳು ಸಂಕಷ್ಟಕ್ಕೆ ಸಿಲುಕಿಕೊಂಡಿದ್ದರು. ಹೀಗಾಗಿ ನಾವು ಕೇದಾರನಾಥ್ ಇಲ್ಲವೇ ಬದರಿನಾಥಕ್ಕೆ ಭೇಟಿ ನೀಡಿ ಅಲ್ಲಿನ ಸ್ಥಿತಿಗತಿ ವರದಿ ಮಾಡಬೇಕೆಂದು ನಿರ್ಧರಿಸಿದೆವು. ರಸ್ತೆ ಮೂಲಕ ಕೇದಾರನಾಥ್ ಮತ್ತು ಬದರಿನಾಥ ತಲುಪಲು ಸಾಧ್ಯವೇ ಇಲ್ಲ. ಹೆಲಿಕಾಪ್ಟರ್ ಮೂಲಕ ಮಾತ್ರ ತಲುಪಬೇಕು. ಹೀಗಾಗಿ ಡೆಹರಾಡೂನ್ ಏರ್ ಪೋರ್ಟ್ ಗೆ ಹೋಗಿ ಭಾರತೀಯ ವಾಯುಪಡೆಯ ಕಮಾಂಡರ್ ಇನ್ ಚೀಫ್ ಮತ್ತು ಸಾರ್ವಜನಿಕ ಸಂಪರ್ಕ ಅಧಿಕಾರಿಯ ಬೆನ್ನಿಗೆ ಬಿದ್ದೆವು. ವಾಯುಪಡೆಯ ಅಧಿಕಾರಿಗಳಿಗೆ ಮಾಧ್ಯಮ ಪ್ರತಿನಿಧಿಗಳನ್ನು ಹೆಲಿಕಾಪ್ಟರ್ ನಲ್ಲಿ ಕಳುಹಿಸಲು ಅವರದ್ದೇ ಆದ ಸಮಸ್ಯೆಗಳಿದ್ದವು. ಹೆಲಿಕಾಪ್ಟರ್ ನಲ್ಲಿ ಆಹಾರ ಸಾಮಗ್ರಿ, ಔಷಧಿಗಳನ್ನು ಸಂಕಷ್ಟದಲ್ಲಿದ್ದ ಜನರ ನೆರವಿಗಾಗಿ ಸಾಗಿಸುತ್ತಿದ್ದರು. ಹೆಲಿಕಾಪ್ಟರ್ ಗಳಲ್ಲಿ ನಾಲ್ಕು ಸಾವಿರ ಕೆಜಿ ತೂಕ ಮಾತ್ರ ಇರಬೇಕು. ಒಮ್ಮೆಗೆ 36 ಜನ ಮಾತ್ರ ಪ್ರಯಾಣಿಸಲು ಸಾಧ್ಯ. ಈ ಮಿತಿಗಿಂತ ಹೆಚ್ಚಿನ ತೂಕ ಹಾಕಲ್ಲ, ಹೆಚ್ಚಿನ ವ್ಯಕ್ತಿಗಳನ್ನು ಸಾಗಿಸಲ್ಲ. ಹೆಚ್ಚಿನ ತೂಕ ಹಾಕಿದರೆ, ಹೆಲಿಕಾಪ್ಟರ್ ಟೇಕಾಫ್ ಆಗಿ ಹಾರಾಟ ನಡೆಸೋದು ಕಷ್ಟ. ಅಪಾಯವನ್ನು ಮೈ ಮೇಲೆ ಎಳೆದುಕೊಂಡಂತೆ. ಮಾಧ್ಯಮದ ಇಬ್ಬರು ಪ್ರತಿನಿಧಿಗಳನ್ನು ಕಳುಹಿಸಿದರೆ, 200 ಕೆಜಿ ಆಹಾರ ಸಾಮಗ್ರಿಗಳನ್ನು ಕಡಿಮೆ ಮಾಡಬೇಕಿತ್ತು. ಹೀಗಾಗಿ ನಮ್ಮನ್ನು ಕಳುಹಿಸಲು ಹಿಂದೇಟು ಹಾಕುತ್ತಿದ್ದರು. ಆದರೆ ಜೋಶಿಮಠ ಮತ್ತು ಗುಪ್ತಕಾಶಿವರೆಗೂ ಹೆಲಿಕಾಪ್ಟರ್‌ನಲ್ಲಿ ಕಳುಹಿಸಲು ತಯಾರಿದ್ದರು. ಆದರೆ ನಮ್ಮ ಗುರಿ ಬದರಿನಾಥ ಇಲ್ಲವೇ ಕೇದಾರನಾಥ್ ತಲುಪುವುದೇ ಆಗಿತ್ತು. ಇದೇ ಸಂದರ್ಭದಲ್ಲಿ ಮೂರು ದಿನಗಳ ಕಾಲ ಮಳೆ ಸುರಿದು ಮೋಡ ಕವಿದು ಹೆಲಿಕಾಪ್ಟರ್‌ಗಳು ಟೇಕಾಫ್ ಆಗಲೇ ಇಲ್ಲ. ಆದರೆ ನಾವು ನಿರಾಶರಾಗಿರಲಿಲ್ಲ. ಬದರಿನಾಥ್ ತಲುಪಿಯೇ ಉತ್ತರಾಖಂಡ್‌ದಿಂದ ವಾಪಸ್ ದೆಹಲಿಗೆ ಹೋಗಬೇಕೆಂದು ಪಣತೊಟ್ಟಿದ್ದೆವು. ಹೀಗಾಗಿ ತಾಳ್ಮೆಯಿಂದ ಹೆಲಿಪ್ಯಾಡ್‌ನಲ್ಲಿ ಕಾಯುತ್ತಾ ಕುಳಿತಿರುತ್ತಿದ್ದೆವು. ಕೊನೆಗೆ ಕನ್ನಡಿಗ ಪೈಲಟ್ ಸುಜಯ್, ಟೆಕ್ನಿಷಿಯನ್ ವಿಜಯ ಬಿರಾದಾರ್ ಪರಿಚಯ ಆಗಿದ್ದರಿಂದ ಅವರು ನಮ್ಮನ್ನು ಬದರಿನಾಥ್‌ಗೆ ಹೋಗೋ ಹೆಲಿಕಾಪ್ಟರ್‌ಗೆ ಹತ್ತಿಸಿಕೊಂಡು ಹೊರಟರು. ಆದರೆ ಇನ್ನೇನು ಹೆಲಿಕಾಪ್ಟರ್ ಬದರಿನಾಥ್ ತಲುಪಬೇಕು ಎನ್ನುವಷ್ಟರಲ್ಲಿ ಬದರಿನಾಥ ಕಣಿವೆ ಪ್ರದೇಶದಲ್ಲಿ ದಟ್ಟವಾದ ಮಂಜು ಆವರಿಸಿತ್ತು. ಮುಂದೆ ಏನಿದೆ ಎನ್ನುವುದೇ ಕಾಣುತ್ತಿರಲಿಲ್ಲ. ಹೀಗಾಗಿ ಪೈಲಟ್ ಹೆಲಿಕಾಪ್ಟರ್ ಅನ್ನು ಮುಂದಕ್ಕೆ ತೆಗೆದುಕೊಂಡು ಹೋಗದೇ, ವಾಪಸ್ ಗೌಚರ್ ಹೆಲಿಪ್ಯಾಡ್ ಗೆ ತಂದರು. ಅದೇ ದಿನ ಸಂಜೆ ಗೌರಿ ಕುಂಡ್ ದಲ್ಲಿ ದಟ್ಟ ಮಂಜಿನಿಂದಾಗಿ ವಾಯುಪಡೆಯ ಹೆಲಿಕಾಪ್ಟರ್ ಅಪಘಾತಕ್ಕೀಡಾಗಿ ಇಪ್ಪತ್ತು ಮಂದಿ ದಾರುಣ ಸಾವನ್ನಪ್ಪಿದ್ದರು. ಸಂಕಷ್ಟದಲ್ಲಿದ್ದ ಜನರ ರಕ್ಷಣೆಗೆ ತಮ್ಮ ಪ್ರಾಣ ಪಣಕ್ಕಿಟ್ಟು ಪ್ರತಿಕೂಲ ಹವಾಮಾನ ಪರಿಸ್ಥಿತಿಯ ನಡುವೆಯೂ ಹೆಲಿಕಾಪ್ಟರ್ ಹಾರಾಟ ನಡೆಸಿದ್ದರಿಂದ ವಾಯುಪಡೆಯ ಐದು ಮಂದಿ ಸೇರಿದಂತೆ ಇಪ್ಪತ್ತು ಮಂದಿ ತಮ್ಮ ಪ್ರಾಣ ಬಲಿಕೊಡಬೇಕಾಯಿತು. ಗೌಚರ್ ನಲ್ಲಿ ನಾವು ಎರಡು ದಿನ ಆಕಾಶ ನೋಡುತ್ತಾ, ಯಾವಾಗ ಹವಾಮಾನ ಪರಿಸ್ಥಿತಿ ಉತ್ತಮವಾಗುತ್ತೆ ಎಂದು ಕಾಯುತ್ತಾ ಕೂರಬೇಕಾಯಿತು. ಹೆಲಿಕಾಪ್ಟರ್ ಹತ್ತಿ ಇನ್ನೇನೂ ಟೇಕಾಫ್ ಆಗಬೇಕು ಎನ್ನುವಷ್ಟರಲ್ಲಿ ಬದರಿನಾಥ್ ಭಾಗದಿಂದ ಪ್ರತಿಕೂಲ ಹಮಾಮಾನ ಪರಿಸ್ಥಿತಿ ಇದೆ ಎನ್ನುವ ಮಾಹಿತಿ ಬರುತ್ತಿತ್ತು. ಹೀಗಾಗಿ ಹೆಲಿಕಾಪ್ಟರ್ ನಿಂದ ಇಳಿದು ಮತ್ತೆ ಆಕಾಶ ನೋಡೋದೇ ನಮ್ಮ ಕೆಲಸವಾಯಿತು. ಕೊನೆಗೆ ಮೂರನೇ ದಿನ ಬೆಳಿಗ್ಗೆಯೇ ಪೈಲಟ್ ಸುಜಯ್ ನಮ್ಮನ್ನು ಕರೆದು ಬದರಿನಾಥ್‌ಗೆ ಹೋಗೋ ಹೆಲಿಕಾಪ್ಟರ್ ಹತ್ತಿಸಿದರು. ಆದರೂ ನಮಗೆ ಬದರಿನಾಥ ತಲುಪುವವರೆಗೂ ಬದರಿನಾಥ್ ತಲುಪುತ್ತೇವೆ ಎನ್ನುವ ಯಾವುದೇ ಗ್ಯಾರಂಟಿ ಇರಲಿಲ್ಲ. ಇದಕ್ಕೆ ನಮ್ಮ ಈ ಹಿಂದಿನ ಅನುಭವ ಕಾರಣ. ಕೊನೆಗೂ ವಾಯುಪಡೆಯ ಹೆಲಿಕಾಪ್ಟರ್ ನಮ್ಮನ್ನು ಬದರಿನಾಥಗೆ ಇಳಿಸಿತು.

### ನಿರಾಶ್ರಿತರ ಕೇಂದ್ರವಾಗಿದ್ದ ಬದರಿನಾಥ್

ಬದರಿನಾಥ್ ಹೆಲಿಪ್ಯಾಡ್ ಅಕ್ಷರಶಃ ನಿರಾಶ್ರಿತರ ಕೇಂದ್ರವಾಗಿತ್ತು. ಹೆಲಿಪ್ಯಾಡ್ ಪಕ್ಕದ ರಸ್ತೆಯ ಎರಡು ಕಡೆ ಜನರು ಹೆಲಿಕಾಪ್ಟರ್ ಗಳಲ್ಲಿ ಹೋಗಲು

ಸಾಲುಗಟ್ಟಿ ಕುಳಿತಿದ್ದರು. ಬೆಳಿಗ್ಗೆ ಏಳು ಗಂಟೆಯಿಂದಲೇ ಜನರು ಈ ರೀತಿ ಸಾಲುಗಟ್ಟಿ ಕುಳಿತುಕೊಳ್ಳುತ್ತಾರೆ. ಕಳೆದ ಹತ್ತು ಹನ್ನೆರೆಡು ದಿನದಿಂದ ಇದೇ ದೃಶ್ಯ ಸಾಮಾನ್ಯ. ಎಲ್ಲರೂ ಮಹಿಳೆಯರು, ಮಕ್ಕಳು, ವಯೋವೃದ್ದರು. ಎಲ್ಲರ ಮುಖದಲ್ಲೂ ನಿರಾಶೆ, ಹತಾಶೆಯ ಭಾವ. ಮೊದಲು ಇಲ್ಲಿಂದ ಸುರಕ್ಷಿತ ಸ್ಥಳಕ್ಕೆ ಹೋದರೇ ಸಾಕು ಎಂದು ತಹತಹಿಸುತ್ತಿದ್ದ ಜನರು. ಇದರಲ್ಲಿ ಎಲ್ಲ ರಾಜ್ಯದ ಜನರೂ ಇದ್ದರು. ಬದರಿನಾಥ್ ಪ್ರದೇಶ ಒಂದು ರೀತಿ ಹೊರಜಗತ್ತಿನ ಸಂಪರ್ಕ ಕಡಿದುಕೊಂಡು ದ್ವೀಪವಾಗಿತ್ತು. ಜೋಶಿಮಠದಿಂದ ಬದರಿನಾಥ್‌ಗೆ 70 ಕಿಲೋಮೀಟರ್ ದೂರ. ಆದರೆ ಬದರಿನಾಥ ಬಳಿ ಭೂಕುಸಿತ ಸಂಭವಿಸಿ ಆರೇಳು ಕಿಲೋಮೀಟರ್ ರಸ್ತೆಯೂ ಕುಸಿದು ಬಿದ್ದಿತ್ತು. ರಸ್ತೆಯನ್ನು ಮಳೆ ನುಂಗಿ ಹಾಕಿದೆ. ಹೀಗಾಗಿ ವಾಹನಗಳಲ್ಲಿ ಬದರಿನಾಥ್ ತಲುಪಲು ಸಾಧ್ಯವೇ ಇಲ್ಲ. ಹೆಲಿಕಾಪ್ಟರ್ ಮೂಲಕ ಮಾತ್ರ ಹೊರಗೆ ಬರಲು ಸಾಧ್ಯ. ಆದರೆ ಪ್ರತಿಕೂಲ ಹವಾಮಾನ ಪರಿಸ್ಥಿತಿ ಜನರನ್ನು ಮತ್ತಷ್ಟು ಸಂಕಷ್ಟಕ್ಕೀಡು ಮಾಡಿತ್ತು. ಬದರಿನಾಥ್ ಹಿಮಾಲಯದ ತಪ್ಪಲಲ್ಲಿರುವ ಪ್ರದೇಶ. ಹೀಗಾಗಿ ಯಾವಾಗಲೂ ಮೋಡ ಕವಿದ ವಾತಾವರಣ, ಮಂಜು ಬೀಳೋದು ಸಾಮಾನ್ಯ. ಬದರಿನಾಥ್‌ದಲ್ಲಿ ಭಾರಿ ಮಳೆ ಬಂದಿದ್ದರೂ ಕೇದಾರನಾಥ್‌ದಂತೆ ಪ್ರವಾಹ ಇರಲಿಲ್ಲ. ಅದೃಷ್ಟವಶಾತ್ ಸಾವು–ನೋವು ಸಂಭವಿಸಿರಲಿಲ್ಲ. ಜನರ ಜೀವ ಸೇಫ್.

### ಬದರಿನಾಥದಲ್ಲಿ ಕನ್ನಡಿಗರ ಸಂಕಷ್ಟ

ನಾವು ಹೆಲಿಪ್ಯಾಡ್ ನಿಂದ ಕನ್ನಡಿಗರು ತಂಗಿದ್ದ ಬಾಂಗ್ಡಾ ಆಶ್ರಮಕ್ಕೆ ಹೋದೆವು. ಕನ್ನಡಿಗರು ನಾನಾ ಸಂಕಷ್ಟಕ್ಕೆ ಗುರಿಯಾಗಿದ್ದರು. ಎಲ್ಲವನ್ನೂ ನಮ್ಮ ಬಳಿ ಹೇಳಿಕೊಂಡು ನಿರಾಳರಾದರು. ನಮಗೆ ಸರಿಯಾಗಿ ಊಟ ಸಿಗುತ್ತಿಲ್ಲ. ಕುಡಿಯುವ ನೀರೂ ಇಲ್ಲ. ಹಣ ಇಲ್ಲ. ಚರ್ಮದ ಸಮಸ್ಯೆ, ಅನಾರೋಗ್ಯದ ಸಮಸ್ಯೆ, ಮೆಡಿಸಿನ್ ಕೂಡ ಸಿಗುತ್ತಿಲ್ಲ. ಅಂಗಡಿಗಳೆಲ್ಲಾ ಬಾಗಿಲು ಮುಚ್ಚಿವೆ. ಅನೇಕರು ದುಡ್ಡು ಕಳೆದುಕೊಂಡಿದ್ದೇವೆ. ಜೂನ್ 15–16 ರಂದು ಭಾರಿ ಮಳೆಯಿಂದ ನಮಗೆಲ್ಲಾ ಗೃಹ ಬಂಧನ ವಿಧಿಸಿದಂತಾಯಿತು. ರಸ್ತೆ ಸಂಪರ್ಕ ಕಡಿದುಕೊಂಡಿರೋದು ಗೊತ್ತಾಯಿತು. ಹೀಗಾಗಿ ಬದರಿನಾಥದಲ್ಲಿ ಸಂಕಷ್ಟಕ್ಕೆ ಸಿಲುಕಿಕೊಂಡಿದ್ದೇವೆ. ವಾಯುಪಡೆಯ ಹೆಲಿಕಾಪ್ಟರ್ ನಲ್ಲಿ ಹೋಗಲು ನಾಲ್ಕೈದು ಸಾವಿರ ಮಂದಿ ಮೊದಲೇ ಟೋಕನ್ ನಂಬರ್ ಪಡೆದಿದ್ದಾರೆ. ಅವರೆಲ್ಲಾ ಹೋದ ಮೇಲೆ ನಮ್ಮ ಟೋಕನ್ ನಂಬರ್ ಬರುತ್ತೆ. ಹೀಗಾಗಿ ಕೊನೆಯವರಾಗಿ ನಾವು ಇಲ್ಲಿಂದ ವಾಯುಪಡೆಯ ಹೆಲಿಕಾಪ್ಟರ್ ನಲ್ಲಿ ಹೋಗಬೇಕಾಗುತ್ತೆ ಎಂದು ಹೇಳಿ ಅನೇಕರು ಕಣ್ಣೀರು ಹಾಕಿದರು. ಇದರ ಜೊತೆಗೆ ಬದರಿನಾಥದಲ್ಲಿ ಜೂನ್ ತಿಂಗಳಲ್ಲೂ ಮೈ ಕೊರೆಯುವ ಚಳಿ. ಒಂದೆರೆಡು ದಿನದಲ್ಲೇ ಬದರಿನಾಥ್ ದೇವರ ದರ್ಶನ ಮಾಡಿಕೊಂಡು ವಾಪಸ್ ಊರಿಗೆ ಹೋಗೋಣ ಎಂದುಕೊಂಡು ಬಂದಿದ್ದವರು ಪ್ರಕೃತಿಯ ಶಕ್ತಿಯಿಂದಾಗಿ ಬಂಧಿಯಾಗಿದ್ದರು. ನಾವು ವಾಪಸ್ ಸುರಕ್ಷಿತವಾಗಿ ನಮ್ಮ ಊರುಗಳನ್ನು ಸೇರುತ್ತೇವೆ ಎನ್ನುವ ಭರವಸೆಯನ್ನೇ ಜನರು ಕಳೆದುಕೊಂಡಿದ್ದರು. ಆದರೆ ಮುಂದಿನ ಎರಡು ಮೂರು ದಿನಗಳಲ್ಲಿ ಹವಾಮಾನ ಪರಿಸ್ಥಿತಿ ಉತ್ತಮವಾಗಿದ್ದರಿಂದ ಕನ್ನಡಿಗರೆಲ್ಲಾ ಸುರಕ್ಷಿತವಾಗಿ ಕರ್ನಾಟಕ ಸರ್ಕಾರದ ಎರಡು ಹೆಲಿಕಾಪ್ಟರ್ ಗಳಲ್ಲಿ ಜೋಶಿಮಠಕ್ಕೆ ಬಂದು ಅಲ್ಲಿಂದ ಹರಿದ್ವಾರ ತಲುಪಿದರು. ಬದುಕಿದೆಯಾ ಬಡ ಜೀವವೇ ಎಂದು ನಿಟ್ಟುಸಿರುಬಿಟ್ಟರು. ನಮಗೆ ಮರುಜನ್ಮ ಸಿಕ್ಕಿತು ಎಂದು ಸಂಭ್ರಮಿಸಿದರು.

### ಸಾಹಸ ಮೆರೆದ ಸೇನೆ, ವಾಯುಪಡೆ

ಯಾತ್ರಾರ್ಥಿಗಳು ಸಂಕಷ್ಟಕ್ಕೆ ಸಿಲುಕಿ ಹಾಕಿಕೊಂಡಿದ್ದಾಗ ಅವರ ನೆರವಿಗೆ ಧಾವಿಸಿ ರಕ್ಷಿಸಿದ್ದು ಭಾರತೀಯ ಸೇನೆ ಮತ್ತು ಭಾರತೀಯ ವಾಯುಪಡೆ. ವಾಯುಪಡೆಯ ಹೆಲಿಕಾಪ್ಟರ್ ಗಳ ಮೂಲಕವೇ ಹದಿನೈದು ಸಾವಿರ ಮಂದಿಯನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಯಿತು. ಭಾರತೀಯ ಸೇನೆಯ ಯೋಧರು ಕೂಡ ಸಾವಿರಾರು ಜನರ ಪ್ರಾಣವನ್ನು ರಕ್ಷಿಸಿದ್ದಾರೆ. ಅವರಿಗೆಲ್ಲಾ ಹ್ಯಾಟ್ಸ್ ಆಫ್ ಹೇಳಲೇಬೇಕು.

○ **ಚಂದ್ರಮೋಹನ್**
ಟಿವಿ 9 ವರದಿಗಾರರು, ನವದೆಹಲಿ


**Siddhi Packers & Movers**

For safe & timely deliveries of personal effects & vehicles

Please Contact
M/s Siddhi Packers & Movers
Delhi – 9811143566
Mumbai – 9967058466
Bangalore – 9900322677

**Saujanya Printing Press**

A HOUSE OF QUALITY PRINTING

C-95, Okhla Industrial Area, Phase-I
New Delhi-110020
Tel: 40520770
Mobile : 9811104398, 9811604398
E-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

# ಗಂಗೆಯ ಕೋಪ, ವಿಧಿ ವಿಪರ್ಯಾಸ

ಹಿಂದೂಗಳ ಅತಿಶ್ರೇಷ್ಠ ಮತ್ತು ಪವಿತ್ರ ಸ್ಥಳಗಳಾಗಿರುವ ಹಿಮಾಲಯದ ಚತುರ್ಧಾಮಗಳು ಈಗ ಗಂಗೆಯ ಕೋಪಕ್ಕೆ ನಲುಗಿಹೋಗಿವೆ. 100 ವರ್ಷಗಳ ಬಳಿಕ ಮತ್ತೆ ಕೋಪೋದ್ರಿಕ್ತಳಾಗಿರುವ ಗಂಗೆ ತನ್ನ ವಿರಾಟ್ ಸ್ವರೂಪವನ್ನು ತೋರಿಸಿದ್ದಾಳೆ. ಶಿವನು ಗಂಗೆಯನ್ನು ಧರೆಗೆ ಕಳುಹಿಸಿದಾಗಲೂ ಕೂಡ ಗಂಗೆಯ ರೌದ್ರರೂಪ ಹೀಗೆ ಇತ್ತಂತೆ. ಈ ದೃಶ್ಯ ನೋಡಿದವರಿಗೆ ಖಂಡಿತ ಆಕೆಯ ಬಗ್ಗೆ ಭಯ ಹುಟ್ಟದೇ ಇರದು.

ಗಂಗೆ...ಭಾರತದ ಪವಿತ್ರ ನದಿಗಳಲ್ಲಿ ಹೆಸರುವಾಸಿ. ಗಂಗಾನದಿಯನ್ನು ಭಾರತದ ಪುರಾಣ ಮತ್ತು ಮಹಾಕಾವ್ಯಗಳಲ್ಲಿ ದೇವನದಿ ಎಂದು ವರ್ಣಿಸಲಾಗಿದ್ದು ನಾವು ಆಕೆಯನ್ನು ಮಾತೃ ದೇವತೆಯ ರೂಪದಲ್ಲಿ ಪೂಜಿಸುತ್ತೇವೆ.

ವರ್ಷಪೂರ್ತಿ ಝುಳು ಝುಳು ಎಂದು ತಂಪಾಗಿ ಹರಿಯುವ ಏಕೈಕ ನದಿ ಗಂಗಾ. ಗಂಗೆಯಲ್ಲಿ ಸ್ನಾನ ಮಾಡಿದ್ರೆ ಪಾಪವೆಲ್ಲ ಕಳೆಯುತ್ತೆ ಅನ್ನೋದು ಹಿಂದೂಗಳ ನಂಬಿಕೆ. ಗಂಗಾನದಿಯಲ್ಲಿ ಸ್ನಾನ ಮಾಡೋಕೆ ದೇಶ ವಿದೇಶಗಳಿಂದ ಪ್ರವಾಸಿಗರು ಆಗಮಿಸುತ್ತಲೇ ಇರುತ್ತಾರೆ.

ಗಂಗಾ ನದಿ ಹುಟ್ಟೋದು ಹಿಮಾಲಯದ ಗಂಗೋತ್ರಿಯಲ್ಲಿ ಎಂದು ಬಹಳ ಜನ ತಿಳಿದುಕೊಂಡಿದ್ದಾರೆ. ಆದರೆ, ಆಕೆ ಹುಟ್ಟುವುದು ಗಂಗೋತ್ರಿಯಿಂದ 18 ಕಿ.ಮೀ ಮುಂದಿರುವ ಗೋಮುಖದಲ್ಲಿ. ವರ್ಷವಿಡೀ ಹಿಮ ಬೀಳುವ, ಅತೀ ಕಡಿದಾದ ಪ್ರದೇಶ ಇದಾಗಿದೆ. ಈ ಪ್ರದೇಶ ಸಮುದ್ರ ಮಟ್ಟದಿಂದ 12,770 ಅಡಿ ಎತ್ತರದಲ್ಲಿದ್ದು, ಮಿಲಿಟರಿ ಪರವಾನಿಗೆ ಇಲ್ಲದೆ, ಗೈಡ್ ಸಹಾಯವಿಲ್ಲದೆ ಹೋಗಲು ಸಾಧ್ಯವಿಲ್ಲ.

ಗೋಮುಖದಿಂದ ಹರಿಯುವ ಗಂಗೆ ಯಾವಾಗ ಗಂಗೋತ್ರಿಯನ್ನ ತಲುಪುತ್ತಾಳೋ, ಆಗ ಆಕೆಯ ಭೋರ್ಗರೆತ ಆರಂಭವಾಗುತ್ತದೆ. ಅಲ್ಲಿಂದ ವಿಶಾಲವಾಗಿ ಧುಮ್ಮಿಕ್ಕುವ ಗಂಗೆ ಹಿಮಾಲಯಗಳ ತಪ್ಪಲಿನಲ್ಲಿ ಸಾಗಿ, ಪರ್ವತಗಳ ನಡುವಿನಲ್ಲಿ ಜಾರಿ ಉಕ್ಕುತ್ತಾಳೆ.

ಗಂಗೆಯನ್ನು ಭೂಮಿಗೆ ತಂದ ಶ್ರೇಯಸ್ಸು ಭಗೀರಥ ರಾಜನಿಗೆ ಸಲ್ಲುತ್ತದೆ. ಇಕ್ಷ್ವಾಕು ವಂಶದ ಸಗರರಾಜ ಅಶ್ವಮೇಧ ಯಜ್ಞಕ್ಕಾಗಿ ಕುದುರೆ ಬಿಟ್ಟಿದ್ದ. ಅಶ್ವಮೇಧಯಜ್ಞ ಮುಗಿದರೆ ಎಲ್ಲಿ ತನ್ನ ಸಿಂಹಾಸನ ಹೋಗುತ್ತದೋ ಎಂಬ ಭಯದಲ್ಲಿ, ಕುದುರೆಯನ್ನು ಕದ್ದು ಕಪಿಲ ಮುನಿ ಆಶ್ರಮದಲ್ಲಿ ಇಂದ್ರನು ಕಟ್ಟುತ್ತಾನೆ. ಈಗ ಈ ಆಶ್ರಮ ಪಶ್ಚಿಮ ಬಂಗಾಳದ ಸಮುದ್ರದಂಚಿನಲ್ಲಿದೆ. ಕುದುರೆ ಹುಡುಕಿಕೊಂಡು ಸಗರರಾಜನ 6000 ಪುತ್ರರು ಆಶ್ರಮಕ್ಕೆ ಬರುತ್ತಾರೆ. ಧ್ಯಾನಸ್ಥರಾಗಿದ್ದ ಕಪಿಲ ಮಹರ್ಷಿಗಳನ್ನು ಅವಹೇಳನ ಮಾಡತೊಡಗುತ್ತಾರೆ. ಇದರಿಂದ ಕುಪಿತರಾದ ಮುನಿಗಳು ಅವರನ್ನು ಭಸ್ಮಗೊಳಿಸುತ್ತಾರೆ. ಹೀಗೆ ಭಸ್ಮಗೊಂಡ ಸಗರರಾಜನ ಪುತ್ರರು ಮುಕ್ತಿ ಸಿಗದೆ ಅಲೆಮಾರಿಗಳಾಗುತ್ತಾರೆ. ಮುಂದೆ ಅದೇ ವಂಶದ ರಾಜ ಭಗೀರಥ, ತನ್ನ ಪೂರ್ವಿಕರ ಉದ್ಧಾರಕ್ಕಾಗಿ ಕೈಲಾಸ ಪರ್ವತದ ಮೇಲೆ ಈಗಿರುವ ಗಂಗೋತ್ರಿಯಲ್ಲಿ 5000 ವರ್ಷಗಳ ಕಾಲ ಕಠಿಣ ತಪಸ್ಸು ಮಾಡುತ್ತಾನೆ. ಆತನ ತಪಸ್ಸಿಗೆ ಮೆಚ್ಚಿದ ಶಿವ, ಗಂಗೆಯನ್ನು ಹಿಮಾಲಯದಿಂದ ಭೂಮಿಗೆ ಬಿಡುತ್ತಾನೆ. ಗಂಗೋತ್ರಿಯಿಂದ ಹರಿಯುವ ಗಂಗೆ ಎಲ್ಲಿಯೂ ನಿಲ್ಲದೆ, ಹರಿದ್ವಾರ ದಾಟಿ ಉತ್ತರ ಭಾರತದ ಕಾಶಿ ಮುಖಾಂತರ ಪಶ್ಚಿಮ ಬಂಗಾಳದ ಕಪಿಲಮುನಿ ಆಶ್ರಮಕ್ಕೆ ಬಂದು ಸಾಗರ ಸೇರುತ್ತಾಳೆ. ಅಲ್ಲಿ ಭಸ್ಮವಾದ ಭಗೀರಥನ ವಂಶಸ್ಥರನ್ನು ಪಾವನಗೊಳಿಸಿ ಮುಕ್ತಿ ನೀಡುತ್ತಾಳೆ. ಗಂಗೆ ಹರಿಯುವ ರಭಸಕ್ಕೆ ಶಿವ ಅಲ್ಲಲ್ಲಿ ಎತ್ತರದ ಶಿಖರಗಳನ್ನು ನಿರ್ಮಾಣ ಮಾಡಿದ್ದಾನೆ ಎಂಬ ಪ್ರತೀತಿಯೂ ಇದೆ. ಶಿವನ ಜಡೆಯಿಂದ ಧರೆಗೆ ಇಳಿದ ಗಂಗೆ ಅಂದು ಹೇಗಿದ್ದಳು ಎಂಬುದರ ಸಾಕ್ಷಾತ್ ದರ್ಶನವನ್ನು ಈಗ ಇಡೀ ಪ್ರಪಂಚವೇ ಕಾಣುವಂತಾಗಿದೆ.

ಗಂಗೆಯ ರೌದ್ರಾವತಾರಕ್ಕೆ ಸಾವಿರಾರು ಜನ ನಿಬ್ಬೆರಗಾಗಿದ್ದಾರೆ. ಕುಟುಂಬ ಕಳೆದುಕೊಂಡವರಂತೂ ಗಂಗಾ ಮಾತೆ ಏಕೆ ಮುನಿಸಿಕೊಂಡಳು ಎಂದು ಬೇಸರ ಮಾಡಿಕೊಂಡಿದ್ದಾರೆ. ತತ್ತರಿಸಿಹೋಗಿರುವ ಉತ್ತರಾಖಂಡದ ಪುನರುಜ್ಜೀವನಕ್ಕೆ ಕನಿಷ್ಠ ಎರಡು ವರ್ಷಗಳಾದರೂ ಬೇಕು.

ಹಾಗಾದರೆ ಈ ಪ್ರಮಾಣದಲ್ಲಿ ಗಂಗೆ ಧುಮ್ಮಿಕ್ಕಲು ಕಾರಣವಾದರೂ ಏನು? ಮೇಘಸ್ಫೋಟ ಇರಬಹುದೇ? ...ಹೌದು, ಬಹಳಷ್ಟು ಜನ ಇದನ್ನು ಕೇಳಿರಕ್ಕಿಲ್ಲ. ಉತ್ತರ ಭಾರತದಲ್ಲಿ ಇದನ್ನು 'ಬಾದಲ್ ಫಟ್ ಗಯಿ' ಎಂದು ಕರೆಯುತ್ತಾರೆ. ಹಿಮಾಲಯ ಪರ್ವತಗಳು ಮತ್ತು ಎತ್ತರದ ಶಿಖರಗಳಲ್ಲಿ ಈ ಮೋಡಗಳು ಸ್ಫೋಟಗೊಳ್ಳುವುದು ಸಾಮಾನ್ಯ.. ಆದರೆ, ಈ ಬಾರಿ ಸ್ಫೋಟದ ಪ್ರಮಾಣ ಹೆಚ್ಚಾಗಿದೆ. ಜೊತೆಗೆ ಹವಾಮಾನ ಇಲಾಖೆಯ ಸೂಚನೆಗಿಂತ ಎರಡು ವಾರ ಮುಂಚೆ ಮಳೆಯಾಗಿರುವುದೂ ಭೀಕರ ಅನಾಹುತಕ್ಕೆ ಕಾರಣ.

ಗಂಗೋತ್ರಿಯಿಂದ ಹರಿದು ಬರುವ ಗಂಗೆ ಹರಿದ್ವಾರದಲ್ಲಿ ವಿಶಾಲವಾಗಿ ಮೈದುಂಬಿ ಹರಿಯುತ್ತಾಳೆ. ಇದೇ ಕಾರಣಕ್ಕೆ ಹರಿದ್ವಾರ ಗಂಗಾದ್ವಾರ ಎಂದು ಪ್ರಸಿದ್ಧಿಗೊಂಡಿದೆ.

ಎರಡು ದಿನಗಳ ಗಂಗೆಯ ಕೋಪ ಇಡೀ ಉತ್ತರಾಖಂಡ ರಾಜ್ಯವನ್ನೇ ತಲ್ಲಣಗೊಳಿಸಿದೆ. ಕೇದಾರನಾಥ, ಬದರಿನಾಥ ದೇವಾಲಯಗಳನ್ನೇ ಧ್ವಂಸಗೊಳಿಸಿದೆ. ಮನೆಗಳನ್ನೆಲ್ಲಾ ತನ್ನ ಮಡಿಲಲ್ಲಿ ಮುಚ್ಚಿಕೊಂಡಿದೆ. ವಾಹನಗಳನ್ನೆಲ್ಲಾ ಜೊತೆಗೆ ಹೊತ್ತೊಯ್ದಿದೆ. ಗಂಗೆಯ ಆರ್ಭಟ ಹೀಗೂ ಇರುತ್ತದೆ ಎಂದು ಯಾರೂ ಕೂಡ ಊಹಿಸಿರಲಿಲ್ಲ. ಗಂಗೆ ಹೋಗಿದ್ದೇ ದಾರಿಯಂತಾಗಿದೆ. ಕರ್ನಾಟಕದ 1200 ಜನ ಕೇದಾರ್‌ನಾಥ್, ಬದರಿನಾಥ್‌ಗೆ ಪ್ರಯಾಣ ಬೆಳೆಸಿದ್ದರು



ಎಂಬ ಮಾಹಿತಿ ಇದೆ. ಆದರೆ, ಈಗ ಅಲ್ಲಿಂದ ವಾಪಸ್ ಆದವರು 400 ಮಂದಿ ಮಾತ್ರ.

ಗಂಗೆಯ ಕೋಪಕ್ಕೆ ಈಗಾಗಲೇ 900 ಪ್ರವಾಸಿಗರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಆದ್ರೆ, ಪ್ರತ್ಯಕ್ಷ ದರ್ಶಿಗಳ ಪ್ರಕಾರ ಸಾವಿನ ಸಂಖ್ಯೆ 10,000. ಗಂಗಾ ನದಿಯಲ್ಲಿ ಕಾರುಗಳು, ಲಾರಿಗಳು, ಬಸ್ಸುಗಳು, ಮನೆಗಳೆಲ್ಲವೂ ತೇಲಿಕೊಂಡು ಹೋಗುತ್ತಿರುವುದನ್ನು ನೋಡುತ್ತಿದ್ದರೆ, ಆಟಿಕೆ ಸಾಮಾನುಗಳು ತೇಲುತ್ತಿವೆಯೇನೋ ಎಂದು ಭಾಸವಾಗ್ತಿತ್ತು. ಯಾವಾಗ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ನೀರಿನಲ್ಲಿ ಕೊಚ್ಚಿ ಹೋಗುವುದನ್ನು ಜನ ಕಣ್ಣಾರೆ ಕಂಡರೋ, ಆಗಲೇ ಜೀವದ ಭಯ ಗೊತ್ತಾಗಿದ್ದು.

ಗಂಗೆ ಇಷ್ಟೆಲ್ಲಾ ಆರ್ಭಟ ಮಾಡಿ, ಶಾಂತವಾದ ಮೇಲೆ, ಕೇದಾರನಾಥ್ ಬಳಿ ಶವಗಳ ರಾಶಿಯೇ ಕಾಣಸಿಗುತ್ತಿದೆ. ಹರಿಧ್ವಾರ ಬಳಿಯ ಡ್ಯಾಂ ಒಂದರಲ್ಲಿ 48 ಶವಗಳು ಸಿಕ್ಕಿವೆ, ಅಲ್ಲದೆ, ಉತ್ತರ ಪ್ರದೇಶದಲ್ಲಿ 4 ಶವಗಳು ಸಿಕ್ಕಿವೆ.

ಪ್ರವಾಹದಲ್ಲಿ ಕಳೆದುಹೋಗಿರುವ ತಮ್ಮವರು ಎಲ್ಲಿದ್ದಾರೆ ಎಂಬುದು ಯಾರಿಗೂ ಗೊತ್ತಾಗಿಲ್ಲ. ಬದುಕಿರುವವರು ತಮ್ಮ ಕುಟುಂಬ ಕಳೆದುಕೊಂಡ ದು:ಖದಲ್ಲಿದ್ದಾರೆ. ಪ್ರವಾಹದಿಂದ ನಲುಗಿರುವ ಉತ್ತರಾಖಂಡದಲ್ಲಿ ಶೋಕದ ವಾತಾವರಣ ಸೃಷ್ಟಿಯಾಗಿದೆ. ನೊಂದ ಜನರಿಗೆ ಪರಿಹಾರ ನೀಡಲು ಜನ ಸ್ವಯಂ ಪ್ರೇರಿತರಾಗಿ ಮುಂದೆ ಬಂದಿದ್ದಾರೆ. ಗಂಗೆಯ ಮಡಿಲಲ್ಲಿ ಸಿಲುಕಿಕೊಂಡವರ ರಕ್ಷಣೆಗೆ ಸೇನಾಪಡೆಯೂ ಮುಂದಾಗಿದ್ದರೆ, ವಾಯುಪಡೆಯೂ ರಕ್ಷಿಸಿ ಮತ್ತೊಂದು ಸ್ಥಳಕ್ಕೆ ಸುರಕ್ಷಿತವಾಗಿ ತಲುಪಿಸುತ್ತಿದೆ.

ಮೂರು ದಿನಗಳ ಬಳಿಕ ಕೇದಾರನಾಥ್ ತಲುಪಿರೋ ಸೇನಾಪಡೆಗೆ ದೊಡ್ಡ ಸವಾಲಾಗಿ ಪರಿಣಮಿಸಿರೋದು, ರಾಶಿ ರಾಶಿ ಬಿದ್ದಿರೋ ಮೃತ ದೇಹಗಳು. ದೇಹಗಳು ನೀರಿನಲ್ಲಿ ಕೊಚ್ಚಿಕೊಂಡು ಬಂದಿರುವುದರಿಂದ ಕೊಳೆತು ನಾರುತ್ತಿವೆ. ಇದರಿಂದಾಗಿ ಕಾರ್ಯ ನಿರ್ವಹಣೆ ಕಷ್ಟಕರವಾಗಿದೆ. ದೇವಾಲಯಗಳ ತುಂಬೆಲ್ಲಾ ನದಿಯ ರೆವೆ ಮಣ್ಣು ಜಮಾಯಿಸಿದೆ. ಮೊದಲು ಮಣ್ಣು ತೆರವುಗೊಳಿಸುವ ಕಾರ್ಯ ಮಾಡಲಾಗುತ್ತಿದೆ.



ಇನ್ನೊಂದು ಕಡೆ ಕಾಡಿನ ಮಧ್ಯದಲ್ಲಿ ಸಿಲುಕಿಕೊಂಡವರನ್ನು, ಸುರಕ್ಷಿತ ಸ್ಥಳಕ್ಕೆ ಸೇನಾಪಡೆ ಸ್ಥಳಾಂತರಗೊಳಿಸುತ್ತಿದೆ. ಕೆಲವು ಕಡೆ ನದಿಗೆ ಕಟ್ಟಲಾದ ಸೇತುವೆಗಳು ಮುರಿದು ಬಿದ್ದಿರುವುದರಿಂದ ಸೇನಾಪಡೆಗಳು ನದಿಗೆ ಹಗ್ಗದ ಸೇತುವೆಯನ್ನು ನಿರ್ಮಿಸಿ, ಜನರನ್ನು ರಕ್ಷಣೆ ಮಾಡುತ್ತಿದೆ.

### 18 ಜನರಲ್ಲಿ ವಾಪಸ್ಸಾದ್ರೂ 4 ಜನರು...

ಬೆಂಗಳೂರಿನ ಹೆಚ್‌ಎಸ್‌ಆರ್ ಲೇಔಟ್‌ನಲ್ಲಿರೋ 18 ಮಂದಿ ಜೂನ್ 13ರಂದು ಕೇದಾರನಾಥ್‌ಗೆ ಪ್ರಯಾಣ ಬೆಳೆಸಿದ್ದರು. 15ರಂದು ಕೇದಾರನಾಥ್ ತಲುಪಿದ್ದ ಈ ಕುಟುಂಬಕ್ಕೆ ದೇವರ ದರ್ಶನ ಸಿಗುವುದು ಸ್ವಲ್ಪ ತಡವಾಯ್ತು. ಅಷ್ಟೊತ್ತಿಗೆ ಮಳೆ ತನ್ನ ಆರ್ಭಟ ಶುರು ಮಾಡಿತ್ತು. ಹೀಗಾಗಿ ಕೇದಾರನಾಥ್‌ನಿಂದ ವಾಪಸ್ ಬರಲು ನಿರ್ಧರಿಸಿದರು.

"ಆದರೆ, ವಿಧಿಯಾಟವೇ ಬೇರೆಯಾಗಿತ್ತು. ಕುಟುಂಬದ ಎಲ್ಲ ಸದಸ್ಯರು ಕೆಳಗಡೆ ಇಳಿಯಲು ಆರಂಭ ಮಾಡಿದ್ರು. ಬೆಟ್ಟದಿಂದ ಕೆಳಗಿಳಿಯುವಾಗ ಮಳೆ ಆರಂಭವಾಗಿದ್ದರಿಂದ ಹಿಂದೆಯೇ ಉಳಿಯಬೇಕಾಯ್ತು. ಆ ರಾತ್ರಿ ಒಂದು ಟೀ ಅಂಗಡಿಯಲ್ಲಿ ಉಳಿದುಕೊಂಡೆವು. ರಾತ್ರಿ 11 ಗಂಟೆಗೆ ಗಂಗಾ ನೀರು ಅಂಗಡಿಯೊಳಗೆ ಬರಲಾರಂಭಿಸಿತು. ಅಂಗಡಿಯ ಮಾಲೀಕ ಬಂದು ಬದುಕೋಕೆ ಇಷ್ಟ ಇದ್ರೆ, ಬೆಟ್ಟದ ಮೇಲೆ ಹತ್ತಿ, ಇಲ್ಲವಾದರೆ, ಗಂಗೆ ಪಾಲಾಗಿ ಅಂದ. ನಾವು ಸ್ಥಳೀಯ ವ್ಯಕ್ತಿಯ ಸಹಾಯದಿಂದ ಬೆಟ್ಟದ ಮೇಲೆ ಹತ್ತಿ ಬದುಕಿಕೊಂಡೆವು" ಎಂದು ವಾಪಸ್ಸಾದ ವ್ಯಕ್ತಿ ಅನಂತ ನೋವು ತೋಡಿಕೊಂಡರು.

ಇನ್ನು ಕೆಲವರು ಪರ್ವತಗಳನ್ನು ದಾಟಿ, ಸುಮಾರು 50 ಕಿ.ಮೀವರೆಗೂ ನಡೆದು, ಜೀವ ಬದುಕಿಸಿಕೊಂಡು ಬಂದಿದ್ದಾರೆ. ಅದರಲ್ಲಿ ಹುಬ್ಬಳಿಯ ಕುಟುಂಬವೂ ಒಂದು. ಆ ಕುಟುಂಬದಲ್ಲಿ ಸುಮಾರು 8 ಜನರಿದ್ದು, ಎಲ್ಲರೂ ಆ ಭಯಾನಕ ದೃಶ್ಯ ಕಣ್ಣಾರೆ ಕಂಡು ಭಯಭೀತರಾಗಿದ್ದಾರೆ.

### ಸೇನಾಪಡೆಗೊಂದು ಸೆಲ್ಯೂಟ್....

ಪ್ರವಾಹದಲ್ಲಿ ಸಿಲುಕಿಕೊಂಡವರನ್ನು ರಕ್ಷಿಸಲೇಬೇಕೆಂದು ಪಟ್ಟು ಹಿಡಿದಿರುವ ಮಿಲಿಟರಿ ಪಡೆ, ಮಳೆ, ಮಂಜನ್ನು ಲೆಕ್ಕಿಸದೆ ರಕ್ಷಣಾ ಕಾರ್ಯ ಮುಂದುವರೆಸಿದೆ. ಜೊತೆಗೆ ಸಂಪೂರ್ಣ ಜವಾಬ್ದಾರಿಯನ್ನು ಮಿಲಿಟರಿ ಪಡೆ ಹೊತ್ತುಕೊಂಡಿರುವುದರಿಂದ ಪ್ರಧಾನಮಂತ್ರಿ ಮತ್ತು ಗೃಹಸಚಿವರ ಮಾತನ್ನು ಬಿಟ್ಟು ಬೇರೆ ಯಾರ ಮಾತನ್ನೂ ಸಹ ಮಿಲಿಟರಿ ಅಧಿಕಾರಿಗಳು ಕೇಳುತ್ತಿಲ್ಲ. ಅನೇಕ ರಾಜ್ಯದ ಮುಖ್ಯಮಂತ್ರಿಗಳು ಪ್ರವಾಹ ಪೀಡಿತ ಪ್ರದೇಶಕ್ಕೆ ಭೇಟಿ ನೀಡಲು ಪ್ರಯತ್ನಿಸಿದ್ದಾರೆ. ಆದರೆ, ಯಾರಿಗೂ ಅವಕಾಶ ಸಿಕ್ಕಿಲ್ಲ. ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಗೂ ಅವಕಾಶ ಸಿಗಲಿಲ್ಲ. ಕರ್ನಾಟಕದಿಂದ ಆಗಮಿಸಿದ್ದ ವಾರ್ತಾ ಸಚಿವ ಸಂತೋಷ ಲಾಡ್ ಸಹ ಬದರಿನಾಥ್‌ಗೆ ತೆರಳಲು ಸಾಕಷ್ಟು ಪ್ರಯತ್ನ ಪಟ್ಟರು. ಆದರೆ, ಯಾವುದೇ ಪ್ರಯೋಜನವಾಗಲಿಲ್ಲ. ಕೊನೆಗೆ ಕೆಲವರು ತಮ್ಮ ರಾಜ್ಯಗಳಿಂದ ಹೆಲಿಕಾಪ್ಟರ್‌ಗಳನ್ನು ತರಿಸಿ, ತಮ್ಮ ರಾಜ್ಯದ ಜನರನ್ನು ವಾಪಸ್ ಕರೆತಂದರು. ಇಂತಹ ಭಯಾನಕ ಘಟನೆಯಲ್ಲಿ ಸೇನೆಯ ಕೆಲಸ ಅದ್ಭುತ. ಸೇನಾಪಡೆ ಇಲ್ಲದೆ ಹೋದಲ್ಲಿ ಸಾವಿನ ಸಂಖ್ಯೆ ಹೆಚ್ಚಾಗುತ್ತಿತ್ತು ಎಂಬುದರಲ್ಲಿ ಅನುಮಾನವೇ ಇಲ್ಲ.

ಪ್ರಕೃತಿಗೆ ಅನ್ವಯವಾಗದ್ದನ್ನು ಮಾಡಿದರೆ ಆಗುವುದು ಇದೇ. ಅಭಿವೃದ್ಧಿಯ ಹೆಸರಲ್ಲಿ ತನ್ನ ಸ್ವಾರ್ಥ ಸಾಧನೆಗೈಯುವ ಮನುಷ್ಯ ಸರಿಯಾದ ಬೆಲೆಯನ್ನೇ ತೆತ್ತಿದ್ದಾನೆ. ಆದರೆ ಯಾರೋ ಮಾಡಿದ ತಪ್ಪಿಗೆ ಇನ್ಯಾರೋ ಜೀವತೆರಬೇಕಾಗಿ ಬಂದಿರುವುದು ವಿಧಿ ವಿಪರ್ಯಾಸ.


○ **ಅರುಣ ಸಿ. ಬಡಿಗೇರ**

ದೆಹಲಿ ಬ್ಯೂರೊ ಮುಖ್ಯಸ್ಥರು

ಪಬ್ಲಿಕ್ ಟಿವಿ

# ಗಂಗೆಯ ಕತೆ



ಕೆಲವು ವರ್ಷಗಳ ಹಿಂದೆ ಗಂಗಾ ನದಿಯನ್ನು ಅನುಸರಿಸಿಕೊಂಡು ಓಡಾಡಿದ್ದೆ. ಗಂಗೋತ್ರಿ, ಹೃಷಿಕೇಷ, ಹರಿದ್ವಾರ, ವಾರಣಾಸಿ, ಅಲಹಾಬಾದ್, ಪ್ರಯಾಗ, ಪಾಟ್ನಾ ಮಾತ್ರವಲ್ಲದೆ ಕೊಲ್ಕತಾ ನಗರದಲ್ಲಿ ನಿಂತು ಗಂಗೆಯನ್ನು ಕಂಡಿದ್ದೆ. ಗಂಗೋತ್ರಿಯಲ್ಲಿ ಸ್ಫಟಿಕದ ಹಾಗೆ ಕಾಣುವ ಭಾಗೀರಥಿಯು ವಾರಣಾಸಿಯಲ್ಲಿ ಕೊಳೆತ ಹೆಣಗಳನ್ನು ಒಡಲಿಗೆ ಸೇರಿಸಿಕೊಂಡ ಗಂಗಾವಾಯಿಯಾಗಿ, ಕೊನೆಗೆ ಕಡಲನ್ನು ಸೇರುವಾಗ ಪೂರ್ಣ ಮಲಿನಗೊಂಡ ಬಗೆಯು ನನ್ನಲ್ಲಿ ತೀವ್ರವಾದ ವಿಷಾದವನ್ನು ಹುಟ್ಟಿಸಿದರೂ ಗಂಗೆಯ ಮೇಲಿನ ಮೋಹ ಮಾತ್ರ ಕಡಿಮೆಯಾಗಲಿಲ್ಲ. ಕೋಟ್ಯಂತರ ಜನರ ಬದುಕಿಗೆ ಆಧಾರವಾದ ಈ ಗಂಗೆಯು ಇಂದು ಕೇವಲ ಒಂದು ನದಿಯಾಗಿ ಮಾತ್ರ ಉಳಿದಿಲ್ಲ. ಅದು ಬಹುತೇಕ ಭಾರತೀಯರ ಶ್ರದ್ಧಾ ಕೇಂದ್ರ. ಗಂಗೆಯಲ್ಲಿ ಮಿಂದರೆ ಎಲ್ಲಾ ಪಾಪಗಳೂ ಪರಿಹಾರವಾಗುತ್ತವೆ, ಸಾವು ಬದುಕಿನ ಆವರ್ತನಗಳಿಂದ ಶಾಶ್ವತವಾಗಿ ಬಿಡುಗಡೆ ದೊರೆಯುತ್ತದೆ ಎಂದೆಲ್ಲಾ ಹಲವರು ನಂಬಿದ್ದಾರೆ. ಗಂಗಾ ನದಿಯ ನೀರನ್ನು ತಲೆಯಲ್ಲಿ ಹೊತ್ತು ಮನೆಗಳಿಗೆ ಸಾಗಿಸುವ, ತಮ್ಮ ಊರಿನ ಹೊಳೆ ಬದಿಯಲ್ಲಿ ಕುಳಿತು 'ಗಂಗಾ ಪೂಜೆ' ಮಾಡುವ, ಸತ್ತು ಹೋದ ಹಿರಿಯರಿಗೆ ಗಂಗಾಜಲದ ಮೂಲಕ ಸದ್ಗತಿ ಒದಗಿಸಿಕೊಡುವ, ಉರಿಯುವ ದೀಪವನ್ನು ಹರಿಯುವ ಗಂಗೆಯಲ್ಲಿ ತೇಲಿಬಿಡುವ, ಕೋಟ್ಯಂತರ ಜನರು ಇಂದು ದೇಶದಾದ್ಯಂತ ಕಾಣಸಿಗುತ್ತಾರೆ. ಈ ಅರ್ಥದಲ್ಲಿ ಗಂಗಾ ನದಿಯು ಭಾರತೀಯರನ್ನು ಒಂದು ಸೂತ್ರದಲ್ಲಿ ಬಂಧಿಸಿಟ್ಟ ಮಹಾಕಾವ್ಯ ಜಗತ್ತಿನ ಬೇರಾವ ನದಿಗಳಿಗೂ ಇಂಥ ಶಕ್ತಿ ಒದಗಿಲ್ಲ.

ಗಂಗೆ ಹೇಗೆ ಹುಟ್ಟಿದಳು ಎಂಬ ಬಗೆಗೆ ಹಿಂದೂ ಪುರಾಣಗಳು ಬಗೆಬಗೆಯ ವಿವರಣೆಗಳನ್ನು ನೀಡಿವೆ. ಬ್ರಹ್ಮನ ಕಮಂಡಲುವಿನಿಂದ ಆಕೆ ಹುಟ್ಟಿದಳು, ವಿಷ್ಣುವಿನ ಎಡದ ಪಾದದಿಂದ ಉದಿಸಿದಳು, ಆಕೆ ಹಿಮವತ್ ರಾಜನ ಮಗಳು, ಪಾರ್ವತಿಯ ತಂಗಿ, ಕಾರ್ತಿಕೇಯ, ಗಣಪತಿಯರು ಗಂಗೆಯ ಮಕ್ಕಳು ಎಂದೆಲ್ಲಾ ಹೇಳುವ ಪುರಾಣಗಳಿವೆ. ಈ ಎಲ್ಲಾ ನಿರೂಪಣೆಗಳಲ್ಲಿ ಕಾಣುವ ಒಂದು ಸಮಾನ ಅಂಶವೆಂದರೆ ಆಕೆ ಭೂಲೋಕದವಳಲ್ಲ, ಬದಲು ಸ್ವರ್ಗವಾಸಿ.

ಸ್ವರ್ಗವಾಸಿಯಾಗಿರುವ ಗಂಗೆ ಭೂಲೋಕಕ್ಕೆ ಇಳಿದದ್ದು ಯಾಕೆ ಎಂಬುದಕ್ಕೂ ನಮ್ಮವರು ವಿವರಣೆಗಳನ್ನು ನೀಡಿದ್ದಾರೆ. ಇವುಗಳಲ್ಲಿ ಬಹಳ ಜನಪ್ರಿಯವಾದದ್ದೆಂದರೆ ಭಗೀರಥನ ಕತೆ. ಸಗರ ಪುತ್ರರನ್ನು ಕಪಿಲಮುನಿ ಭಸ್ಮ ಮಾಡಿದಾಗ, ಅವರಿಗೆ ದೇವಲೋಕದಲ್ಲಿ ಶಾಶ್ವತ ಸ್ಥಾನ ಕಲ್ಪಿಸಿಕೊಡಲು, ದಿಲೀಪನ ಮಗನಾದ ಭಗೀರಥನು ಘೋರ ತಪಸ್ಸು ಮಾಡಿ ಗಂಗೆಯು ಭೂಮಿಯ ಮೇಲೆ ಹರಿಯುವಂತೆ ಮಾಡುತ್ತಾನೆ. ಆ ಕಾಲದಲ್ಲಿ ಬಹಳ ಅಹಂಕಾರಿಯಾಗಿದ್ದ ಗಂಗೆಯನ್ನು ತನ್ನ ಜಡೆಯಲ್ಲಿ ಬಂಧಿಸಿದ ಶಿವನು ಗಂಗೆಯ ಕೊಬ್ಬನ್ನು ಮುರಿಯುತ್ತಾನೆ. ಮುಂದೆ ಜಹ್ನು ಮಹರ್ಷಿ ಕೂಡಾ ಆಕೆಯನ್ನು ಉದರದಲ್ಲಿ ಬಂಧಿಸಿ, ಕಿವಿಯ ಮೂಲಕ ಹೊರಬಿಡುವುದರ ಮೂಲಕ ಆಕೆಯ ದರ್ಪಕ್ಕೆ ಪೆಟ್ಟು ನೀಡುತ್ತಾನೆ. ಸ್ವರ್ಗ, ಭೂಮಿ, ಮತ್ತು ಪಾತಾಳಗಳಲ್ಲಿ ಆಕೆ ಹರಿದುದರಿಂದ ಆಕೆ 'ತ್ರಿಪಥಗ', ಭಗೀರಥನಿಂದಾಗಿ ಭೂಮಿಗೆ ಬಂದುದರಿಂದ ಭಾಗೀರಥಿ, ಜಹ್ನು ಮುನಿಯ ಕಿವಿಯಿಂದ ಹೊರಬಂದುದರಿಂದ ಜಾಹ್ನವಿ. ಸರಸ್ವತಿ ನದಿಯು ಬತ್ತಿದ ಹಾಗೆ ಕಲಿಯುಗಾಂತ್ಯದಲ್ಲಿ ಗಂಗೆಯೂ ಬತ್ತುತ್ತಾಳೆ ಎಂಬ ನಂಬಿಕೆಯೂ ಕೆಲವರಲ್ಲಿದೆ.

ಹೀಗೆ ಆರಂಭಿಕ ಹಂತದಲ್ಲಿ ದರ್ಪದ ಹೆಣ್ಣಾಗಿ ಕಾಣಿಸಿಕೊಂಡ ಗಂಗೆಯು ಮುಂದಿನ ಪುರಾಣ-ಮಹಾ ಕಾವ್ಯಗಳಲ್ಲಿ ಪ್ರೇಮಿಯೂ ಕಾಮಿನಿಯೂ ಆಗಿ ಕಾಣಿಸಿಕೊಂಡಿರುವುದು ಕುತೂಹಲಕರ. ದೇವಲೋಕದಲ್ಲಿ ಬ್ರಹ್ಮಾದಿಗಳು ನೆರೆದಿದ್ದಾಗಲೇ ಆಕೆಯ ಸೆರಗು ಗಾಳಿಗೆ ಹಾರುತ್ತದೆ. ಆಗ ಮಹಾಭಿಷ ಆಕೆಗೆ ಮರುಳಾಗುತ್ತಾನೆ. ಪರಿಣಾಮವಾಗಿ ಇಬ್ಬರೂ ಭೂಲೋಕದಲ್ಲಿ ಜನಿಸಬೇಕಾಗುತ್ತದೆ. ಭೂಲೋಕದಲ್ಲಿ ಆಕೆ ಮದುವೆಯಾಗಬೇಕಾದದ್ದು ಚಂದ್ರವಂಶದ ಶಂತನುವನ್ನು, ಆದರೆ ಶಂತನುವಿನ ತಂದೆ ಪ್ರತೀಪ ಮಹಾರಾಜನಿಗೆ ಮರುಳಾಗುವ ಆಕೆ ಆತನ ಎಡದ ತೊಡೆಯೇರುತ್ತಾಳೆ. 'ಎಡದ ತೊಡೆಯೇರಿದವಳು ಮಗಳಿಗೆ ಸಮಾನ' ಎಂದು ಹೇಳಿದ ಪ್ರತೀಪನು ಆಕೆಯ ಆಹ್ವಾನವನ್ನು ತಿರಸ್ಕರಿಸುತ್ತಾನೆ. ಮುಂದೆ ಆಕೆ ಪ್ರತೀಪನ ಮಗನಾದ ಶಂತನುವನ್ನು ಮದುವೆಯಾಗುತ್ತಾಳೆ. ಎಂಟು ಮಕ್ಕಳನ್ನು ಹೆರುವ ಆಕೆ ಮೊದಲ ಏಳು ಮಕ್ಕಳನ್ನು ಸಾಯಿಸಿ, ಕೊನೆಯವನಾದ ದೇವವ್ರತನನ್ನು ಶಂತನುವಿನ ಕೈಗಿತ್ತು ಮತ್ತೆ ದೇವಲೋಕಕ್ಕೆ ಹಿಂತಿರುಗುತ್ತಾಳೆ. ಆದರೆ ಭೀಷ್ಮನ ಬಗೆಗಣ ಕಾಳಜಿಯನ್ನು ಆಕೆ ಎಂದೂ ಬಿಟ್ಟುಕೊಡುವುದಿಲ್ಲ. ಅಂಬೆಯ ಕಾರಣವಾಗಿ ಭೀಷ್ಮ-ಪರಶುರಾಮರ ನಡುವೆ ಯುದ್ಧ ನಡೆದಾಗ ಆಕೆ ಭೀಷ್ಮನಿಗೆ ದರ್ಶನವೀಯುತ್ತಾಳೆ. ಭೀಷ್ಮನ ಮರಣಕ್ಕೆ ಆಕೆ ರೋಧಿಸಿ, ಅರ್ಜುನನಿಗೆ ಶಾಪವಿತ್ತಾಗ, ಕೃಷ್ಣನೇ ಆಕೆಯನ್ನು ಸಮಾಧಾನ ಪಡಿಸಬೇಕಾಗುತ್ತದೆ. ಸೋಮ (ಅಮೃತ) ಪಾನದೊಂದಿಗೆ ತನ್ನನ್ನು ಗುರುತಿಸಿಕೊಂಡಿರುವ ಗಂಗೆಯು ಸೋಮ ವಂಶ (ಚಂದ್ರ ವಂಶ) ದವರನ್ನು ಮದುವೆಯಾಗುವುದು ತರ್ಕ ಬದ್ಧವಾಗಿದೆ. ಹೀಗೆ ಅಹಂಕಾರಿ, ಪ್ರೇಮಿ ಮತ್ತು ತಾಯಿಯಾಗಿ ಗಂಗೆಯು ನಮ್ಮ ಪುರಾಣಗಳಲ್ಲಿ ಕಾಣಿಸಿಕೊಂಡಿದ್ದಾಳೆ. ಹಿಮಾಲಯದಿಂದ ಧುಮ್ಮಿಕ್ಕಿ ಕೆಳಗಿಳಿಯುವಾಗ ಕಾಣುವ ಆಕೆಯ ದರ್ಪ, ಜನರ ಪುರೋಭಿವೃದ್ಧಿಗೆ ಮತ್ತು ಫಲವಂತಿಕೆಗೆ ಕಾರಣವಾದ ಆಕೆಯ ಪ್ರೇಮ, ಹಾಗೂ ಜನರನ್ನು ನಿರಂತರವಾಗಿ ಸಂತೈಸಿದ ಆಕೆಯ ತಾಯ್ತನಗಳನ್ನು ಪುರಾಣಗಳು ಸಾಂಕೇತಿಕವಾಗಿ ಹಿಡಿದಿಟ್ಟಂತಿವೆ.

ಪುರಾಣಗಳಿಂದ ಇತಿಹಾಸದ ಕಡೆಗೆ ಬಂದರೆ, ಗಂಗೆ ಇನ್ನೂ ಉಜ್ವಲವಾಗಿ ಕಾಣುತ್ತಾಳೆ. ಕ್ರಿಸ್ತ ಶಕಪೂರ್ವ 1900-1300 ರ ನಡುವೆ ಕ್ರಿಯಾಶೀಲವಾಗಿದ್ದ ಹರಪ್ಪಾ ಸಂಸ್ಕೃತಿಯ ಕಾಲಕ್ಕಾಗಲೇ ಗಂಗಾ ಯಮುನಾ ನದಿಗಳ ನಡುವಣ ಅತ್ಯಂತ ಫಲವತ್ತಾದ ಭೂ ಪ್ರದೇಶದಲ್ಲಿ ( ದೋ ಅಬ್) ಜನಸಂಸ್ಕೃತಿ ಕಾಣಿಸಿಕೊಂಡಿತ್ತು ಎನ್ನಲಾಗಿದೆ. ಮುಂದೆ ಹರಪ್ಪಾ ಸಂಸ್ಕೃತಿ ನಾಶವಾದಾಗ ಗಂಗಾ-ಯಮುನಾ ನದಿ ಕೇಂದ್ರಿತ ಸಂಸ್ಕೃತಿಯು ಜನಪ್ರಿಯವಾಯಿತು. ಈ ಕಾಲದಲ್ಲಿಯೇ ಗಂಗೆಯನ್ನು ಮೂರ್ತಿ ಶಿಲ್ಪಗಳಲ್ಲಿ ಕಂಡರಿಸುವ ಕೆಲಸ ಆರಂಭವಾಯಿತು.

ಗಂಗಾ-ಯಮುನಾ ನದಿಗಳ ನಡುವಣ ಅತ್ಯಂತ ಫಲವತ್ತಾದ ಭೂಮಿಯಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದ ಗುಪ್ತರಿಗೆ ಗಂಗೆ ಮತ್ತು ಯಮುನೆಯರನ್ನು ದೇವತೆಯರ ಹಂತಕ್ಕೇರಿಸುವುದು ಅನಿವಾರ್ಯವೂ ಆಗಿತ್ತು, ಸಾಮ್ರಾಜ್ಯದ ಉಳಿವಿನ ದೃಷ್ಟಿಯಿಂದ ಅಗತ್ಯವೂ ಆಗಿತ್ತು. ಆದರೆ ಗುಪ್ತರು ಕಂಡರಿಸಿದ ಗಂಗೆಯ ಸ್ವರೂಪವಾದರೂ ಹೇಗಿತ್ತು? ಕೈಯಲ್ಲಿ ನೀರಿನ ಕುಂಭ ಮತ್ತು ಇನ್ನೊಂದು ಕೈಯಲ್ಲಿ ಧಾನ್ಯಗಳನ್ನು ಹಿಡಿದ ಆಕೆ ಫಲವಂತಿಕೆಯ ಸಂಕೇತವಾಗಿದ್ದಳು ( ಚಿತ್ರ ನೋಡಿ). ಇದು ಇಂದಿಗೂ ಭಾರತದ ಹಳ್ಳಿಗಳಲ್ಲಿ ಕಾಣುವ ಸಾಮಾನ್ಯ ಮಹಿಳೆಯ ಚಿತ್ರ. ಗಂಗೆಯು ಕೈಯಲ್ಲಿ ಹಿಡಿದ ಕುಂಭವು ಇಂದು ಕುಂಭ ಮೇಳವಾಗಿ ಹರಿದ್ವಾರದಲ್ಲಿ ಕಾಣಿಸಿಕೊಳ್ಳುತ್ತಿರುವ ರೀತಿ ಅನುಪಮವಾದುದು. ಗುಪ್ತರ ಕಾಲದ ಆನಂತರ ಆಕೆಯ ದೈವಿಕ ಶಕ್ತಿ ಹೆಚ್ಚಾಗುತ್ತಲೇ ಹೋಯಿತು. ಗಂಗಾ ಯಮುನೆಯರನ್ನು ದೇವಸ್ಥಾನಗಳ ಬಾಗಿಲುಗಳ ಎಡ-ಬಲಗಳಲ್ಲಿ ಸ್ಥಾಪಿಸಲಾಯಿತು. ಆನೆಯ ಸೊಂಡಿಲಿನಂಥ ಮೂಗಿರುವ ಮೊಸಳೆಯನ್ನು ವಾಹನವಾಗುಳ್ಳ ಗಂಗೆಯು ( ಮಕರವಾಹನೆ) ದೇವಳಗಳ ಪ್ರವೇಶ ದ್ವಾರದ ಎಡ ಭಾಗದಲ್ಲಿಯೂ, ಆಮೆಯ ಮೇಲೆ ನಿಂತಿರುವ ಯಮುನೆಯು ( ಕೂರ್ಮವಾಹನೆ) ಬಾಗಿಲಿನ ಬಲಭಾಗದಲ್ಲಿಯೂ ಕಾಣಿಸಿಕೊಂಡರು. ಮುಖ್ಯ ದೇವರನ್ನು ನೋಡಲು ಹೋಗುವ ಭಕ್ತರ ಮೈಲಿಗೆ ಕಳೆಯುವುದು ಇವರ ಕೆಲಸ.

ಕಾಲಾಂತರದಲ್ಲಿ ಗಂಗೆಯ ಕುರಿತಾದ ಪುರಾಣಗಳ ಕೆಲವು ಭಾಗಗಳೆಲ್ಲ ಅದ್ಭುತವಾದ ರೀತಿಯಲ್ಲಿ ಭಾರತೀಯ ಶಿಲ್ಪಗಳಲ್ಲಿ ಅನಾವರಣಗೊಂಡವು. ಭಗೀರಥನ ತಪಸ್ಸು ಮಹಾಬಲಿಪುರಂನ ಬಂಡೆಗಳಲ್ಲಿ ಜೀವ ಪಡೆದ ಬಗೆ, ಶಿವನ ಜಡೆಯಿಂದ ಹೊರಬರುವ ಗಂಗೆಯನ್ನು ಎಲ್ಲೋರದಲ್ಲಿ ಶಿಲ್ಪಿಗಳು ಕಡೆದ ರೀತಿ, ಯಕ್ಷಗಾನ ಕಲಾವಿದರು ಗಂಗೆಯನ್ನು ರಂಗದಲ್ಲಿ ಕುಣಿಸಿದ ಬಗೆ, ಬೇಂದ್ರೆಯವರು ಗಂಗೆಯನ್ನು ಭೂಮಿಗೆ ಕರೆದ ರೀತಿ ಮೊದಲಾದುವುಗಳೆಲ್ಲ ಶತಮಾನಗಳ ಚರಿತ್ರೆಯನ್ನು ನಮ್ಮೆದುರು ತಂದು ನಿಲ್ಲಿಸುವಷ್ಟು ಸಶಕ್ತವಾಗಿವೆ.

❍ ಡಾ.ಪುರುಷೋತ್ತಮ ಬಿಳಿಮಲೆ

# ಮಂಡೇಲ ಮಾನವ ಮಹಾಕಾವ್ಯ



ನೆಲ್ಸನ್ ಮಂಡೇಲ ಅವರ ಚರಿತ್ರೆಯೆಂದರೆ ದಕ್ಷಿಣ ಆಫ್ರಿಕಾದ ಕಪ್ಪುಜನರ ಸ್ವಾತಂತ್ರ್ಯಗಾಥೆ. ಅವರೆಂದರೆ ದಕ್ಷಿಣ ಆಫ್ರಿಕನ್ನರಿಗೆ ಮಾತ್ರವಲ್ಲ ಇಡೀ ಜಗತ್ತಿನ ಎಲ್ಲ ಸ್ವಾತಂತ್ರ್ಯಾಕಾಂಕ್ಷಿಗಳಿಗೂ, ಮಾನವ ಸಮಾನತೆಯನ್ನು ಬಯಸುವವರೆಲ್ಲರಿಗೂ ಸ್ಫೂರ್ತಿಯ ಸೆಲೆ. ಸರ್ವರಿಗೂ ಸಮಾನ ಅವಕಾಶವಿರುವ ಸಮಾಜದ ಕನಸು ಕಂಡ ಹಾಗೂ ಅದಕ್ಕಾಗಿ ಸಾಯಲೂ ಸಿದ್ಧ ಎಂದು ಘೋಷಿಸಿಕೊಂಡ ನೆಲ್ಸನ್ ಮಂಡೇಲ, ಗಾಂಧೀಜಿ, ಮಾರ್ಟಿನ್ ಲೂಥರ್ ಕಿಂಗ್ ಅವರ ಸಾಲಿನಲ್ಲಿ ನಿಲ್ಲಬಹುದಾದ ವ್ಯಕ್ತಿತ್ವ. ಆ ಮಹಾನ್ ಚೇತನದ ಕುರಿತು ಒಂದು ಮೆಲುಕು.

ಇಪ್ಪತ್ತೇಳು ವರ್ಷಗಳ 'ಬಿಳಿಬಂಧನ' ಅನುಭವಿಸಿ ದಿನಾಂಕ 11.2.1990ರಂದು ಬಿಡುಗಡೆಯಾಗಿ 'ಭಾರತ ರತ್ನ' ಗೌರವಕ್ಕೆ ಪಾತ್ರರಾದ 'ಕಪ್ಪುಕಂಡ' ಮಂಡೇಲ ಅವರು ಮಾನವ ಸಂಕಲ್ಪ ಶಕ್ತಿಯ ಪ್ರತೀಕ. ಒಬ್ಬ ಮನುಷ್ಯ ಇಪ್ಪತ್ತೇಳು ವರ್ಷಗಳ ಕಾಲ ಸೆರೆವಾಸದಲ್ಲಿದ್ದೂ ಬದುಕಿ ಬರುವುದೆಂದರೆ ಅದು ಅಸಾಮಾನ್ಯ ಘಟನೆಯೆಂದೇ ನನ್ನ ಭಾವನೆ. ಸೆರೆಮನೆಯ ಸರಳುಗಳ ಹಿಂದೆ ಕಪ್ಪು ಜನರ ಸ್ವಾತಂತ್ರ್ಯದ ನಿರೀಕ್ಷೆಯಲ್ಲಿ, ಸಮಾನತೆಯ ಕನಸಿನಲ್ಲಿ, ಕಾಲವನ್ನು ಮತ್ತು ಕಾಲನನ್ನು ತಳ್ಳಿ ಹೊರಬಂದ ಮಂಡೇಲ ಒಬ್ಬ ಮಹಾಮಾನವ. ಅಷ್ಟು ವರ್ಷಗಳ ಜೈಲುವಾಸ ಒಬ್ಬ ವ್ಯಕ್ತಿಯನ್ನು ಹುಚ್ಚನನ್ನಾಗಿಸಬಹುದು, ಆತ್ಮಹತ್ಯೆಗೆ ಪ್ರೇರೇಪಿಸಬಹುದು, ಸಿನಿಕತೆಯನ್ನು ಬೆಳೆಸಬಹುದು, ಅಸಹಾಯಕತೆಯ ಆಳಕ್ಕೆ ಕೊಂಡೊಯ್ಯಬಹುದು. ಇಲ್ಲ, ಮಂಡೇಲ ಅವರಿಗೆ ಇದೇನೂ ಆಗಲಿಲ್ಲ. ಅವರು ನಂಬಿದ ಹೋರಾಟದ ಬದ್ಧತೆ ಅವರನ್ನುಳಿಸಿತು. ಜೈಲಿನಿಂದ ಹೊರಬಂದಾಗ, ಹಿಂದಿದ್ದ ಸೈದ್ಧಾಂತಿಕ ಸ್ಥೈರ್ಯ ಮತ್ತು ಸಮಚಿತ್ತತೆ ಹಾಗೇ ಉಳಿದಿತ್ತು. ಮತ್ತಷ್ಟು ದೃಢವಾಗಿತ್ತು. ನೆಲ್ಸನ್ ಮಂಡೇಲ ಅವರು 1964ರಲ್ಲಿ ಜೋಹಾನ್ಸ್ ಬರ್ಗ್‌ನ ನ್ಯಾಯಾಲಯದ ಕಟಕಟೆಯಲ್ಲಿ ನಿಂತು ಹೀಗೆ ನುಡಿದಿದ್ದರು: 'ಆಫ್ರಿಕಾದ ಜನತೆಯ ಹೋರಾಟಕ್ಕಾಗಿ ನನ್ನ ಜೀವನವನ್ನು ಮೊದಲಿನಿಂದಲೂ ಮುಡುಪಾಗಿಟ್ಟಿದ್ದೇನೆ. ನಾನು ಬಿಳಿಯರ ಪ್ರಾಬಲ್ಯದ ವಿರುದ್ಧವೂ ಹೋರಾಡಿದ್ದೇನೆ. ಸರ್ವರೂ ಸಮಾನ ಅವಕಾಶಗಳೊಂದಿಗೆ ಬದುಕುವಂಥ ಪ್ರಜಾಪ್ರಭುತ್ವ ಮತ್ತು ಸಮಾಜದ ಆದರ್ಶಗಳಿಗಾಗಿ ಶ್ರಮಿಸಿದ್ದೇನೆ. ಈ ಆದರ್ಶಗಳಿಗಾಗಿ ಸಾಯಲೂ ಸಿದ್ಧನಿದ್ದೇನೆ.'

- ಪ್ರಪಂಚವನ್ನು ಬದಲಿಸಬಲ್ಲ ಪ್ರಬಲ ಅಸ್ತ್ರವೆಂದರೆ ಅದು ಶಿಕ್ಷಣ.
- ಧೈರ್ಯ ಎಂದರೆ ಭಯ ಇಲ್ಲದಿರುವುದು ಅಲ್ಲ; ಭಯವನ್ನು ಗೆದ್ದ ಸ್ಥಿತಿ ಅದು.
- ಧೈರ್ಯಶಾಲಿಗೆ ಭಯವೇ ಇಲ್ಲ ಎಂದಲ್ಲ; ಅವನು ಅದನ್ನು ಗೆದ್ದಿರುತ್ತಾನೆ.
- ಮಾನವ ಹಕ್ಕುಗಳ ನಿರಾಕರಣೆ ಎಂದರೆ ಅದು ಮಾನವೀಯತೆಯ ನಿರಾಕರಣೆಯೆಂದೇ ಅರ್ಥ.
- ನೀರು ಕುದಿಯಲು ಆರಂಭಿಸಿದಾಗ ಬೆಂಕಿಯನ್ನು ನಂದಿಸುವುದು ತಿಳಿಗೇಡಿತನವಾಗುತ್ತದೆ.

**–ನೆಲ್ಸನ್ ಮಂಡೇಲ**

1964ರಷ್ಟು ಹಿಂದೆ ಹೇಳಿದ ಈ ಮಾತುಗಳ ಸೈದ್ಧಾಂತಿಕ ನೆಲೆ ಅವರ ವ್ಯಕ್ತಿತ್ವದ ಮೂರ್ತರೂಪವೇ ಆಯಿತು. 27 ವರ್ಷಗಳ ನಂತರ ಬಿಡುಗಡೆಗೊಂಡು ಬಂದು ಜನರನ್ನು ಉದ್ದೇಶಿಸಿ ಮಾತನಾಡುವಾಗ ಅವರು ಮತ್ತೆ ಅದೇ ಮಾತುಗಳನ್ನು ಹೇಳಿದರು – 'ನಾನು ಬಿಳಿಯರ ಪ್ರಾಬಲ್ಯದ ವಿರುದ್ಧವೂ ಹೋರಾಡಿದ್ದೇನೆ' ಎಂದು ಹೇಳಿದ ಅವರು, ಈ ಹೋರಾಟದ ಬದ್ಧತೆ ಮತ್ತು ಮುಂದುವರಿಕೆಯನ್ನು ಘೋಷಿಸಿದರು. ದಕ್ಷಿಣ ಆಫ್ರಿಕಾದಲ್ಲಿ ಮಂಡೇಲ ಅವರ ಬಿಡುಗಡೆಗಾಗಿ ಮೂರು ವರ್ಷದ ನಂತರ ಅಲ್ಲಿ ಡೆಮಾಕ್ರಟಿಕ್ ಸರ್ಕಾರ ಬರುವವರೆಗೂ ಕಪ್ಪುಜನರು ಭೀಕರ ಬದುಕಿನಿಂದ ಬಿಡುಗಡೆ ಹೊಂದಿರಲಿಲ್ಲ. ಆಗಿನ ಅಲ್ಲಿಯ ಸ್ಥಿತಿ ಹೇಗಿತ್ತೆಂದರೆ ಎಲ್ಲಾ ಕ್ಷೇತ್ರಗಳಲ್ಲೂ ಅಸಮಾನತೆಯನ್ನು ಅನುಭವಿಸುತ್ತಿರುವ ಕರಿಯರು ಗುರುತಿನ ಚೀಟಿಯಿಲ್ಲದೆ ಎಲ್ಲೆಂದರಲ್ಲಿ ಹೋಗುವಂತಿರಲಿಲ್ಲ. ಆ ಕುರಿತು ದಕ್ಷಿಣ ಆಫ್ರಿಕಾದ ಖ್ಯಾತ ಲೇಖಕ ಆಲ್‌ಫ್ರೆಡ್ ಹುಚಿನ್ಸನ್ ಹೀಗೆ ಬರೆದಿದ್ದಾರೆ. – 'ಗುರುತಿನ ಚೀಟಿಯಿಲ್ಲದೆ ಮೂಲೆಯಂಗಡಿಗೆ ಹೋದರೆ ಅದರ ಪರಿಣಾಮ ಜೈಲು. ಸಾರ್ವಜನಿಕ ಕಕ್ಕಸ್ಸಿಗೆ ಹೋಗುವಾಗ ಗುರುತಿನ ಚೀಟಿ ಮರೆತಿದ್ದರೆ–ಜೈಲು. ತಿಂಗಳ ಕೊನೆಯಲ್ಲಿ ಮನೆಯ ಯಜಮಾನ ಗುರುತಿನ ಚೀಟಿಗೆ ಸಹಿ ಮಾಡಲು ಮರೆತರೆ–ಕರಿಯನಿಗೆ ಜೈಲು. ಈ ಹಾಳು ಪರವಾನಗಿಯನ್ನು ಎಲ್ಲಿ ಯಾವಾಗ ಬೇಕಾದರೂ ತೋರಿಸುವಂತೆ ನಿರ್ಬಂಧ ಮಾಡಬಹುದು. ಮನೆಯಲ್ಲಿ, ರೈಲಿನಲ್ಲಿ, ರಸ್ತೆಯ ಮೂಲೆಯಲ್ಲಿ ಎಲ್ಲಾದರೂ ಸರಿಯೆ, ಬೆಳಗ್ಗೆ, ಮಧ್ಯಾಹ್ನ, ಮಧ್ಯರಾತ್ರಿ– ಹೀಗೆ ಯಾವಾಗಲಾದರೂ ಕೇಳಬಹುದು'. ಈ ಗುರುತಿನ ಚೀಟಿಯನ್ನು ಸದಾ ಜೊತೆಯಲ್ಲಿಟ್ಟುಕೊಳ್ಳಬೇಕೆಂಬ ಕಾನೂನನ್ನು ವಿರೋಧಿಸುತ್ತ, 1964ರಲ್ಲಿ ಮಂಡೇಲ ಅವರು 'ಈ ಹಾಳು ಕಾನೂನು ಗಂಡ–ಹೆಂಡತಿ ಜೊತೆಯಲ್ಲಿರುವುದಕ್ಕೂ ಎಷ್ಟೋ ಸಲ ಅಡ್ಡ ಬಂದು ಸಂಸಾರಗಳನ್ನು ನುಚ್ಚುನೂರು ಮಾಡಿದೆ' ಎಂದಿದ್ದಾರೆ. ಇದರಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ವಿಶ್ವಸಂಸ್ಥೆಯ ದಾಖಲೆಗಳಲ್ಲಿರುವ ದಕ್ಷಿಣ ಆಫ್ರಿಕಾದ ಕಾನೂನಿನ ವಿವರಗಳು ಇಂಥ ಅಮಾನವೀಯ ಸಂದರ್ಭದ ಸಾಕ್ಷ್ಯಗಳಾಗಿವೆ. ಒಂದು ಕಾನೂನಿನ ಪ್ರಕಾರ 72 ಗಂಟೆಗಳಿಗಿಂತ ಹೆಚ್ಚಾಗಿ ತನ್ನ ಪತಿಯೊಡನೆ ಇರಲು ಹೆಂಗಸೊಬ್ಬಳು ತನ್ನ ಉದ್ಯೋಗಪತಿಯ ಅನುಮತಿ ಪಡೆಯಬೇಕಾಗುತ್ತದೆ. ಆಫ್ರಿಕನ್ ಸೇವಕನಿಗೆ ಬಿಳಿಯನೊಬ್ಬ ಅಕ್ಷರಾಭ್ಯಾಸ ಮಾಡಿಸುವುದು ಅಪರಾಧ. ಇಂಥ ಅನೇಕ ಕಾನೂನಿನ ವಿವರಗಳು ವಿಶ್ವಸಂಸ್ಥೆಯ ದಾಖಲೆಗಳಲ್ಲಿವೆ.

ಇಂಥ ಕ್ರೂರ ವ್ಯವಸ್ಥೆಯ ವಿರುದ್ಧ ಹೋರಾಡುವಾಗಲೂ ಮಂಡೇಲ ತನ್ನ ಸಮಚಿತ್ತತೆಯನ್ನು ಕಳೆದುಕೊಳ್ಳಲಿಲ್ಲ. 'ಬಿಳಿಯರ ಶ್ರೇಷ್ಠತೆ ಎನ್ನುವುದು ಸಹಜವಾಗಿ ಕರಿಯರ ನಿಕೃಷ್ಟತೆ ಎಂಬುದನ್ನು ಎತ್ತಿ ಹಿಡಿಯುತ್ತದೆ' ಎಂದು ಹೇಳಿದ ಅವರು 'ಬಿಳಿಯನನ್ನು ಸಮುದ್ರಕ್ಕೆ ನೂಕಿ ಎನ್ನುವುದು ನಮ್ಮ ಧೋರಣೆಯಲ್ಲ – ಬಿಳಿಯರೆಲ್ಲ ಶ್ರೀಮಂತರಾಗಿದ್ದಾರೆ. ಕರಿಯರೆಲ್ಲ ಬಡವರಾಗಿದ್ದಾರೆ ಎಂಬುದಷ್ಟೇ ನಮ್ಮ ಆಕ್ಷೇಪಣೆಯಲ್ಲ. ಬಿಳಿಯರ ಸರ್ಕಾರವು ಈ ವ್ಯವಸ್ಥೆಯನ್ನೇ ಮುಂದುವರಿಸುವಂಥ ಕಾನೂನನ್ನು ರಚಿಸಿದ್ದಾರೆಂಬುದು ನಮ್ಮ ಆಕ್ಷೇಪಣೆಯಾಗಿದೆ' ಎಂದು ವಿವರಿಸಿದ್ದರು. ಈ ಮಾತುಗಳು ಅಸಮಾನತೆಯ ವಿರುದ್ಧ ಹೋರಾಡುವ ಎಲ್ಲರಿಗೂ ಮಾರ್ಗದರ್ಶಕವಾಗಿವೆ. ಶೋಷಣೆಯ ವಿರುದ್ಧದ ಹೋರಾಟವೆಂದರೆ ಸೇಡಿನ ಸೆಣಸಾಟವಲ್ಲ; ವ್ಯವಸ್ಥೆಯ ವಿರುದ್ಧ ಸಮಗ್ರ ಅರಿವಿನ ಸಂಘರ್ಷ. ಶೋಷಿತನನ್ನು ಮೇಲೆ ಕೂಡಿಸಿ, ಶೋಷಕನನ್ನು ಆತನ ಕಾಲ ಬಳಿಯ ಶೋಷಿತನನ್ನಾಗಿಸುವುದು ಸೂಕ್ತ ಸೈದ್ಧಾಂತಿಕ ನೆಲೆಯಲ್ಲ. ಶೋಷಣೆಗೆ ಅವಕಾಶವನ್ನೇ ಕೊಡದ ಸಮಾಜಕ್ಕಾಗಿ ತುಡಿಯುವುದು ಹೋರಾಟದ ಅಂತ:ಸತ್ವ. ಶೋಷಣೆ ಮಾಡುವ ವ್ಯಕ್ತಿಯ ಬದಲು ಶೋಷಣೆಗೆ ಮೂಲವಾದ ವ್ಯವಸ್ಥೆಯ ನಾಶ ನಮ್ಮ ಗುರಿಯಾಗಿರಬೇಕು. ಈ ಗುರಿಗೆ ವ್ಯಕ್ತಿಗಿಂತ ವರ್ಗ–ವ್ಯವಸ್ಥೆ ಮುಖ್ಯ; ಶೋಷಣೆಯ ಸೂಕ್ಷ್ಮಗಳು ಮತ್ತೆ ಮರುಕಳಿಸದಂತೆ ಮಾಡುವುದು ಮುಖ್ಯ. ಈ ತಿಳಿವಳಿಕೆ ನಮ್ಮ ದೇಶದ ಸಂದರ್ಭದಲ್ಲೂ ಔಚಿತ್ಯಪೂರ್ಣವಾದುದು.

ಅಷ್ಟೇ ಅಲ್ಲ, ದಕ್ಷಿಣ ಆಫ್ರಿಕಾದ ಕರಿಯರು ಮತ್ತು ಮಂಡೇಲ ಅವರ ಹೋರಾಟದ ಬಗ್ಗೆ ಬದ್ಧತೆಯಿಂದ ಮಾತನಾಡುವ ನಾವು ಈ ದೇಶದ ಅಸ್ಪೃಶ್ಯತೆ, ಅಸಮಾನತೆ ಮತ್ತು ಅನಕ್ಷರತೆಗಳ ವಿರುದ್ಧ ಅಷ್ಟೇ ಸೈದ್ಧಾಂತಿಕ ಬದ್ಧತೆಯಿಂದ ಕ್ರಿಯಾಶೀಲರಾಗಿರಬೇಕು. ಇಲ್ಲದಿದ್ದರೆ ದೂರದ ಆಫ್ರಿಕನ್ನರ ಪರವಾದ ನಮ್ಮ ಸಂವೇದನೆ ಪೊಳ್ಳಾಗುತ್ತದೆ. ಆಫ್ರಿಕಾದ ಕರಿಯರಲ್ಲಿ ಈಗ ಶೇಕಡ ಮೂವತ್ತೆರಡು ಜನ ಅಕ್ಷರಸ್ಥರಿದ್ದಾರೆ. ನಮ್ಮ ದೇಶದ ಅಕ್ಷರಸ್ಥರ ಸಂಖ್ಯೆ ಅದಕ್ಕಿಂತ ಸ್ವಲ್ಪ ಮಾತ್ರ ಹೆಚ್ಚಾಗಿದೆ. ಆಫ್ರಿಕಾದ ಭೂಮಿಯಲ್ಲಿ ಶೇ.87 ಭಾಗವನ್ನು, ಶೇ.14 ಇರುವ ಬಿಳಿಯರೇ ಅನುಭವಿಸುತ್ತಿದ್ದಾರೆ. ಶೇ.86ಕರಿಯರಿಗೆ ಶೇ.13 ಮಾತ್ರ ಭೂಮಿಯಿದೆ. ಇಂಥ ಅಸಮಾನತೆ ನಮ್ಮಲ್ಲೂ ಇದೆ.

ಆದ್ದರಿಂದ, ಮಂಡೇಲ ಮತ್ತು ಕಪ್ಪು ಜನರ ಹೋರಾಟವು ನಮಗೆ ಸೈದ್ಧಾಂತಿಕತೆ ಮತ್ತು ಸಮಚಿತ್ತತೆಯ ಸ್ಫೂರ್ತಿಯಾಗಬೇಕಾಗಿದೆ. ಸಮಚಿತ್ತ ಸೈದ್ಧಾಂತಿಕತೆ ಮಂಡೇಲ ಅವರ ವ್ಯಕ್ತಿತ್ವದ ಭಾಗವಾಗಿದೆ. 27 ವರ್ಷಗಳ ಜೈಲುವಾಸದ ಬಳಿಕವೂ ಅದೇ ಬದ್ಧತೆ ಮತ್ತು ಹೋರಾಟದ ಹುಮ್ಮಸ್ಸುಗಳನ್ನು ಒಳಗೊಂಡ ಮಂಡೇಲ ಅವರ ಹೋರಾಟದ ಬದುಕು ನಮ್ಮ ಅಪೂರ್ವ ಸಾಹಿತ್ಯ ಕೃತಿಗಳು ಕೊಡುವ ಅಸಾಧಾರಣ ಅನುಭವ ದ್ರವ್ಯದ ನೆಲೆಯಾಗಿದೆ. ಬದುಕಿನ ಬದ್ಧತೆಯಲ್ಲಿ ರೂಪುಗೊಂಡ ಅವರ ವ್ಯಕ್ತಿತ್ವ ಯಾವ ಸಾಹಿತ್ಯ ಕೃತಿಗಾದರೂ ಸರಿಸಾಟಿಯಾಗಬಲ್ಲುದು. ಆದ್ದರಿಂದ ನನಗನ್ನಿಸುತ್ತದೆ, ಮಂಡೇಲ ಒಂದು ಮಾನವ ಮಹಾಕಾವ್ಯ

❍ ಬರಗೂರು ರಾಮಚಂದ್ರಪ್ಪ
ಸಾಹಿತಿ, ಚಿಂತಕ

ಕೃಪೆ: ವಿಜಯ ಕರ್ನಾಟಕ

Delhi Karnataka Sangha's Abhimatha Monthly,
July - 2013, Price Rs.1/- RNI Regn. No. 53405/91, DL-SW-1/4016/13-15
Printout Date : July 8th / 9th, Postal Date :10th / 11th, Total Pages-20

www.puravankara.com
sales@puravankara.com

PURAVANKARA

# VENICE CALLING.

Your last chance to own a Venetian home in Bangalore.




**Purva Venezia,** Yelahanka, Bangalore. 2 & 3 BHK Apts. 1276 to 1614 sq.ft.

Live in Venice, even while you're in Bangalore. Live amidst the finest amenities and ambience - truly international in every sense. Live next door to a 1,600 acres UAS Campus. Live a life that's way above ordinary.

**Call: +91 80 44 55 55 55**

**Puravankara Projects Limited:** 130/1, Ulsoor Road, Bangalore - 560042. Sales office on Ulsoor Road open from 9 am to 6 pm on all days. Purva Venezia is financed by Trustee Partner: IL&FS Trust Company Limited SMS 'Purva Venezia from <your location>' to 90088 90088, and get driving directions on your mobile phone. CREDAI

SANKALP

Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press
C-95, Okhla Industrial Area, Phase-I, New Delhi-110020, Tel: 40520770